ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 13 ಶನಿವಾರ 2026

47

ಸಂಪುಟ: 47 | ಸಂಚಿಕೆ: 58 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

ಡಿ.ಕೆ.ಶಿವಕುಮಾರ್ ಸಂಪುಟಕ್ಕೆ ಮಾಸಾಂತ್ಯದಲ್ಲಿ

18 ಮಂದಿ ಸೇರ್ಪಡೆ!

● ದೆಹಲಿಯಲ್ಲೇ ಪಟ್ಟಿ ತಯಾರಿ ● ಬಹುತೇಕ ಹೊಸಬರಿಗೆ ಅವಕಾಶ

ಬೆಂಗಳೂರು, ಜೂ.12(ಕೆಎಂಶಿ)– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ತಿಂಗಳಾಂತ್ಯಕ್ಕೆ ತಮ್ಮ ಮಂತ್ರಿ ಮಂಡಲ ವಿಸ್ತರಿಸಿ 18 ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲಿದ್ದಾರೆ. ಈ ತಿಂಗಳ 3ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದಾಗ ಶಿವಕುಮಾರ್ ತಮ್ಮ ಜೊತೆ 13 ಮಂದಿಯನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು.

ವಿಧಾನಸಭೆಯ ಸದಸ್ಯರ ಸಂಖ್ಯಾಬಲದ ಆಧಾರದ ಮೇಲೆ ಮುಖ್ಯಮಂತ್ರಿ ಸೇರಿದಂತೆ 34 ಮಂದಿಗೆ ಸಂಪುಟದಲ್ಲಿ ಅವಕಾಶ ಇದೆ. ಈಗಾಗಲೇ 14 ಮಂದಿ ಇದ್ದು, ಇದರೊಂದಿಗೆ ಇನ್ನೂ 18 ಮಂದಿಯನ್ನು ಸೇರ್ಪಡೆಗೊಳಿಸಿ, ಉಳಿದ ಎರಡು ಸ್ಥಾನಗಳನ್ನು ಮುಂದೆ ಭರ್ತಿ ಮಾಡಿಕೊಳ್ಳಲಿದ್ದಾರೆ. ಕಳೆದ ಮೂರು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ಮುಖ್ಯಮಂತ್ರಿ ಅವರು, ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಕೇಂದ್ರದ ಕೆಲವು ಸಚಿವರನ್ನು ಭೇಟಿ ಮಾಡಿ ರಾಜ್ಯದ ಬಾಕಿ ಯೋಜನೆಗಳು ಹಾಗೂ ಅನುದಾನಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ.

ಈ ನಡುವೆ ತೆರೆಮರೆಯಲ್ಲಿ ಕಾಂಗ್ರೆಸ್ ವರಿಷ್ಠರನ್ನು ಭೇಟಿ ಮಾಡಿ, ಸಂಪುಟ ವಿಸ್ತರಣೆ ಹಾಗೂ ಹಾಲಿ ಸಚಿವರ ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ಚರ್ಚೆ ಮಾಡಿದ್ದಾರೆ. ಪಕ್ಷದ ಅಧಿನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅಲ್ಲದೆ, ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರೊಂದಿಗೂ ಸಮಾಲೋಚನೆ ನಡೆಸಿದ್ದಾರೆ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಜೊತೆ ಮುಖಾಮುಖಿ ಚರ್ಚಿಸಿ, ಸಂಪುಟಕ್ಕೆ ಸೇರ್ಪಡೆ ಆಗಲಿರುವವರ ಸಂಭಾವ್ಯ ಪಟ್ಟಿ ಸಿದ್ಧಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ■ 6ನೇ ಪುಟಕ್ಕೆ

ಸಂಭಾವ್ಯ ಸಚಿವರ ಪಟ್ಟಿ

ಬೆಳಗಾವಿಯ ಲಕ್ಷ್ಮಣ ಸವದಿ, ಬಾಗಲಕೋಟೆಯ ವಿಜಯಾನಂದ ಕಾಶಪ್ಪನವರ್, ವಿಜಯಪುರದ ಯಶವಂತರಾಯಗೌಡ ಪಾಟೀಲ್, ಕಲಬುರಗಿಯ ಡಾ.ಅಜಯ್ ಸಿಂಗ್, ಕೊಪ್ಪಳದ ರಾಘವೇಂದ್ರ ಹಿಟ್ನಾಳ್, ಧಾರವಾಡದ ಅಬ್ಬಯ್ಯ ಪ್ರಸಾದ್, ಹಾವೇರಿಯ ಶ್ರೀನಿವಾಸ ಮಾನೆ, ಚಿತ್ರದುರ್ಗದ ಟಿ.ರಘುಮೂರ್ತಿ, ದಾವಣಗೆರೆಯ ಎಸ್.ಎಸ್. ಮಲ್ಲಿಕಾರ್ಜುನ್, ಶಿವಮೊಗ್ಗದ ಮಧುಬಂಗಾರಪ್ಪ, ಚಿಕ್ಕಬಳ್ಳಾಪುರದ ಎಸ್.ಎನ್.ಸುಬ್ಬಾರೆಡ್ಡಿ, ಕೋಲಾರದ ಎಂ.ರೂಪಕಲಾ, ಬೆಂಗಳೂರು ಜಿಲ್ಲೆಯಿಂದ ಜಮೀರ್ ಅಹಮದ್ ಖಾನ್, ಮಂಡ್ಯದ ಪಿ.ಎಂ.ನರೇಂದ್ರಸ್ವಾಮಿ, ಮೈಸೂರಿನ ತನ್ವೀರ್ ಸೇಠ್, ಚಾಮರಾಜನಗರ ಸಿ.ಪುಟ್ಟರಂಗಶೆಟ್ಟಿ.

ರಾಷ್ಟ್ರಪತಿ, ಉಪರಾಷ್ಟ್ರಪತಿ ಭೇಟಿ





ನೀತಿ ಆಯೋಗದ ಸಭೆ ಹಿನ್ನೆಲೆಯಲ್ಲಿ ನವದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ, ಅಭಿನಂದಿಸಿದರು.

ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದ ತಮಿಳುನಾಡು ಸಿಎಂ ಜೋಸೆಫ್ ವಿಜಯ್

ಉಡುಪಿ: ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಇಂದು ಭೇಟಿ ನೀಡಿ, ದೇವಿ ದರ್ಶನದೊಂದಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ.

ವಿಜಯ್ ಅವರಿಗೆ ಹೂಗುಚ್ಛ ನೀಡಿ ಆಡಳಿತ ಮಂಡಳಿಯ ಟ್ರಸ್ಟಿಗಳು ಸ್ವಾಗತ ಕೋರಿದರು. ಮಂತ್ರಘೋಷದೊಂದಿಗೆ ಕ್ಷೇತ್ರದೊಳಗೆ ಅರ್ಚಕ ವೃಂದ ಬರಮಾಡಿಕೊಂಡರು. ಶಲ್ಯ ಧರಿಸಿ ಆಗಮಿಸುವ ಮೂಲಕ ಸಿಎಂ ವಿಜಯ್ ದೇವಸ್ಥಾನದ ಶಿಷ್ಟಾಚಾರ ಪಾಲನೆ ಮಾಡಿದರು. ಪ್ರಧಾನ ಅರ್ಚಕ ರಾಮಚಂದ್ರ ಅಡಿಗ ಅವರ ನೇತೃತ್ವದಲ್ಲಿ ಸಂಕಲ್ಪ ಪೂಜೆ ನೆರವೇರಿಸಲಾಯಿತು. ಬಳಿಕ ಸಿಎಂ ವಿಜಯ್ ಸಂಕಲ್ಪ ಪೂಜೆ ಮಾಡಿದರು.

1.6 ಕೆಜಿ ತೂಕದ ಬೆಳ್ಳಿ ಖಡ್ಗ ಅರ್ಪಿಸಿದ ವಿಜಯ್: ಶಕ್ತಿ ದೇವಿಗೆ ರೇಷ್ಮೆ ಸೀರೆ, ಫಲ–ತಾಂಬೂಲ ಅರ್ಪಿಸಿ ವಿಜಯ್ ಸುಮಾರು ಅರ್ಧ ಗಂಟೆಗಳ ಕಾಲ ಪ್ರಾರ್ಥನೆ ಸಲ್ಲಿಸಿದರು. ■ 6ನೇ ಪುಟಕ್ಕೆ

ದೇವಿಗೆ 1.6 ಕೆ.ಜಿಯ ಬೆಳ್ಳಿ ಖಡ್ಗ ಅರ್ಪಣೆ



ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಶುಕ್ರವಾರ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.



ವಿಜಯ್, ದೇವಿಗೆ ನೀಡಿದ ಬೆಳ್ಳಿ ಖಡ್ಗ

ನೀವೇ ಸಿಎಂ ಆಗಿ ಅಂದ್ರೂ ಆಗಲಿಲ್ಲವಲ್ಲ

ಡಾ. ಪರಮೇಶ್ವರ್‌ಗೆ ಕುಮಾರಸ್ವಾಮಿ ಟಾಂಗ್



ಬೆಂಗಳೂರು, ಜೂ.12– ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಕಾಂಗ್ರೆಸ್‌ನ ನಿಷ್ಠಾವಂತ ಹಿರಿಯ ನಾಯಕ ಜಿ.ಪರಮೇಶ್ವರ್ ಅವರಿಗೆ ಸತತ ಪ್ರಯತ್ನದ ಹೊರತಾಗಿಯೂ ಈ ಬಾರಿಯೂ ಸಿಎಂ ಸ್ಥಾನ ಕೈ ತಪ್ಪಿದೆ. ಹೀಗಾಗಿ ಇತ್ತೀಚೆಗೆ ತಮಗೆ ಮೂರು ಬಾರಿ ಸಿಎಂ ಸ್ಥಾನ ಕೈತಪ್ಪಿತು ಎಂದು ಜಿ.ಪರಮೇಶ್ವರ್ ಅವರು ಬೇಸರ ಹೊರ ಹಾಕಿದ್ದರು.

ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ಅವರ ಹೇಳಿಕೆಗೆ ಶುಕ್ರವಾರ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಪರಮೇಶ್ವರ್ ಅವರಿಗೆ ಸಿಎಂ ಸ್ಥಾನ ಕೈತಪ್ಪಲು ಅವರದೇ ಪಕ್ಷದವರಾದ ಕಾಂಗ್ರೆಸ್ಸಿಗರೇ ನೇರ ಕಾರಣ ಎಂದರು. ಈ ಬಗ್ಗೆ ಪರಮೇಶ್ವರ್ ಅವರು ನಮ್ಮನ್ನು ಕೇಳುವ ಬದಲು ಮೊದಲು ■ 6ನೇ ಪುಟಕ್ಕೆ

ಪರಿಷತ್ ಫೈಟ್; ಅಡ್ಡ ಮತದಾನದ ಭೀತಿ

ಕಾಂಗ್ರೆಸ್ ಶಾಸಕರು ರೆಸಾರ್ಟ್ ವಾಸ್ತವ್ಯ

ಬೆಂಗಳೂರು, ಜೂ.12(ಕೆಎಂಶಿ)– ರಾಜ್ಯದಲ್ಲಿ ಮತ್ತೊಮ್ಮೆ ರೆಸಾರ್ಟ್ ರಾಜಕಾರಣ ಆರಂಭವಾಗಲಿದೆ. ಕುತೂಹಲ ಕೆರಳಿಸಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕರಿಂದ ಅಡ್ಡ ಮತದಾನ ತಪ್ಪಿಸುವ ದೃಷ್ಟಿಯಿಂದ ತಮ್ಮ ಪಕ್ಷದ ಎಲ್ಲಾ ಶಾಸಕರನ್ನು ರೆಸಾರ್ಟ್‌ಗೆ ಕರೆದೊಯ್ಯಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತೀರ್ಮಾನಿಸಿದ್ದಾರೆ.

ಜೂನ್ 18ರಂದು ರಾಜ್ಯ ವಿಧಾನ ಸಭೆಯಿಂದ ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ ವಿಧಾನಸಭೆಯಲ್ಲಿ ಹೊಂದಿರುವ ಶಾಸಕರ ಸಂಖ್ಯಾಬಲದ ಆಧಾರದಲ್ಲಿ ಕಾಂಗ್ರೆಸ್ ನಾಲ್ವರು ಸದಸ್ಯರನ್ನು ಸುಲಭವಾಗಿ ಆಯ್ಕೆ ಮಾಡಬಹುದಾಗಿದೆ. ಬಿಜೆಪಿ ಇಬ್ಬರನ್ನು ಆಯ್ಕೆ ಮಾಡಬಹುದಾಗಿದೆ. 18 ಶಾಸಕರನ್ನು ಹೊಂದಿರುವ ಜೆಡಿಎಸ್, ಬಿಜೆಪಿಯ ಹೆಚ್ಚುವರಿ ಮತ್ತು ಕಾಂಗ್ರೆಸ್ಸಿನ ಅತೃಪ್ತ ಶಾಸಕರ ಮತದ ನಿರೀಕ್ಷೆಯೊಂದಿಗೆ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ.

ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ಬಿಜೆಪಿಯ ಅತೃಪ್ತ ಶಾಸಕರು ಮತ್ತು ಜೆಡಿಎಸ್‌ನ ಅತೃಪ್ತ ಶಾಸಕರ ಮತ ಗಳಿಸುವ ವಿಶ್ವಾಸದೊಂದಿಗೆ ಐದನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಚುನಾವಣಾ ಅಖಾಡಕ್ಕೆ ರಂಗು ಬಂದಿದೆ.

ಸದ್ಯ ಕಾಂಗ್ರೆಸ್‌ನಿಂದ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ವಿ.ಕೆ.ಮೋಹನ್, ಶಿವಣ್ಣ ಮಳವಳ್ಳಿ, ತಿಪ್ಪಣ್ಣ ಕಮಕನೂರು ಕಣಕ್ಕಿಳಿದಿದ್ದು ಐದನೇ ಅಭ್ಯರ್ಥಿಯಾಗಿ ಕೆಪಿಸಿಸಿ ಖಜಾಂಚಿ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆಪ್ತ ವಿನಯ್ ಕಾರ್ತಿಕ್ ಕಣಕ್ಕಿಳಿದಿದ್ದಾರೆ.

ಬಿಜೆಪಿಯಿಂದ ರಘು ಕೌಟಿಲ್ಯ ಮತ್ತು ಲಿಂಗರಾಜ ಪಾಟೀಲ್ ಕಣಕ್ಕಿಳಿದರೆ, ಜೆಡಿಎಸ್‌ನಿಂದ ಗೋವಿಂದರಾಜು ಆಯ್ಕೆ ಬಯಸಿ ನಾಮಪತ್ರ ಸಲ್ಲಿಸಿದ್ದಾರೆ. ಡಿ.ಸುಧಾಕರ್ ನಿಧನ, ವಿನಯ್ ಕುಲಕರ್ಣಿ ಶಾಸಕತ್ವ ತೆರವಾಗಿರುವುದರಿಂದ ವಿಧಾನಸಭೆಯಲ್ಲಿ 222 ಸ್ಥಾನಗಳಿವೆ. 7 ಸ್ಥಾನಗಳಿಗೆ 8 ಅಭ್ಯರ್ಥಿಗಳು ■ 6ನೇ ಪುಟಕ್ಕೆ

ಮೈಸೂರು ಮಿತ್ರ

ಅಭಿನಂದನೆ



ಮೈಸೂರಿನಲ್ಲಿ ಶುಕ್ರವಾರ ನಡೆದ 'ಲಲಿತಾಭಿನಂದನ' ಸಮಾರಂಭದ ವೇಳೆ 'ಸಹಕಾರ ಸೇವಾ ರತ್ನ' ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರನ್ನು ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಹೊಸಹುಂಡಿ ಜೆ.ಎನ್.ರವಿ, ಮರಿಗೌಡ, ನಾಗರಾಜು, ಚಂದ್ರು ಮತ್ತಿತರರು ಅಭಿನಂದಿಸಿದರು.

ಸುರಕ್ಷಾ ಪರಿಸರವ ಮುಂದಿನ ಪೀಳಿಗೆಗೆ ನೀಡುವ ಕರ್ತವ್ಯ ನಮ್ಮದು

● ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳ್ ಜಗದೀಶ್ ಸಲಹೆ

● ಜೀವ ವೈವಿಧ್ಯ ನಿರ್ವಹಣೆಗೆ ಜಿಲ್ಲಾ, ತಾಲೂಕು ಮಟ್ಟದಲ್ಲಿ ಬಿಎಂಸಿ ಸಮಿತಿ ರಚನೆಗೆ ಸೂಚನೆ

ಮೈಸೂರು, ಜೂ.12(ಎಂಟಿವೈ)– ನಾವು ಮತ್ತು ನಮ್ಮ ಪೂರ್ವಜರು ಅನುಭವಿಸಿರುವ ಪರಿಸರದ ಸೌಲಭ್ಯವನ್ನು ಮುಂದಿನ ಪೀಳಿಗೆಗೂ ಕೊಡುಗೆ ನೀಡುವುದಕ್ಕಾಗಿ ಎಲ್ಲರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳ್ ಜಗದೀಶ್ ಸಲಹೆ ನೀಡಿದ್ದಾರೆ.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳ್ ಜಗದೀಶ್ ಅವರು 'ಜೀವವೈವಿಧ್ಯ ಸಂರಕ್ಷಣೆ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿ' ಸಭೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ 'ಜೀವವೈವಿಧ್ಯ ಸಂರಕ್ಷಣೆ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿ' ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಪೂರ್ವಜರ ಕಾಲದಲ್ಲಿ ಅತ್ಯುತ್ತಮ ಮತ್ತು ಸ್ವಚ್ಛ ಪರಿಸರವಿತ್ತು. ಲಭ್ಯವಿರುವ ಪರಿಸರವನ್ನು ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ಹಸ್ತಾಂತರಿಸಬೇಕಾದ ಕರ್ತವ್ಯ ನಮ್ಮೆಲ್ಲರದ್ದಾಗಿದೆ. ಜೀವವೈವಿಧ್ಯದ ವ್ಯಾಪ್ತಿ ವಿಶಾಲವಾಗಿದ್ದು, ಅದರಲ್ಲಿರುವ ಪ್ರತಿಯೊಂದು ಅಂಶವೂ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಜೀವ ವೈವಿಧ್ಯ ಎಂದರೆ ಕೇವಲ ಔಷಧೀಯ ಸಸ್ಯಗಳು ಅಥವಾ ಪ್ರಾಣಿಗಳಿಗೆ ಸೀಮಿತವಲ್ಲ. ನಾವು ಉಸಿರಾಡುವ ಗಾಳಿಯಿಂದ ಹಿಡಿದು ಸೇವಿಸುವ ಆಹಾರದವರೆಗೆ ಪ್ರತಿಯೊಂದು ಅಂಶವೂ ಜೀವವೈವಿಧ್ಯದ ವ್ಯಾಪ್ತಿಗೆ ಒಳಪಡುತ್ತದೆ. ಪ್ರಕೃತಿಯಲ್ಲಿನ ಸಸ್ಯ ಮತ್ತು ಪ್ರಾಣಿ ಸಂಕುಲವನ್ನು ನಾಶ ಮಾಡಲು ಯಾರಿಗೂ ಹಕ್ಕಿಲ್ಲ. ಪ್ರಕೃತಿಯ ಮೇಲಿನ ನಮ್ಮ ಅಧಿಕಾರ ಮತ್ತು ಅಗತ್ಯಗಳ ಮಿತಿಯನ್ನು ಅರಿತುಕೊಂಡು ಕಾರ್ಯನಿರ್ವಹಿಸಿದರೆ ಮಾತ್ರ ಪರಿಸರ ಸಮತೋಲನ ಕಾಯ್ದುಕೊಳ್ಳಲು ಸಾಧ್ಯ ಎಂದರು.

ಸಮಿತಿ ರಚಿಸಿ: ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಬಿಎಂಸಿ ಸಮಿತಿಗಳನ್ನು ಕಡ್ಡಾಯ ರಚಿಸಿ, ಆ ಮೂಲಕ ಜೀವವೈವಿಧ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳಬೇಕು. ಇದರಲ್ಲಿ ತಾಪಂ ಇಒಗಳ ಪಾತ್ರ ಅತ್ಯಂತ ಮಹತ್ವದಾಗಿದೆ. ಈ ಸಮಿತಿಯ ಜವಾಬ್ದಾರಿಯನ್ನು ಇಒ ಹೊರಬೇಕು. ಬಿಎಂಸಿ ರಚನೆಯಾಗದಿದ್ದರೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ರಚನೆಯಾಗುವ ಸಮಿತಿಗಳಿಗೆ ಆಯಾ ಪಂಚಾಯತ್ ಅಧ್ಯಕ್ಷರೇ ಅಧ್ಯಕ್ಷರಾಗಿರುತ್ತಾರೆ. ಒಂದು ವೇಳೆ ಅಧ್ಯಕ್ಷರು ಇಲ್ಲದಿದ್ದರೆ, ಪ್ರಸ್ತುತ ಆಡಳಿತ ಅಧಿಕಾರಿಯಾಗಿ ಯಾರು ಇರುತ್ತಾರೋ ಅವರೇ ಸಮಿತಿಯ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ ಮತ್ತು ಪಿಡಿಒಗಳು ಕಾರ್ಯದರ್ಶಿಯಾಗಿರುತ್ತಾರೆ. ಸ್ಥಳೀಯ ಮಟ್ಟದಲ್ಲಿ ಪರಿಸರದ ಬಗ್ಗೆ ಕಾಳಜಿ ಇರುವ, ಆಯುರ್ವೇದ ಕ್ಷೇತ್ರದ ಪರಿಣಿತರು ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು ಒಳಗೊಂಡಂತೆ ಒಟ್ಟು 9 ಜನರನ್ನು ಸ್ಥಳೀಯವಾಗಿ ಆಯ್ಕೆ ಮಾಡಿಕೊಳ್ಳಬೇಕು. ಅರಣ್ಯ ಇಲಾಖೆಯೊಂದಿಗೆ ಸಮನ್ವಯತೆ ಕಾಪಾಡಿಕೊಳ್ಳಬೇಕು. ಈ ಸಮಿತಿಯಲ್ಲಿರುವ 11 ಜನರಲ್ಲಿ 9 ಜನ ಸದಸ್ಯರು ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೆಲಸ ಮಾಡಬೇಕಾಗುತ್ತದೆ. ಬಿಎಂಸಿ ಸದಸ್ಯರು ಅರಣ್ಯ ಇಲಾಖೆಯ ಸಹಾಯ, ಸಹಕಾರ ಪಡೆದು, ಕಾಡಿನಲ್ಲಿ ನಡೆಯುವ ಕಳ್ಳಸಾಗಣೆಗಳ ಬಗ್ಗೆ ಇಲಾಖೆಗೆ ಮಾಹಿತಿ ನೀಡುವ ಮೂಲಕ ನೆರವಾಗಬೇಕು ಎಂದು ಹೇಳಿದರು.

ಪಾರಂಪರಿಕ ಜ್ಞಾನ ಭಂಡಾರವೇ ಇದೆ: ಇದೇ ವೇಳೆ ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಮಾತನಾಡಿ, ಪುರಾತನ ದೇಶವಾಗಿರುವ ಭಾರತದಲ್ಲಿ ಮಾನವ ಇತಿಹಾಸ ಸಾವಿರಾರು ವರ್ಷಗಳದ್ದು. ಪೂರ್ವಜರ ಕಾಲದ ಸಸ್ಯ ಮತ್ತು ಪ್ರಾಣಿ ಸಂಕುಲಗಳನ್ನೊಳಗೊಂಡ ಜೀವವೈವಿಧ್ಯತೆಗೆ ಇತಿಹಾಸವಿದೆ. ಗ್ರಾಮೀಣ ಪ್ರದೇಶದ ಅಜ್ಜ, ಅಜ್ಜಿಯರ ಮನೆಗಳಲ್ಲಿ ಮನೆಮದ್ದುಗಳ ದೊಡ್ಡ ಜ್ಞಾನದ ಭಂಡಾರವೇ ಕಂಡು ಬರುತ್ತಿತ್ತು. ಆ ಮದ್ದುಗಳ ವೈಜ್ಞಾನಿಕ ಹಿನ್ನೆಲೆ ನಮಗೆ ತಕ್ಷಣಕ್ಕೆ ತಿಳಿಯದಿದ್ದರೂ, ಅವು ಯಾವುದೇ ಅಡ್ಡಪರಿಣಾಮಗಳಿಲ್ಲದೆ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದವು. ಇಂತಹ ಪಾರಂಪರಿಕ ಜ್ಞಾನವನ್ನು ದಾಖಲಿಸಿ, ಬಯೋಡೈವರ್ಸಿಟಿ ಕಾಯ್ದೆಯಡಿ ಅಕೌಂಟಿಂಗ್ ಮಾಡಿ, ಅದರ ಅನುಕೂಲವನ್ನು ಎಲ್ಲರಿಗೂ ಮಾಡಿಕೊಡುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಆಂಟಿ–ಮೈಕ್ರೋಬಿಯಲ್ ರೆಸಿಸ್ಟೆನ್ಸ್ ಹೆಚ್ಚಾಗುತ್ತಿರುವಾಗ, ಈ ಜೀವವೈವಿಧ್ಯ ಸಂಪತ್ತು ನಮಗೆ ದಿಕ್ಸೂಚಿಯಾಗಿ ನಮ್ಮ ಕೈಹಿಡಿಯಲಿದೆ. ಇಂದಿನ ಪರಿಸರವನ್ನು ನಾವು ರಕ್ಷಿಸಿದರೆ, ಮುಂದಿನ ಪೀಳಿಗೆಗೆ ದೊಡ್ಡ ಬಳುವಳಿಯಾಗಿ ನೀಡುವುದು ನಮ್ಮೆಲ್ಲರ ಕರ್ತವ್ಯ ಎಂದು ಅಭಿಪ್ರಾಯಪಟ್ಟರು.

ನಮ್ಮ ಔಷಧೀಯ ಸಂಪತ್ತು ಹೇರಳವಾಗಿದೆ: ಜೀವವೈವಿಧ್ಯ ಮಂಡಳಿಯ ಸಂಶೋಧಕ ಡಾ. ಪ್ರೀತಮ್ ಮಾತನಾಡಿ, ಜೀವವೈವಿಧ್ಯ ಸಂರಕ್ಷಣೆಗೆ ಎಲ್ಲಾ ಮಟ್ಟದಲ್ಲೂ ಕ್ರಮ ಕೈಗೊಳ್ಳಲು ಜನತಾ ಜೀವವೈವಿಧ್ಯ ದಾಖಲಾತಿ ಸಿದ್ಧಪಡಿಸುವುದು ಮಂಡಳಿಯ ಮುಖ್ಯ ಉದ್ದೇಶವಾಗಿದೆ. ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಂಡು ಬರುವ ಪ್ರಾಣಿ, ಪಕ್ಷಿ, ಗಿಡ–ಮರ ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಹೊಂದಿರುವ ವ್ಯಕ್ತಿಗಳ ಸಂಪೂರ್ಣ ಮಾಹಿತಿಯನ್ನು ಇದು ಒಳಗೊಂಡಿರುತ್ತದೆ. ಗ್ರಾಮೀಣ ಭಾಗದಲ್ಲಿ ವೈದ್ಯರು ಅಥವಾ ವ್ಯಕ್ತಿಗಳು ಸಾಂಪ್ರದಾಯಿಕ ಗಿಡಮೂಲಿಕೆಗಳನ್ನು ಬಳಸಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಔಷಧಿ ಕೊಡುತ್ತಾರೆ ಎಂಬ ಮಾಹಿತಿಯನ್ನು ಕಲೆ ಹಾಕಿ ಈ ರಿಜಿಸ್ಟರ್‌ನಲ್ಲಿ ದಾಖಲಿಸಲಾಗುತ್ತದೆ ಎಂದು ಹೇಳಿದರು.

ಸಭೆಯಲ್ಲಿ ಮೈಸೂರು ಪ್ರಾದೇಶಿಕ ವಿಭಾಗದ ಡಿಸಿಎಫ್ ಕೆ.ಪರಮೇಶ್ ಸೇರಿದಂತೆ ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ಯೋಜನಾ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

> ಕರ್ನಾಟಕ ರಾಜ್ಯವು ಅಪಾರವಾದ ಔಷಧೀಯ ಸಸ್ಯ ಸಂಪತ್ತನ್ನು ಹೊಂದಿದೆ. ವಿಶ್ವದ ಪ್ರಸಿದ್ಧ ಪಶ್ಚಿಮ ಘಟ್ಟಗಳು ಶೇ.40ರಷ್ಟು ಭಾಗ ನಮ್ಮ ರಾಜ್ಯದಲ್ಲಿದೆ. ಇದು ಮಾತ್ರವಲ್ಲದೆ, ಒಣ ಹಾಗೂ ಅರೆ–ಒಣ ಪ್ರದೇಶಗಳಲ್ಲೂ ವಿಶಿಷ್ಟ ಔಷಧೀಯ ಗುಣಗಳಿರುವ ಸಸ್ಯಗಳು ಬೆಳೆಯುತ್ತವೆ. ಕಾಯ್ದೆಯ ಸೆಕ್ಷನ್ 37ರ ಪ್ರಕಾರ, ವಿಶೇಷ ಹಾಗೂ ಅಪರೂಪದ ಜೀವವೈವಿಧ್ಯ ಸಂಪತ್ತನ್ನು ಹೊಂದಿರುವ ಪ್ರದೇಶಗಳನ್ನು 'ಜೀವವೈವಿಧ್ಯ ಪಾರಂಪರಿಕ ತಾಣ'ಗಳು ಎಂದು ಘೋಷಿಸಲಾಗುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ ಈಗಾಗಲೇ 5 ಪಾರಂಪರಿಕ ತಾಣಗಳನ್ನು ಘೋಷಿಸಲಾಗಿದೆ.
>
> – ಡಾ. ಪ್ರೀತಮ್, ಜೀವವೈವಿಧ್ಯ ಮಂಡಳಿಯ ಸಂಶೋಧಕ.

ಇಂದು ಮೈಸೆಮ್ ಕಾಲೇಜಲ್ಲಿ ಪದವೀಧರ ದಿನಾಚರಣೆ

ಮೈಸೂರು, ಜೂ.12(ಜಿಎ)–ಮೈಸೂರಿನ ಮೈಸೆಮ್ ಕಾಲೇಜಿನ ಪದವೀಧರ ದಿನಾಚರಣೆ ಸಮಾರಂಭ ಜೂ.13 ರಂದು ಬೆಳಗ್ಗೆ 11ಕ್ಕೆ ಕಾಲೇಜು ಆವರಣದಲ್ಲಿ ನಡೆಯಲಿದೆ ಎಂದು ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ.ಡಿ.ಸಿ. ಕಾವ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಬಿಇ ವಿಭಾಗದಲ್ಲಿ ಸುಮಾರು 300 ಮಂದಿ ಪರೀಕ್ಷೆಗೆ ಕುಳಿತು ಇವರಲ್ಲಿ 200ಕ್ಕೂ ಹೆಚ್ಚು ಮಂದಿ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ. ಇತರರು ಸಹಾ ಉತ್ತಮ ಅಂಕ ಗಳಿಸಿದ್ದು, ಫಲಿತಾಂಶ ಶೇ. 100 ರಷ್ಟಿದೆ. ಇವರಲ್ಲಿ ಅನೇಕರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಪಡೆದಿದ್ದಾರೆ. ಹೀಗಾಗಿ ಕಾಲೇಜು ಉತ್ತಮ ಸಾಧನೆ ಮಾಡುತ್ತಿದ್ದು, ಅಂದಿನ ಸಮಾರಂಭದಲ್ಲಿ ಉತ್ತಮ ಸಾಧನೆ ಮಾಡಿದವರನ್ನು ಪುರಸ್ಕರಿಸಲಾವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ಬಸವರಾಜ್, ವಿದ್ಯಾಸಾಗರ್, ಪ್ರಭುಸ್ವಾಮಿ ಉಪಸ್ಥಿತರಿದ್ದರು.



ಅಭಿನಂದನೆ

ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಡಿ.ಕೆ. ಶಿವಕುಮಾರ್ ಅವರನ್ನು ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಬೆಂಗಳೂರಿನ ಸದಾಶಿವನಗರದಲ್ಲಿರುವ ಅವರ ನಿವಾಸದಲ್ಲಿ ಭೇಟಿ ಮಾಡಿ,ಅಭಿನಂದಿಸಿದರು.

ಮೈಸೂರಲ್ಲಿ 24 ಕಟ್ಟಡಗಳಿಗೆ ಅಕ್ರಮ ವಿದ್ಯುತ್ ಸಂಪರ್ಕ

ಇಬ್ಬರು ಅಧಿಕಾರಿಗಳ ಮೇಲೆ ಕ್ರಮಕ್ಕೆ ಆಗ್ರಹ

ಮೈಸೂರು, ಜೂ.12(ಜಿಎ)–ನರಸಿಂಹರಾಜ ಮೊಹಲ್ಲಾ ವಿಭಾಗದ ಕಚೇರಿಗೆ ಒಳಪಡುವ ಸೆಸ್ಕ್‌ನ ಇಬ್ಬರು ಅಧಿಕಾರಿಗಳು ನಗರದಲ್ಲಿ ನಿರ್ಮಾಣಗೊಂಡಿರುವ ಸುಮಾರು 24 ಕಟ್ಟಡಗಳಿಗೆ ಕಾನೂನು ಬಾಹಿರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು, ಇವರ ವಿರುದ್ಧ ಸಂಬಂಧಿಸಿದವರು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಭೀಮ್ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಆರ್. ಮಂಜುನಾಥ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಸರ್ವೋಚ್ಚ ನ್ಯಾಯಾಲಯ ಹಾಗೂ ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ಉಲ್ಲಂಘಿಸಿದ್ದು, ವಿದ್ಯುತ್ ಸಂಪರ್ಕ ನೀಡಲು ಲಂಚ ಪಡೆದಿರುವ ಶಂಕೆಯಿದೆ ಎಂದರು.

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಈ ನಡುವೆ ಇಬ್ಬರು ಅಧಿಕಾರಿಗಳು ಇಲಾಖೆಯ ಪೂರ್ವಾನುಮತಿ ಇಲ್ಲದೆಯೇ ವಿದೇಶ ಪ್ರವಾಸವನ್ನೂ ಕೈಗೊಂಡಿದ್ದು, ತಾವು ಅಕ್ರಮವಾಗಿ ಗಳಿಸಿದ ಹಣವನ್ನು ಅಲ್ಲಿ ಹೂಡಿಕೆ ಮಾಡಿರುವ ಸಾಧ್ಯತೆಯಿದೆ. ಹೀಗಾಗಿ ಸಂಬಂಧಿಸಿದವರು ಸೂಕ್ತ ಕ್ರಮ ವಹಿಸಿ, ಇವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ದಿವಾಕರ್ ಸ್ವಾಮಿ, ಮಹದೇವಸ್ವಾಮಿ, ಚಂದ್ರು, ಮಹೇಶ್ ಉಪಸ್ಥಿತರಿದ್ದರು.

ಕೆ.ಹೆಚ್.ಮುನಿಯಪ್ಪರಿಗೆ ಡಿಸಿಎಂ, ಸಮಾಜ ಕಲ್ಯಾಣ ಇಲಾಖೆ ಖಾತೆ ನೀಡಲು ಆಗ್ರಹ

ಮೈಸೂರು, ಜೂ.12(ಜಿಎ)–ಕಾಂಗ್ರೆಸ್‌ನ ಹಿರಿಯ ಮುಖಂಡ ಕೆ.ಎಚ್.ಮುನಿಯಪ್ಪ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಡಿಸಿಎಂ ಸ್ಥಾನ ಕೊಟ್ಟು ಜೊತೆಗೆ ಸಮಾಜ ಕಲ್ಯಾಣ ಇಲಾಖೆ ಖಾತೆ ನೀಡಬೇಕೆಂದು ಭೀಮಸೇನಾ ಜನ ಜಾಗೃತಿ ಮಹಾಸಭಾ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಮುಖಂಡರು ಆಗ್ರಹಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಳಗದ ಅಧ್ಯಕ್ಷ ಹಾಗೂ ವಕೀಲರಾದ ಲಿಂಗರಾಜು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುವುದರಲ್ಲಿ ಮಾದಿಗ ಸಮುದಾಯದ ಪಾತ್ರ ದೊಡ್ಡದಾಗಿದೆ ಎಂದರು. ಕಳೆದ ಹಲವಾರು ದಶಕಗಳಿಂದ ಕಾಂಗ್ರೆಸ್ಸನ್ನೇ ಬೆಂಬಲಿಸುತ್ತ ಬಂದಿದ್ದೇವೆ. ಹೀಗಾಗಿ ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಮುನಿಯಪ್ಪ ಆಹಾರ ನಾಗರಿಕ ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವರಾಗಿದ್ದರು. ಈಗ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದ್ದು, ಕೆ.ಎಚ್.ಮುನಿಯಪ್ಪ ಅವರು ಪಕ್ಷ ಹಾಗೂ ರಾಜ್ಯಕ್ಕೆ ಸಲ್ಲಿಸಿರುವ ಸೇವೆ ಪರಿಗಣಿಸಿ ಡಿಸಿಎಂ ಸ್ಥಾನ ನೀಡಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಕೆ.ಎಚ್. ವೆಂಕಟೇಶ್, ಮಹದೇವಯ್ಯ, ರಾಮು ದುದ್ದಗೆರೆ, ಹೆಚ್.ಸ್ವಾಮಿ ಉಪಸ್ಥಿತರಿದ್ದರು.

ವಿವಾಹ ವಾರ್ಷಿಕೋತ್ಸವ ಶುಭಾಶಯ



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ದಂಪತಿಗೆ ಕ್ಷೇತ್ರದ ಮುಖಂಡ ಆರ್.ಡೆಲ್ಲಿ ರವಿ 29ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯ ಕೋರಿದರು. ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ಗೋಪಿ, ಶಿವಣ್ಣ, ಗಂಗಾ, ಮಹೇಶ್ ಮತ್ತಿತರರಿದ್ದರು.

ನಿಧನ



ಡಾ. ಎಂ.ಬಿ.ಪಶುಪತಿ

ಮೈಸೂರು: ಮೈಸೂರು ಗೋಕುಲಂ ಮೂರನೇ ಹಂತದ ನಿವಾಸಿ, ದಿವಂಗತ ಎಂ.ಬಿ.ಬೊಮ್ಮಯ್ಯನವರ ಜೇಷ್ಠ ಪುತ್ರರಾದ, ನಿವೃತ್ತ ಉಪ ಮುಖ್ಯ ವೈದ್ಯಾಧಿಕಾರಿ ಡಾ. ಎಂ.ಬಿ.ಪಶುಪತಿ(88) ಅವರು ಗುರುವಾರ (ಜೂ.11)ದಂದು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಡಾ. ಚಂದ್ರಮಣಿ ದೇವಿ, ಪುತ್ರರಾದ ಎಂ.ಪಿ.ಹರೀಶ್, ಎಂ.ಪಿ.ನವೀನ್, ಪುತ್ರಿ ಡಾ.ಎಂ.ಪಿ.ಅನಿತಾ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು(ಜೂ.12) ಸಂಜೆ ಮೈಸೂರಿನ ಗೋಕುಲಂನ ಚಿರಶಾಂತಿ ಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಕ್ವಾಂಟಂ ಜಗತ್ತು: ಸಾಮಾನ್ಯ ಅನುಭವದ ಆಚೆ ವಿಶೇಷ ಉಪನ್ಯಾಸ ಕಾರ್ಯಕ್ರಮ

ಮೈಸೂರು, ಜೂ.12– ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ (IIET), ಮೈಸೂರು ವತಿಯಿಂದ ವಿಜ್ಞಾನಾಸಕ್ತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ 'ಕ್ವಾಂಟಂ ಜಗತ್ತು: ಸಾಮಾನ್ಯ ಅನುಭವದ ಆಚೆ' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಜೂ.13 ರಂದು ಐಐಇಟಿಯಲ್ಲಿ ಸಂಜೆ 5 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಕೆ.ಎಸ್. ಮಲ್ಲೇಶ್ ಉಪನ್ಯಾಸ ನೀಡಲಿದ್ದಾರೆ. ಕ್ವಾಂಟಂ ಭೌತಶಾಸ್ತ್ರದ ವಿಸ್ಮಯಕಾರಿ ಹಾಗೂ ಸಾಮಾನ್ಯ ಅನುಭವಕ್ಕೆ ಮೀರಿದ ತತ್ವಗಳನ್ನು ಸರಳವಾಗಿ ಪರಿಚಯಿಸುವುದರೊಂದಿಗೆ, ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಕ್ವಾಂಟಂ ವಿಜ್ಞಾನದ ಪಾತ್ರವನ್ನು ವಿವರಿಸಲಿದ್ದಾರೆ.

ಇಂದಿನ ಕಂಪ್ಯೂಟರ್ ತಂತ್ರಜ್ಞಾನ, ಸಂವಹನ ವ್ಯವಸ್ಥೆಗಳು, ವೈದ್ಯಕೀಯ ಸಾಧನಗಳು ಹಾಗೂ ಭವಿಷ್ಯದ ನವೀನ ಆವಿಷ್ಕಾರಗಳ ಹಿಂದೆ ಕಾರ್ಯನಿರ್ವಹಿಸುತ್ತಿರುವ ಕ್ವಾಂಟಂ ವಿಜ್ಞಾನದ ಮೂಲಭೂತ ತತ್ವಗಳನ್ನು ಈ ಉಪನ್ಯಾಸದಲ್ಲಿ ತಿಳಿದುಕೊಳ್ಳುವ ಅಪರೂಪದ ಅವಕಾಶ ಲಭ್ಯವಾಗಲಿದೆ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ, ಕುತೂಹಲ ಹಾಗೂ ಸಂಶೋಧನಾ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.06.2026 ಶನಿವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಕೃತಿಕ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಪ್ರಮತಿ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್** : ಅಂತರ ಶಾಲೆ ಮತ್ತು ಜೂನಿಯರ್ ಕಾಲೇಜು ಸಿಬ್ಬಂದಿ ಪಂದ್ಯಾವಳಿ, ಉದ್ಘಾಟನೆ : ಕ್ರಿಕೆಟರ್ ಎಲ್.ಆರ್. ಚೇತನ್, ಸ್ಥಳ: ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್, ಬೆಳಗ್ಗೆ 9ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ/ಗೃದ್ರಸಿ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗೆ 9.30 ರಿಂದ
- **ಶ್ರೀ ಜ್ಞಾನಜ್ಯೋತಿ ಜ್ಯೋತಿಷ್ಯ ಮಂದಿರ** : ಜ್ಯೋತಿಷ್ಯ, ವಾಸ್ತು ಆಗಮ, ಕಾರ್ಯಾಗಾರ, ಉದ್ಘಾಟನೆ : ವಿದ್ವಾನ್ ಮೂಗೂರು ಮಧುದೀಕ್ಷಿತ್ ಗುರೂಜಿ, ಶ್ರೀಮತಿ ರೂಪಶ್ರೀ ದೀಕ್ಷಿತ್, ಎಸ್. ನಟರಾಜ್, ಶ್ರೀಮತಿ ಶಾಂತಕುಮಾರಿ, ಪರಶಿವಮೂರ್ತಿ, ಶೃತಿ, ವಿದ್ವಾನ್ ಸಾಗರ್ ಎಸ್.ಶಾಸ್ತ್ರಿ, ವಿದ್ವಾನ್ ಶರತ್ ಆಚಾರ್ಯ, ವಿದ್ವಾನ್ ಜೆ.ಇ. ಶಿವಕುಮಾರ್, ವಿದ್ವಾನ್ ನಾಗರಾಜ್ ಶಾಸ್ತ್ರಿ ಅವರಿಂದ ವೇದಘೋಷ, ಶ್ರೀಮತಿ ಅಂಕಿತ ಶಿವಕುಮಾರ್ ಮತ್ತು ಶ್ರೀಮತಿ ಕಾವ್ಯ ಸುಗುಣ್ ಅವರಿಂದ ಭರತನಾಟ್ಯ, ಸ್ಥಳ: ರೋಟರಿ ಸಭಾಂಗಣ, ಮುಡಾ ಎದುರು, ಬೆಳಗ್ಗೆ 9.30 ರಿಂದ.
- **ಸುಯೋಗ್ ಆಸ್ಪತ್ರೆ** : ಜೀರ್ಣಾಂಗ ಕಾಯಿಲೆಗಳಿಗೆ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್‌ಎಸ್‌ಟಿಯು** : 20ನೇ ವರ್ಷದ ಶಬ್ದ–26 ಕಲಾ ಮತ್ತು ಸಾಹಿತ್ಯ ಉತ್ಸವ, ಮುಖ್ಯ ಅತಿಥಿಗಳು : ತಟ್ ಅಂತ ಹೇಳಿ ನಿರೂಪಕ ಎನ್. ಸೋಮೇಶ್ವರ, ಜೆಎಸ್‌ಎಸ್‌ಟಿಯುವಿನ ಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಕುಲಸಚಿವ ಡಾ. ಎಸ್.ಎ. ಧನರಾಜ್, ಪ್ರಿನ್ಸಿಪಾಲ್ ಡಾ. ಸಿ. ನಟರಾಜು, ಡೀನ್ ಡಾ. ಎಂ. ಎನ್. ನಾಗೇಂದ್ರಪ್ರಸಾದ್, ಸಹ ಡೀನ್ ಡಾ. ವಾಣಿಶ್ರೀ ಅರುಣ್, ಸ್ಥಳ: ವಿವಿ ಗೋಲ್ಡನ್ ಜ್ಯೂಬಿಲಿ ಭವನ, ಬೆಳಗ್ಗೆ 10ಕ್ಕೆ.
- **ವಿದ್ಯಾವರ್ಧಕ ಕಾನೂನು ಕಾಲೇಜು** : ಪ್ರೊ. ಪಿ.ಎಂ. ಚಿಕ್ಕಬೋರಯ್ಯ ಸ್ಮರಣಾರ್ಥ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಕರ್ನಾಟಕ ಮೆಡಿಟೇಷನ್ ಸೆಂಟರ್ ನಿರ್ದೇಶಕ ಸಂತೋಷ್ ಗಜಾನನ ಭಟ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಸಿಎಂಸಿ ಅಧ್ಯಕ್ಷ ಕೆ.ಎಂ. ರಾಜಶೇಖರ್, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಡಾ. ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಸಮೂಹ ವಿದ್ಯಾಸಂಸ್ಥೆ, ಸುರಕ್ಷಾ ಎಜುಕೇಷನ್ ಟ್ರಸ್ಟ್‌ನ ಆಲ್ಫೋನ್ಸಾ ಕಾಲೇಜು** : 19ನೇ ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು : ಸಂಸದ ಡಾ. ಸಿ.ಎನ್. ಮಂಜುನಾಥ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಸುರಕ್ಷಾ ಟ್ರಸ್ಟ್‌ನ ಅಧ್ಯಕ್ಷೆ ಡಾ. ಸರಳಾ ಚಂದ್ರಶೇಖರ್, ಅಧ್ಯಕ್ಷತೆ : ಡಾ. ಚಂದ್ರಶೇಖರ್ ಫೌಂಡೇಷನ್ ಮತ್ತು ಕಾವೇರಿ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ. ಜಿ.ಆರ್. ಚಂದ್ರಶೇಖರ್, ಸ್ಥಳ: ಕರ್ನಾಟಕ ಮುಕ್ತ ವಿವಿ ಘಟಿಕೋತ್ಸವ ಭವನ, ಮಧ್ಯಾಹ್ನ 12.30ಕ್ಕೆ.
- **ಸಹಜ ಸಮೃದ್ಧ** : ದೇಸಿ ಬೀಜೋತ್ಸವ, ಬೀಜ ವೈವಿಧ್ಯದ ಸಂಭ್ರಮ, ಉದ್ಘಾಟನೆ : ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳ್ ಜಗದೀಶ್, ಮುಖ್ಯ ಅತಿಥಿಗಳು : ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಜೆ. ಗೋವರ್ಧನ್ ಸಿಂಗ್, ದೇಸಿ ಬೀಜ ಸಂರಕ್ಷಕ ಪದ್ಮಮ್ಮ, ಶ್ರೀನಿವಾಸಮೂರ್ತಿ ಎಸ್.ಆರ್., ಅಧ್ಯಕ್ಷತೆ : ಸಹಜ ಸಮೃದ್ಧ ಮುಖ್ಯಸ್ಥ ಜಿ. ಕೃಷ್ಣಪ್ರಸಾದ್, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಮಧ್ಯಾಹ್ನ 1.30ಕ್ಕೆ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಮೈಸೂರು ದಿಗ್ವಿಜಯ –2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ಬೆಳಗ್ಗೆ 7.30 ರಿಂದ ಪಾದಪೂಜೆ, ಮುದ್ರಾಧಾರಣೆ ಹಾಗೂ ಧನ್ವಂತರಿ ಹೋಮ, ಗೋ ಪೂಜಾ, ಸಂಕಲ್ಪ ಸಹಿತ ಅಪೂವ ದಾನ, ಶ್ರೀಮನ್ಮೂಲರಾಮದೇವರ ಪೂಜೆ, ಸಂಜೆ 4.30 ರಿಂದ ಹರಿನಾಮ ಭಜನೆ (ಭಜನಾ ಮಂಡಳಿಗಳಿಂದ), ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾಂಸರಿಂದ ಪ್ರವಚನ, ಗಣ್ಯರಿಗೆ ಸನ್ಮಾನ, ಶ್ರೀಪಾದಂಗಳವರ ಅನುಗ್ರಹ ಸಂದೇಶ, ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಪುರುಷೋತ್ತಮ ಸ್ತುತಿ ಲಹರಿ, ಸಂಜೆ 5.30 ರಿಂದ ವಿಶೇಷ ಕಾರ್ಯಕ್ರಮ 'ಶ್ರೀನಿವಾಸ ಕಲ್ಯಾಣ' ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ – ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯೋಗದ ಜಗತ್ತು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಓ.ಎಸ್. ಅರುಣ್ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ– ಉಳ್ಳಾಗಡ್ಡಿ ಉಳ್ಳ ಮಾವ, ರಚನೆ–ಅರುಣ ದೇಶಪಾಂಡೆ, ನಿರ್ಮಾಣ–ರಮಾ ಎಸ್. ಹಿರೇಮಠ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಾವಯವ ಕಬ್ಬಿನ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ–ಮದ್ದೂರು ತಾಲೂಕು, ಕೊಪ್ಪ ಹೋಬಳಿ ಬೆಳ್ಳೂರು ಗ್ರಾಮದ ಬಿ.ಟಿ. ಶಿವರಾಮಯ್ಯ ಮತ್ತು ಬಿ.ಎಸ್. ಪ್ರಭುಲಿಂಗ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಯು.ಎಸ್.ಪ್ರಸಾದ್–ಸ್ಯಾಕ್ಸೋಫೋನ್ ವಾದನ

- **ಬೆಂಗಳೂರಿನ ಸಂಸ್ಕೃತಿ ಸೌರಭ ಟ್ರಸ್ಟ್** : ಸಾಂಸ್ಕೃತಿಕ ಪತ್ರಿಕೋದ್ಯಮ, ಸಂಘಟನೆ ಮತ್ತು ಕನ್ನಡಪರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಮೈಸೂರಿನ ಪತ್ರಕರ್ತ ಹಾಗೂ ಲೇಖಕ ರಂಗನಾಥ್ ಮೈಸೂರು ಅವರಿಗೆ 'ಕಲಾಸೇವಾರತ್ನ' ಪ್ರಶಸ್ತಿ ಪ್ರದಾನ, ಸ್ಥಳ: ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣ, ಸಂಜೆ 4ಕ್ಕೆ
- **ಕಲಾಸುರುಚಿ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 936, ಕಥೆ ಹೇಳುವವರು: ಡಾ. ವಾಣಿ ರಾಘವೇಂದ್ರ, ಶಿಕ್ಷಕರು ಹಾಗೂ ಲೇಖಕರು, ಸದ್ವಿವೇಕ ಶಾಲೆ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಅಭಿರುಚಿ ಪ್ರಕಾಶನ** : ಹಾಡುಪಾಡು ರಾಮು ಅವರ 'ಮಹಾಭಾರತದೊಳಗಿಂದ ಒಂದಿಷ್ಟು' ಕೃತಿ ಲೋಕಾರ್ಪಣೆ ಸಮಾರಂಭ ಹಾಗೂ ಶ್ರೀಮತಿ ಸಹನ ಎಸ್.ವಿ. ತಂಡದವರಿಂದ ನಾದ ನಮನ, ಕೃತಿ ಲೋಕಾರ್ಪಣೆ : ಕಥೆಗಾರ ಅಬ್ದುಲ್ ರಷೀದ್, ಪತ್ರಕರ್ತ ಚ.ಹ. ರಘುನಾಥ್, ಅಧ್ಯಕ್ಷತೆ : ಕಾದಂಬರಿಕಾರ ಡಾ. ಕೃಷ್ಣಮೂರ್ತಿ ಹನೂರು, ಸ್ಥಳ: ವನರಂಗ, ರಂಗಾಯಣದ ಆವರಣ, ಸಂಜೆ 4.30ಕ್ಕೆ.
- **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಮೈಸೂರು** : ವಿಜ್ಞಾನಾಸಕ್ತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ 'ಕ್ವಾಂಟಂ ಜಗತ್ತು: ಸಾಮಾನ್ಯ ಅನುಭವದ ಆಚೆ' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಮೈಸೂರು ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಕೆ. ಎಸ್. ಮಲ್ಲೇಶ್ ಅವರಿಂದ ಉಪನ್ಯಾಸ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಸಂಜೆ 5 ರಿಂದ.
- **ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತಿ ಸಮಿತಿ** : ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ (ಡಾ. ವಸಂತಕುಮಾರ್ ತಿಮಕಾಪುರ ಅವರ ಮನೆಯಲ್ಲಿ), ಸ್ಥಳ: 765, 8ನೇ ಮುಖ್ಯ ರಸ್ತೆ, ಬಿ ಬ್ಲಾಕ್, 3ನೇ ಹಂತ, ವಿಜಯನಗರ, ಸಂಜೆ 5ಕ್ಕೆ.
- **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್** : ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳು : ಶ್ರೀ ರಾಮಕೃಷ್ಣ ವಿದ್ಯಾಶಾಲಾ ನಿವೃತ್ತ ಪ್ರಿನ್ಸಿಪಾಲ್ ಎಸ್. ಬಾಲಾಜಿ, ಉಪಸ್ಥಿತರು : ಉಪಾಧ್ಯಕ್ಷ ಪಿ.ಎಸ್. ಶೇಖರ್, ಗೌರವ ಕಾರ್ಯದರ್ಶಿ ಕೆ.ವಿ. ಶ್ರೀಧರ್, ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಶ್ರೀವತ್ಸರಾವ್, ಗೌರವ ಕಾರ್ಯದರ್ಶಿ ರಾಘವೇಂದ್ರರಾವ್, ಸ್ಥಳ: ಶ್ರೀ ಕೃಷ್ಣ ಸಭಾ ಭವನ, ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 5ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಕಲಾ ಸುರುಚಿ, ಕುತೂಹಲಿ– ಕನ್ನಡ ಸಂಸ್ಥೆ** : ಸೈನ್ಸ್ ಸಂಜೆ ಕಾರ್ಯಕ್ರಮ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಡೆಪ್ಯುಟಿ ಸಿಇಓ ಹಾಗೂ ಮುಖ್ಯಸ್ಥರು (ಶಿಕ್ಷಣ) ಪ್ರವೀಣ್‌ಕುಮಾರ್ ಸಯ್ಯಪ್ಪರಾಜು ಅವರಿಂದ 'ಮೂಲವಸ್ತುಗಳ ಪತ್ತೆ' ಕುರಿತು ಭಾಷಣ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.
- **ಬಿದಿರು ಥಿಯೇಟರ್ ಮೈಸೂರು** : ಬಿದಿರು ಥಿಯೇಟರ್ ತಂಡದ ಸದಸ್ಯರಿಂದ ಜಾನಪದ ನಾಟಕ 'ಮಹಾಮಾಯಿ', ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.
- **ನ್ಯೂ ಪ್ರಿಯದರ್ಶಿನಿ ಆಸ್ಪತ್ರೆ** : 2ನೇ ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಡಾ. ಎಸ್.ಎನ್. ಮೋತಿ, ಡಾ. ಭರತ್‌ಕುಮಾರ್, ಡಾ. ಉಮಾ ಶಾಮಣ್ಣ, ಎಸ್.ಬಿ.ಎಂ. ಮಂಜು, ಡಾ. ಎಂ.ಎಸ್. ಗಿರೀಶ್, ಡಾ. ಮಂಜು ಭಾರ್ಗವ ರೆಡ್ಡಿ, ಡಾ. ಕಿರಣ್ ಕುಮಾರ್, ಸ್ಥಳ: ಕಲ್ಯಾಣಿ ಹೋಟೆಲ್, ಸಂಜೆ 6.30ಕ್ಕೆ.
- **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ** : ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 7ಕ್ಕೆ ಶೇರ್ತಿಸೇವೆ, ತಿರುಪ್ಪಾವಾಡೆ ಸೇವೆ, ಸ್ಥಳ: ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ, ತಿಲಕ್‌ನಗರ.

ಮೈಸೂರಿನಲ್ಲಿ 'ಲಲಿತಾಭಿನಂದನ' ಅರ್ಥಪೂರ್ಣ ಸಮಾರಂಭ

ಸಾಮಾಜಿಕ ಕಾರ್ಯ, ಸಹಕಾರ ಕ್ಷೇತ್ರದಲ್ಲಿ ಲಲಿತಾ ಜಿ.ಟಿ.ದೇವೇಗೌಡರ ಗಣನೀಯ ಸೇವೆಗೆ ಸಂದ ಗೌರವ

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಬಣ್ಣನೆ

ಮೈಸೂರು, ಜೂ.12(ಬಿಎಲ್‌ಯು)– ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರು ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆ ಪರಿಗಣಿಸಿ ಇಂದು ಅಭಿನಂದನೆ ಸಲ್ಲಿಸಿದ್ದು, ಇದು ಅವರ ಸಾಮಾಜಿಕ ಕಾರ್ಯಕ್ಕೆ ಸಂದ ಗೌರವವಾಗಿದೆ ಎಂದು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದು 'ಲಲಿತಾಭಿನಂದನ' ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರ ಅಭಿನಂದನಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ದೇವತೆಗಳಲ್ಲಿ ಅತ್ಯಂತ ಶುದ್ಧ ಶಕ್ತಿ ಹೊಂದಿರುವ ಜಗನ್ಮಾತೆ ಲಲಿತಾಂಭೆಯ ಹೆಸರು ಹೊಂದಿರುವ ಲಲಿತಾ ಜಿ.ಟಿ.ದೇವೇಗೌಡರು ಕೂಡ ಸಹಕಾರ ಕ್ಷೇತ್ರದ ಸಾಧನೆ ಮೂಲಕ ಶ್ರೇಷ್ಠ ಹೆಸರು ಪಡೆದಿದ್ದಾರೆ ಎಂದು ಬಣ್ಣಿಸಿದರು.

ಜಿ.ಟಿ.ದೇವೇಗೌಡರು ರಾಜಕೀಯದ ಒಂದೊಂದೇ ಮೆಟ್ಟಿಲು ಹತ್ತಲು ಲಲಿತಾ ಅವರು ಸ್ಫೂರ್ತಿದಾಯಕರಾಗಿ, ಬೆನ್ನೆಲುಬಾಗಿ ನಿಂತಿದ್ದಾರೆ. ಪತಿಗೆ ಒಳ್ಳೆಯ ಪತ್ನಿಯಾಗಿ, ಮಕ್ಕಳಿಗೆ ಅರ್ಥಪೂರ್ಣ ತಾಯಿಯಾಗಿ ಮನೆಯ ಅಸ್ತಿತ್ವ ಕಾಪಾಡಿದ್ದಾರೆ. ಜಿ.ಟಿ.ದೇವೇಗೌಡರು ರಾಜಕೀಯ ಕ್ಷೇತ್ರದ ಒತ್ತಡದಲ್ಲಿರುವ ಸಂದರ್ಭದಲ್ಲಿ ಇಡೀ ಮನೆಯ ಜವಾಬ್ದಾರಿ ಹೊತ್ತು ಮಕ್ಕಳನ್ನು ಸಂಸ್ಕಾರವಂತರಾಗಿ ಮಾಡಿದ್ದಾರೆ ಎಂದು ಶ್ರೀಗಳು ಪ್ರಶಂಸಿಸಿದರು.

ಸದಾ ಹಸನ್ಮುಖರಾಗಿರುವ ಲಲಿತಾ ಅವರು ಸಹಕಾರ ಕ್ಷೇತ್ರದಲ್ಲಿ ಸ್ಮರಣೀಯ ಕೆಲಸಗಳನ್ನು ಮಾಡಿ ಸೈ ಎನಿಸಿಕೊಂಡಿದ್ದಾರೆ. ಈ ಅಭಿನಂದನೆ ಇಷ್ಟು ವರ್ಷಗಳ ಅವರ ಕಷ್ಟ–ಸುಖಕ್ಕೆ ಸಂದ ಗೌರವವಾಗಿದೆ ಎಂದು ಹೇಳಿದರು.

ಜಿಟಿಡಿ ಸಂಸ್ಕಾರವಂತರು: ಜಿ.ಟಿ.ದೇವೇಗೌಡರು ಹುಟ್ಟು ಹೋರಾಟಗಾರರಾಗಿ ಜನರ ಕಷ್ಟ–ಸುಖ ಅರಿತ ಅಂತಃಕರಣವುಳ್ಳ ವ್ಯಕ್ತಿಯಾಗಿದ್ದಾರೆ. ಉನ್ನತ ಶಿಕ್ಷಣ ಸಚಿವರಾಗಿದ್ದ ವೇಳೆ ಇದೇ ರೀತಿ ಪಂಚೆ ಹಾಗೂ ಹೆಗಲ ಮೇಲೆ ಟವಲ್ ಧರಿಸಿಯೇ ವಿಶ್ವವಿದ್ಯಾನಿಲಯಗಳ ಘಟಿಕೋತ್ಸವ ಸಮಾರಂಭಗಳಲ್ಲಿ ಭಾಗಿಯಾಗುತ್ತಿದ್ದರು. ರಾಜಕೀಯವಾಗಿ ಎಷ್ಟೇ ಎತ್ತರಕ್ಕೆ ಹೋದರೂ ಜಿ.ಟಿ.ದೇವೇಗೌಡರು ಎಂದೂ ತಮ್ಮ ಸಂಸ್ಕಾರ, ಆಚರಣೆ, ಸಂಸ್ಕೃತಿಯನ್ನು ಮರೆಯಲಿಲ್ಲ. ಅದನ್ನು ಇಂದಿಗೂ ಪಾಲಿಸಿಕೊಂಡು ಹೋಗುತ್ತಿದ್ದಾರೆ ಎಂದು ತಿಳಿಸಿದರು.

ಮೈಸೂರು ಹಾಗೂ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಜಾಗತಿಕ ಮನ್ನಣೆ ತಂದು ಕೊಟ್ಟ ಪ್ರೊ.ಕೆ.ಎಸ್.ರಂಗಪ್ಪ ಅವರ ಪರಿಶ್ರಮದಿಂದ ಇಂತಹ ವಿಶಾಲವಾದ ಅದ್ಭುತ ಘಟಿಕೋತ್ಸವ ಭವನ ನಿರ್ಮಾಣವಾಗಿದೆ ಎಂದು ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರು ವೇದಿಕೆಯಲ್ಲಿ ಆಸೀನರಾಗಿದ್ದ ಪ್ರೊ.ರಂಗಪ್ಪ ಅವರನ್ನು ಪ್ರಶಂಸಿಸಿದರು. ಈ ವೇಳೆ ಲಲಿತಾ ಜಿ.ಟಿ.ದೇವೇಗೌಡ ಅವರಿಗೆ ಬಾದಾಮಿಯ ಹಾರ ಹಾಕಿ ಗಣ್ಯರು ಅತ್ಯಧಿಕ ಅಭಿಮಾನದಿಂದ ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ವಿಶ್ರಾಂತ ಕುಲಪತಿ ಪ್ರೊ.ರಂಗಪ್ಪ ಅವರು ಲಿಲತಾ ಅವರ ಕುರಿತ "ನೆನಪಿನ ಸುರುಳಿ" ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಿದರು. ಇದೇ ವೇಳೆ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಲಲಿತಾ ಜಿ.ಟಿ. ದೇವೇಗೌಡರಿಗೆ ಹಾರ ಹಾಕಿ ಸನ್ಮಾನಿಸಿದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದಜೀ ಮಹಾರಾಜ್, ಬೇಬಿ ಮಠದ ಪೀಠಾಧ್ಯಕ್ಷ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಚಿತ್ರ ನಿರ್ಮಾಪಕರಾದ ಅಶ್ವಿನಿ ಪುನೀತ್ ರಾಜ್‌ಕುಮಾರ್, ಡಾ. ಸೌಮ್ಯ ರಮೇಶ್, ಮುಡಾ ಮಾಜಿ ಅಧ್ಯಕ್ಷ ವಿಜಯಕುಮಾರ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಶುಕ್ರವಾರ ನಡೆದ 'ಲಲಿತಾಭಿನಂದನ' ಸಮಾರಂಭದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಲಲಿತಾ ಜಿ.ಟಿ.ದೇವೇಗೌಡ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಭಿಕರನ್ನು ಕಾಣಬಹುದು.



ಪ್ರಗತಿಪರ ಕೃಷಿಕನಾಗಲು ಬಂಗಾರದ ಮನುಷ್ಯ ಸಿನಿಮಾ ಸ್ಫೂರ್ತಿ

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ನಾನು ಪ್ರಗತಿಪರ ಕೃಷಿಕನಾಗಲು ಡಾ.ರಾಜ್‌ಕುಮಾರ್ ಅವರ ಬಂಗಾರದ ಮನುಷ್ಯ ಸಿನಿಮಾ ನನಗೆ ಸ್ಫೂರ್ತಿಯಾಯಿತು ಎಂದು ಶಾಸಕ ಜಿ.ಟಿ.ದೇವೇಗೌಡರು ಈ ವೇಳೆ ತಮ್ಮ ಆರಂಭಿಕ ಬದುಕನ್ನು ಮೆಲುಕು ಹಾಕಿದರು. ನಾನು ರೈತಾಪಿ ಕುಟುಂಬದಿಂದ ಬಂದವನು. ನನ್ನ ತಂದೆ ಕೂಡ ಕೃಷಿಕರಾಗಿದ್ದವರು. ಚಿಕ್ಕ ವಯಸ್ಸಿನಲ್ಲಿ ಸಂಸಾರದ ಜವಾಬ್ದಾರಿ ಹೊತ್ತುಕೊಂಡಿದ್ದೆ. ಕೃಷಿಯನ್ನೇ ಮೂಲ ವೃತ್ತಿಯಾಗಿ ಮಾಡಿಕೊಂಡು ಚಿನ್ನದ ಬೆಳೆ ಬೆಳೆದೆ, ನಾನೇ ಮಾರುಕಟ್ಟೆಗೆ ಹೋಗಿ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದೆ. ಆರ್ಥಿಕವಾಗಿ ನಾನು ಸಬಲನಾಗಲು ಕೃಷಿ ನನಗೆ ಸಹಕಾರಿಯಾಯಿತು ಎಂದು ಹೇಳಿದರು.

ಲಲಿತಾ ಅವರನ್ನು ಮದುವೆಯಾದಾಗ ಕೂಡ ಕೃಷಿಯಲ್ಲೇ ಬದುಕು ಕಟ್ಟಿಕೊಂಡಿದ್ದೆ. ತರುವಾಯ ಒಂದೊಂದೇ ಮೆಟ್ಟಿಲೇರಿ ರಾಜಕೀಯ ಕ್ಷೇತ್ರದಲ್ಲಿ ಮುಂದೆ ಬಂದೆ. ನಾನು ರಾಜಕೀಯ ಕ್ಷೇತ್ರದಲ್ಲಿ ಬೆಳವಣಿಗೆ ಸಾಧಿಸಲು ನನ್ನ ಪತ್ನಿ ಲಲಿತಾ ಬೆನ್ನೆಲುಬಾಗಿದ್ದಾರೆ ಎಂದು ತಿಳಿಸಿದರು.

ನನ್ನಂತೆ ಲಲಿತಾ ಅವರೂ ಸಹಕಾರ ಕ್ಷೇತ್ರದಲ್ಲಿ ಹಲವು ಸೇವಾ ಕಾರ್ಯಗಳನ್ನು ಮಾಡುತ್ತಿದ್ದರು. ಆದರೆ ರಾಜಕೀಯದ ಒತ್ತಡದ ಸನ್ನಿವೇಶದಲ್ಲಿ ಲಲಿತಾ, ಸಹಕಾರ ಕ್ಷೇತ್ರದ ಜನಪರ ಕಾರ್ಯಗಳು ನನ್ನ ಅರಿವಿಗೆ ಬಂದಿರಲಿಲ್ಲ. ಈ ಅಭಿನಂದನಾ ಸಮಾರಂಭದ ವೇಳೆ ಲಲಿತಾ ಅವರು ಇಷ್ಟೆಲ್ಲಾ ಕೆಲಸ ಮಾಡಿದ್ದಾರೆಯೇ ಎಂದು ನಾನೇ ಆಶ್ಚರ್ಯಚಕಿತನಾದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಸಹಕಾರ, ರಾಜಕೀಯ ಕ್ಷೇತ್ರದ ಪಾದಾರ್ಪಣೆ ಆಕಸ್ಮಿಕ

ಗೃಹಿಣಿಯಾಗಿ ಕುಟುಂಬದ ನಿರ್ವಹಣೆ ಮಾಡುತ್ತಿದ್ದ ನಾನು ರಾಜಕೀಯ ಹಾಗೂ ಸಹಕಾರ ಕ್ಷೇತ್ರಕ್ಕೆ ಆಕಸ್ಮಿಕವಾಗಿ ಪಾದಾರ್ಪಣೆ ಮಾಡಿದೆ ಎಂದು ಲಲಿತಾ ಜಿ.ಟಿ.ದೇವೇಗೌಡ ತಿಳಿಸಿದರು.

ನನ್ನ ಪತಿ ಜಿ.ಟಿ.ದೇವೇಗೌಡರು 1970 ರಿಂದ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಆದರೆ ಅವರು ಮೈಸೂರು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಾಗ ಅವರ ಪರ ಪ್ರಚಾರಕ್ಕಿಳಿದೆ. ತರುವಾಯ ಹುಣಸೂರು ಕ್ಷೇತ್ರದ ಉಪ ಚುನಾವಣೆಯಲ್ಲಿ ಕೂಡ ಅವರ ಪರ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೆ ಎಂದರು.

ಜಿ.ಟಿ.ದೇವೇಗೌಡರು ಒತ್ತಡದ ಕಾರ್ಯಗಳಿಂದ ಹುಣಸೂರು ಕ್ಷೇತ್ರದ ಜನರನ್ನು ಭೇಟಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆ ವೇಳೆ ನನ್ನನ್ನು ಭೇಟಿ ಮಾಡುತ್ತಿದ್ದ ಜನರ ಕುಂದು–ಕೊರತೆ ಆಲಿಸಿ ಅವರ ಸಮಸ್ಯೆ ಪರಿಹರಿಸುತ್ತಿದ್ದೆ ಅವರು ಪ್ರತಿನಿಧಿಸಿದ ಹುಣಸೂರು ಕ್ಷೇತ್ರದಲ್ಲಿ ಸಹಕಾರ ಸಂಘ ಕಟ್ಟಿ ಅಭಿವೃದ್ಧಿಗೊಳಿಸಿದೆ ಎಂದರು.

ತರುವಾಯ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಕೂಡ ಸ್ಪರ್ಧೆ ಮಾಡಿ ಗೆಲವು ಸಾಧಿಸಿದೆ. ರಾಜಕೀಯ ಹಾಗೂ ಸಹಕಾರ ಕ್ಷೇತ್ರದಲ್ಲಿ ಗುರುತಿಸಿಕೊಂಡು ನನ್ನ ಶಕ್ತಿ ಮೀರಿ ಕೆಲಸ–ಕಾರ್ಯಗಳನ್ನು ಮಾಡಿದ್ದೇನೆ. ನನ್ನ ಈ ಕಾರ್ಯಕ್ಕೆ ಸಹಕಾರ ರತ್ನ ಪ್ರಶಸ್ತಿ ದೊರೆತಿದ್ದು, ಇದನ್ನು ನಾನು ನಿರೀಕ್ಷಿಸಿರಲಿಲ್ಲ. ಇಂದು ನೀವೆಲ್ಲಾ ಸೇರಿ ನನ್ನನ್ನು ಅಭಿನಂದಿಸಿದ್ದು, ಈ ಕ್ಷಣವನ್ನು ಎಂದೂ ಮರೆಯುವುದಿಲ್ಲ ಎಂದು ಲಲಿತಾ ಜಿ.ಟಿ.ದೇವೇಗೌಡ ಹೇಳಿದರು.

ಲಲಿತಾ ಜಿ.ಟಿ.ದೇವೇಗೌಡ ಅವರು ಮನೆ ಮನೆ ತಪಸ್ವಿ

ಪತಿಯ ಕೆಲಸ ಕಾರ್ಯಗಳಿಗೆ ಬೆನ್ನೆಲುಬಾಗಿ ನಿಂತು ಕುಟುಂಬದ ನಿರ್ವಹಣೆ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ಸ್ಮರಣೀಯ ಕೆಲಸ ಮಾಡಿರುವ ಲಲಿತಾ ಜಿ.ಟಿ.ದೇವೇಗೌಡ ಅವರು 'ಮನೆ ಮನೆ ತಪಸ್ವಿ' ಎಂದು ಹೆಸರಾಂತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಬಣ್ಣಿಸಿದರು.

ಕುಟುಂಬದ ಯಶಸ್ವಿ ನಿರ್ವಹಣೆ ಮಾಡುವ ಗೃಹಿಣಿಯನ್ನು ಕುವೆಂಪು ಅವರು ಮನೆ–ಮನೆ ತಪಸ್ವಿ ಎಂದು ಗೌರವಭಾವದಿಂದ ಕರೆದಿದ್ದರು. ಈ ಗೌರವ ಲಲಿತಾ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು. ಜನಪ್ರತಿನಿಧಿಯಾಗಿರುವ ಜಿ.ಟಿ. ದೇವೇಗೌಡರನ್ನು ಭೇಟಿ ಮಾಡಲು ಅವರ ಮನೆಗೆ ಹೋದಾಗ ಪ್ರತಿಯೊಬ್ಬರನ್ನು ಲಲಿತಾ ಅವರು ಸತ್ಕರಿಸುತ್ತಾರೆ. ಊಟ, ತಿಂಡಿ ಉಪಚಾರ ಮಾಡಿ ಆತಿಥ್ಯ ನೀಡುತ್ತಾರೆ. ಜಿ.ಟಿ. ದೇವೇಗೌಡರು ಸಿಟ್ಟು ಪ್ರೀತಿಯಿಂದ ಯಾರಿಗಾದರೂ ಬೈದರೆ ಅವರನ್ನು ಲಲಿತಾ ಅವರು ಸಮಾಧಾನಪಡಿಸಿ ಅವರ ಸಮಸ್ಯೆ ಪರಿಹರಿಸುತ್ತಾರೆ ಎಂದು ಹೇಳಿದರು.

ಪ್ರಶಾಂತ ಸ್ವಭಾವದವರಾಗಿ ತಾಳ್ಮೆಯನ್ನು ಮೈಗೂಡಿಸಿಕೊಂಡು ಸದಾ ಹಸನ್ಮುಖಿಯಾಗಿರುವ ಲಲಿತಾ ಅವರು ಜಿ.ಟಿ.ದೇವೇಗೌಡರಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಕುಟುಂಬ ನಿರ್ವಹಣೆಯ ಕಿಂಚಿತ್ತೂ ಹೊಣೆಯನ್ನು ಹೊರಿಸದೆ ನಿಭಾಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಸಾಧಕಿಗೆ ಈ ಗೌರವ ಅರ್ಥಪೂರ್ಣವಾಗಿದೆ ಎಂದು ಪ್ರೊ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮಿಲ್ಟ್ರಿ ಹೋಟೆಲ್‌ನಲ್ಲಿ ಉಪ್ಪಿಟ್ಟು ತಯಾರಿಸುತ್ತಿದ್ದರೂ ದಾರಿ ಹೋಕರಿಗೆ ಬೇರೆಯದೇ ವಾಸನೆ ಬರುತ್ತದೆ. ಅದರಂತೆ ಜಿ.ಟಿ. ದೇವೇಗೌಡರು ಕೂರಿಸಿಕೊಂಡು ಈ ಸಮಾರಂಭ ಮಾಡಿದರೆ ರಾಜಕೀಯವಾಗಿ ಬೇರೆಯದೇ ಅರ್ಥ ಬರುತ್ತದೆ. ಆದರೆ, ಈ ಸಮಾರಂಭ ರಾಜಕೀಯೇತರವಾದ ಅರ್ಥಪೂರ್ಣ ಸಮಾರಂಭವಾಗಿದೆ ಎಂದು ಪ್ರೊ. ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಪಕ್ಷಾತೀತವಾಗಿ ಬಹುತೇಕ ನಾಯಕರು ಸಮಾರಂಭಕ್ಕೆ ಸಾಕ್ಷಿ

ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರ ಅಭಿನಂದನಾ ಸಮಾರಂಭದಲ್ಲಿ ಪಕ್ಷಾತೀತವಾಗಿ ಎಲ್ಲಾ ನಾಯಕರು ಭಾಗಿಯಾಗಿ ಅಭಿನಂದನೆ ಸಲ್ಲಿಸಿದರು.

ಜಾತ್ಯಾತೀತ ಜನತಾದಳದ ಶಾಸಕರಾಗಿರುವ ಜಿ.ಟಿ.ದೇವೇಗೌಡರು ಒಂದು ಪಕ್ಷದಲ್ಲಿ ಗುರುತಿಸಿಕೊಂಡಿದ್ದರೂ ಜೆಡಿಎಸ್, ಬಿಜೆಪಿ, ಕಾಂಗ್ರೆಸ್‌ನಲ್ಲಿರುವ ನಾಯಕರು ಬಹಳ ಕಾಲದಿಂದಲೂ ಅವರಿಗೆ ಅತ್ಯಾಪ್ತರು. ಈ ಹಿನ್ನೆಲೆಯಲ್ಲಿ ಮೂರೂ ಪಕ್ಷದ ಹಲವು ನಾಯಕರು ಪಕ್ಷಭೇದ ಮರೆತು ಸಮಾರಂಭಕ್ಕೆ ಸಾಕ್ಷಿಯಾದರು. ಚಾಮುಂಡೇಶ್ವರಿ ಕ್ಷೇತ್ರ, ಹುಣಸೂರು ಹಾಗೂ ಕೆ.ಆರ್.ನಗರ ತಾಲೂಕಿನ ಸಾವಿರಾರು ಜನರು ಪಾಲ್ಗೊಂಡಿದ್ದರು. ಸಾಮಾನ್ಯವಾಗಿ ಒಂದು ರಾಜಕೀಯ ಪಕ್ಷದ ನಾಯಕರ ಸಮಾರಂಭ ನಡೆದರೆ ಆ ಪಕ್ಷದವರು ಮಾತ್ರ ಭಾಗಿಯಾಗುತ್ತಾರೆ. ಆದರೆ ಲಲಿತಾ ಜಿ.ಟಿ.ದೇವೇಗೌಡರ ಅಭಿನಂದನಾ ಸಮಾರಂಭದಲ್ಲಿ ಬಹುತೇಕ ಎಲ್ಲಾ ಪಕ್ಷದ ನಾಯಕರು ಪಾಲ್ಗೊಂಡಿದ್ದರು.

ಭಾಷಣದ ವೇಳೆ ಗದ್ಗದಿತರಾದ ಜಿ.ಟಿ. ದೇವೇಗೌಡರು



ಪತ್ನಿ ಶ್ರೀಮತಿ ಲಲಿತಾ ಅವರ ಅಭಿನಂದನಾ ಸಮಾರಂಭದ ವೇದಿಕೆಯಲ್ಲಿ ಮಾತನಾಡುವಾಗ ಶಾಸಕ ಜಿ.ಟಿ.ದೇವೇಗೌಡರು ಗದ್ಗದಿತರಾದರು. ಭಾಷಣ ಆರಂಭಿಸಿ ನಾಲ್ಕು ಮಾತನಾಡುವ ಹೊತ್ತಿಗೆ ಅದೇಕೋ ಏನೊ ಜಿ.ಟಿ.ದೇವೇಗೌಡರು ಭಾವುಕರಾದರು. ಮುಂದೆ ಮಾತನಾಡಲು ಸಾಧ್ಯವಾಗದೆ, ಹೋಗಿ ಆಸನದಲ್ಲಿ ಕುಳಿತರು. ಈ ವೇಳೆ ಸಮಾರಂಭ ದಲ್ಲಿದ್ದ ಅವರ ಬಹಳಷ್ಟು ಅತ್ಯಾಪ್ತರು, ಅಭಿಮಾನಿಗಳು ಜಿ.ಟಿ.ದೇವೇಗೌಡರೇ ಮಾತಾಡಿ, ನಾವಿದ್ದೇವೆ. ಎಲ್ಲದಕ್ಕೂ ದೇವರಿದ್ದಾನೆ, ನೀವು ಯಾವುದಕ್ಕೂ ಚಿಂತೆ ಮಾಡಬೇಡಿ ಎಂದು ಧೈರ್ಯ ತುಂಬಿದರು. ತರುವಾಯ ಮಾತು ಆರಂಭಿಸಿದ ಜಿ.ಟಿ.ದೇವೇಗೌಡರು ತಮ್ಮ ಬದುಕಿನ ಆರಂಭದ ದಿನಗಳ ಸವಾಲುಗಳು, ಕುಟುಂಬದ ಜವಾಬ್ದಾರಿ, ರಾಜಕೀಯದ ಯಶಸ್ಸು ಸೇರಿದಂತೆ ಹಲವು ವಿಚಾರವನ್ನು ಸೂಚ್ಯವಾಗಿ ಹೇಳಿದರು.





'ಲಲಿತಾಭಿನಂದನ' ಸಮಾರಂಭದಲ್ಲಿ ಶ್ರೀಮತಿ ನಿರುಪಮಾ–ರಾಜೇಂದ್ರ ಮತ್ತು ತಂಡದ ಕಲಾವಿದರ 'ನೃತ್ಯ ಸಂಭ್ರಮ ವೈಭವ' ನೃತ್ಯ ಪ್ರದರ್ಶನ ನೆರೆದಿದ್ದವರ ಮನಸೂರೆಗೊಂಡಿತು.

ರೈತರು ಎಂದೂ ಕೃಷಿಯಿಂದ ವಿಮುಖರಾಗಬಾರದು

ಎಂತಹ ದೊಡ್ಡ ಸವಾಲುಗಳಿದ್ದರೂ ರೈತರು ಕೃಷಿ ಕಾಯಕದಿಂದ ವಿಮುಖರಾಗದೆ ಭೂಮಿ ತಾಯಿಯನ್ನು ನಂಬಿ ಬೇಸಾಯ ಮಾಡಿದರೆ ಒಂದಲ್ಲಾ ಒಂದು ದಿನ ಯಶಸ್ಸು ದೊರೆಯಲಿದೆ ಎಂದು ರಾಯಚೂರಿನ ಪ್ರಯೋಗಶೀಲ ಕೃಷಿ ಸಾಧಕಿ ಡಾ.ಕವಿತಾ ಮಿಶ್ರಾ ರೈತರನ್ನು ಉತ್ತೇಜಿಸಿದರು.

ಮೂಲತಃ ಸಾಫ್ಟ್ ವೇರ್ ಇಂಜಿನಿಯರ್ ಆದ ನಾನು ಮದುವೆ ನಂತರ ಕೆಲಸ ಬಿಟ್ಟು ಕೃಷಿಯಲ್ಲಿ ಸಾಧನೆ ಮಾಡಬೇಕೆಂದು ನಿರ್ಧರಿಸಿದೆ. ಆದರೆ ಅತಿವೃಷ್ಟಿ, ಅನಾವೃಷ್ಟಿಯಿಂದ ಆರ್ಥಿಕವಾಗಿ ಹಲವು ಸವಾಲು ಎದುರಿಸಿದೆ. ತರುವಾಯ ಋತು ಆಧಾರಿತ ಬೆಳೆ ಬೆಳೆಯಲು ಆರಂಭಿಸಿದೆ. ಕೊನೆಗೂ ಭೂಮಿ ತಾಯಿ ನನ್ನ ಕೈಬಿಡಲಿಲ್ಲ ಎಂದರು.

ದುಬಾರಿ ಬೆಲೆಯ ಶ್ರೀಗಂಧದ ಮರ ಬೆಳೆಯಲು ಶ್ರೀಗಂಧದ ನಾಡು ಕರ್ನಾಟಕದಲ್ಲಿರುವ ಉತ್ಕೃಷ್ಟ ದರ್ಜೆಯ ಗುಣಮಟ್ಟದ ಮಣ್ಣು ಇಡೀ ವಿಶ್ವದಲ್ಲಿ ಎಲ್ಲೂ ಇಲ್ಲ. ಇಂದು ನಾನು ಶ್ರೀಗಂಧದ ಗಿಡಗಳನ್ನು ಬೆಳೆಸಿ ದೇಶದ ಹಲವು ರಾಜ್ಯಗಳಿಗೆ ಮಾರಾಟ ಮಾಡುತ್ತಿದ್ದೇನೆ ಎಂದು ಹೇಳಿದರು. ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಸೇರಿದಂತೆ ಭೂಮಿ ತಾಯಿ ಮಡಿಲಲ್ಲೇ ಹಲವು ಕಾಯಕ ಮಾಡಿ ಆರ್ಥಿಕವಾಗಿ ಸದೃಢನಾಗಿದ್ದೇನೆ. ಈ ಹಿನ್ನೆಲೆಯಲ್ಲಿ ರೈತರು ಕೃಷಿಯಿಂದ ವಿಮುಖರಾಗದೆ ಭೂಮಿ ತಾಯಿ ಸೇವೆ ಮಾಡಿ. ಕೃಷಿಗೆ ಇರುವಷ್ಟು ಬೆಲೆ ಇಡೀ ವಿಶ್ವದಲ್ಲಿ ಯಾವುದಕ್ಕೂ ಇಲ್ಲ. ಇಂಜಿನಿಯರ್ ಸೇರಿದಂತೆ ಯಾವುದೇ ವೃತ್ತಿಪರರು ಮುಷ್ಕರ ಮಾಡಿದರೆ ದೇಶಕ್ಕೆ ಅಂತಹ ಪರಿಣಾಮ ಬೀರುವು ದಿಲ್ಲ. ಆದರೆ ರೈತರು ಕೆಲಸ ಮಾಡದೆ ಕೈ ಕಟ್ಟಿ ಕುಳಿದರೆ ಇಡೀ ದೇಶಕ್ಕೆ ಹಸಿವು ಕಾಡುತ್ತದೆ. ಆದ ಕಾರಣ ಯಾರೂ ರೈತರನ್ನು ಕೀಳಾಗಿ ಕಾಣದೆ ಗೌರವಿಸಿ ಎಂದು ಡಾ.ಕವಿತಾ ಮಿಶ್ರಾ ಅವರು ಸಲಹೆ ನೀಡಿದರು.

ವಿದ್ಯುತ್ ಸರಬರಾಜು ಖಾಸಗೀಕರಣ ವಿರೋಧಿಸಿ ಕಬ್ಬು ಬೆಳೆಗಾರರಿಂದ ಚೆಸ್ಕಾಂ ಎಂಡಿಗೆ ಮನವಿ

ಮೈಸೂರು, ಜೂ.12 (ಎಂಕೆ)– ವಿದ್ಯುತ್ ಸರಬರಾಜು ಖಾಸಗೀಕರಣ ಕೈಬಿಡುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಶುಕ್ರವಾರ ಚೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯದ ವಿದ್ಯುತ್ ಪ್ರಸರಣ ನಿಗಮವನ್ನು ಖಾಸಗೀಕರಣ ಮಾಡುವುದರಿಂದ ರೈತರಿಗೆ ತೊಂದರೆ ಎದುರಾಗಲಿದ್ದು, ಖಾಸಗೀ ಕರಣದ ಹೊಡೆತದಿಂದ ಕೃಷಿ ಉತ್ಪನ್ನ ಕುಂಠಿತವಾಗಲಿದೆ ವಿದ್ಯುತ್ ಪೂರೈಕೆಯು ಸರ್ಕಾರದ ಮೂಲ ಜವಾಬ್ದಾರಿಯಾಗಿದ್ದು, ಇದನ್ನು ಖಾಸಗಿ ಕಂಪನಿಗಳಿಗೆ ವಹಿಸಿದರೆ, ಅವರು ಇನ್ನಿಲ್ಲದ ನಿಯಮ ಮತ್ತು ಷರತ್ತುಗಳನ್ನು ವಿಧಿಸುತ್ತಾರೆ. ಇದರಿಂದ ಸಮರ್ಪಕವಾದ ವಿದ್ಯುತ್ ಪೂರೈಕೆಯಾಗದೆ ಕೃಷಿ ಚಟುವಟಿಕೆಗೆ ತೊಂದರೆಯುಂಟಾಗಲಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗೀಕರಣ ಯೋಜನೆಯನ್ನು ಸರ್ಕಾರ ಕೈಬಿಡಬೇಕೆಂದು ಒತ್ತಾಯಿಸಿದರು. ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ರೈತ ಮುಖಂಡರಾದ ರಾಜು. ಒಳಗೆರೆ ಗಣೇಶ ಕೆರೆಹುಂಡಿ ರಾಜಣ್ಣ, ನಾಗರಾಜ್, ಹನುಮಯ್ಯ, ಹೆಚ್.ಪ್ರಕಾಶ್, ಮಲಿಯೂರು ಮಹೇಂದ್ರ, ಸೋಮಣ್ಣ, ಅಂಡುವಿನಹಳ್ಳಿ ಮಹೇಶ್, ಬಿದರಳ್ಳಿ ಮಾದಪ್ಪ, ಸ್ಯಾಂಡಹಳ್ಳಿ ಬಸವರಾಜು, ನಾಗರಾಜಪ್ಪ ಕಿಲ್ಲಪುರ ನಂದೀಶ್, ಕೆರಹಳ್ಳಿ ರವಿ, ದೇವಿ ರಮ್ಮನಹಳ್ಳಿ ಪುಟ್ಟಸ್ವಾಮಿ ಮತ್ತಿತರರಿದ್ದರು.



ವಿದ್ಯುತ್ ಖಾಸಗೀಕರಣ ಕೈಬಿಡುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಶುಕ್ರವಾರ ಮೈಸೂರಿನ ಚೆಸ್ಕಾಂನ ಕಚೇರಿ ಅಧಿಕಾರಿಗಳ ಮೂಲಕ ಎಂಡಿಗೆ ಮನವಿ ಸಲ್ಲಿಸಲಾಯಿತು.

ನಕ್ಕರೆ ಅದೇ ಸ್ವರ್ಗ

ಯಮ : ಇವನು ಏನು ಮಾಡಿದ್ದಾನೆ?
ಚಿತ್ರಗುಪ್ತ : ಪ್ರೀತಿ ಮಾಡಿದ್ದಾನೆ.
ಯಮ : ಹಾಗಾದರೆ ಇವನನ್ನು ಸ್ವರ್ಗಕ್ಕೆ ಕಳುಹಿಸಿ.
ಚಿತ್ರಗುಪ್ತ : ಯಾಕೆ ಮಹಾಪ್ರಭು?
ಯಮ : ಇವನು ಈಗಾಗಲೇ ನರಕ ಕಂಡಿದ್ದಾನೆ. ಅದಕ್ಕೆ.

ಮೈಸೂರು ಮಿತ್ರ

ಶನಿವಾರ, ಜೂನ್ 13, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಎಲ್ಲಾ ಗೊತ್ತಿದ್ದು, ಗೊತ್ತಿಲ್ಲದಂತೆ ಇದ್ದು ಬಿಡು. ಅರ್ಥ ಮಾಡಿಕೊಂಡವರು ಜೊತೆಗುಳಿಯುತ್ತಾರೆ. ಅನುಮಾನಪಟ್ಟವರು ದೂರ ಸರಿದು ಹೋಗುತ್ತಾರೆ..!!

ವೇದ ಸುಳ್ಳಾದರೂ } ಬಿಡುಕು ಮಾತಿಗೆ
ಗಾದೆ ಸುಳ್ಳಾಗದು } ಮಾಡಿಕೊಳ್ಳದಿರು ಕೆಡುಕು.

ನಿಮ್ಮ ಪತ್ರಗಳು

ಖಾತೆ ಹಂಚಿಕೆ : ರಾಜ್ಯದ ಹಿತಾಸಕ್ತಿಯಿರಲಿ

ಮಾನ್ಯರೆ,

ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ವಾರ ಕಳೆದರೂ ಖಾತೆಯ ಕ್ಯಾತೆ ಕೊನೆಗೊಂಡಿಲ್ಲ. ಸಚಿವ ಸಂಪುಟವನ್ನು ರಚಿಸುವಾಗ ಪ್ರದೇಶ, ಜಾತಿ, ಜೇಷ್ಠತೆ, ಪಕ್ಷಕ್ಕೆ ಸಲ್ಲಿಸಿದ ಸೇವೆ ಮುಂತಾದವುಗಳನ್ನು ಪರಗಣಿಸಬೇಕಾಗಿರುವುದು ಅನಿವಾರ್ಯವಾದರೂ, ಖಾತೆ ಹಂಚಿಕೆ ಮಾಡುವಾಗ ಮುಖ್ಯಮಂತ್ರಿಗಳಿಗೆ ಪರಮಾಧಿಕಾರ ಇದ್ದಾಗ್ಯೂ ಇವರು ಮತ್ತು ಹೈಕಮಾಂಡ್ ತಮ್ಮ ಸ್ವಹಿತಾಸಕ್ತಿ ಬಿಟ್ಟು ಸಾಧ್ಯವಾದಷ್ಟು ಸಚಿವರ ಕಾರ್ಯಕ್ಷಮತೆ, ಬುದ್ಧಿಕೌಶಲ್ಯ, ಅವರ ಜ್ಞಾನದ ಮಟ್ಟ, ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಹಿತದೃಷ್ಟಿಯಿಂದ ಹಂಚಿಕೆ ಮಾಡುವುದು ಒಳಿತು. ಕೃಷ್ಣಬೈರೇಗೌಡರು ಹಿಂದಿನ ಸರ್ಕಾರದಲ್ಲಿ ಬಹಳ ಪಾರದರ್ಶಕವಾದ ಹತ್ತು ಹಲವಾರು ಜನೋಪಯೋಗಿ ಕೆಲಸಗಳನ್ನು ಕಂದಾಯ ಇಲಾಖೆಯಲ್ಲಿ ನಿರ್ವಹಿಸಿರುವುದು ಪ್ರತಿಯೊಬ್ಬ ನಾಗರಿಕನಿಗೂ ತಿಳಿದಿದೆ.

ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಅವರಿಗೆ ನೀಡಿ ಇದಕ್ಕೆ ಪೂರಕವಾಗಿ ಸಮನ್ವಯ ಸಾಧಿಸಬೇಕಾದಂತಹ ಬಿ.ಡಿ.ಎ ಮತ್ತು ಬಿಎಂಆರ್‌ಡಿಎ ಉಸ್ತುವಾರಿಯನ್ನು ನೀಡದಿದ್ದರೆ ಹಲ್ಲು ಕಿತ್ತ ಹಾವಿನಂತೆ ಕೇವಲ ಬುಸುಗುಟ್ಟಲು ಸೀಮಿತಗೊಳಿಸಿದಂತಾಗುತ್ತದೆ. ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು ಸರ್ಕಾರಕ್ಕೆ ಮತ್ತು ರಾಜ್ಯಕ್ಕೆ ಒಳ್ಳೆಯ ಹೆಸರು ತರಲು ಇಂತಹ ದಕ್ಷ ಮತ್ತು ಅರ್ಹ ಸಚಿವರನ್ನು ಉಪಯೋಗಿಸಿಕೊಳ್ಳಬೇಕು. ಬೆಂಗಳೂರು ಅಭಿವೃದ್ಧಿ ಸಚಿವರು ನಗರದ ಸಮಗ್ರ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಇಲಾಖೆಯ ಮೇಲೆ ಪೂರ್ಣ ನಿಯಂತ್ರಣ ಇಲ್ಲದೆ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಬಹಳ ಕಷ್ಟಕರ. ಈ ದಿಸೆಯಲ್ಲಿ ಸಚಿವರು ಸ್ವತಂತ್ರವಾಗಿ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಂಡು ದಕ್ಷ ಆಡಳಿತ ನೀಡಿ ಅಭಿವೃದ್ಧಿ ಸಾಧಿಸಲು ಅನುಕೂಲವಾಗುವಂತೆ ಖಾತೆ ಹಂಚಿಕೆ ಮಾಡಿ. ಇಲ್ಲವೇ ಮುಖ್ಯಮಂತ್ರಿಗಳಿಗೆ ಸ್ವಹಿತಾಸಕ್ತಿ ಇದ್ದಲ್ಲಿ ಆ ಖಾತೆಯನ್ನು ತಾವೇ ಇಟ್ಟುಕೊಂಡು ಸ್ವತಂತ್ರವಾಗಿ ನಿರ್ವಹಿಸುವಂತಹ ಬೇರೆ ಯಾವುದಾದರೂ ಖಾತೆಯನ್ನು ಕೃಷ್ಣಬೈರೇಗೌಡರಿಗೆ ನೀಡುವುದು ಸೂಕ್ತ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಸರ್ಕಾರದ ಬೇಜವಾಬ್ದಾರಿತನಕ್ಕೆ ಸಾರ್ವಜನಿಕರ ಹಣ ಪೋಲು

ಮಾನ್ಯರೆ,

ಇತ್ತೀಚಿನ ವರದಿಗಳ ಪ್ರಕಾರ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಗೃಹಲಕ್ಷ್ಮಿ ಅಡಿಯಲ್ಲಿ ಮೃತಪಟ್ಟವರ ಖಾತೆಗಳಿಗೆ ಸುಮಾರು 120 ಕೋಟಿ ರೂಪಾಯಿ ಪಾವತಿಯಾಗಿರುವುದು ತೀವ್ರ ಆಘಾತಕಾರಿ ಸಂಗತಿಯಾಗಿದೆ. ಇದು ಸಂಪೂರ್ಣವಾಗಿ ಸರ್ಕಾರದ ಉದಾಸೀನತೆ ಮತ್ತು ಆಡಳಿತ ಯಂತ್ರದ ಬೇಜವಾಬ್ದಾರಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ತಳಮಟ್ಟದಲ್ಲಿ ಅರ್ಹ ಫಲಾನುಭವಿಗಳ ಸರಿಯಾದ ಪರಿಶೀಲನೆ ಹಾಗೂ ತಂತ್ರಜ್ಞಾನದ ಕೊರತೆಯಿಂದಾಗಿ ಸಾರ್ವಜನಿಕರ ತೆರಿಗೆ ಹಣವು ಹೀಗೆ ಪೋಲಾಗಿರುವುದು ಖಂಡನೀಯ.

ಈಗ ವಂಚನೆ ತಡೆಯಲು ಬಯೋಮೆಟ್ರಿಕ್ ವ್ಯವಸ್ಥೆಯನ್ನು ಕಡ್ಡಾಯಗೊಳಿಸುತ್ತಿರುವುದು ಸ್ವಾಗತಾರ್ಹವಾದರೂ ಇಂತಹ ಮುನ್ನೆಚ್ಚರಿಕೆಯನ್ನು ಯೋಜನೆ ಆರಂಭಿಸುವ ಮೊದಲೇ ತೆಗೆದುಕೊಳ್ಳಬೇಕಿತ್ತು. ಸರ್ಕಾರದ ಈ ಆತುರದ ನಿರ್ಧಾರ ಮತ್ತು ಉದಾಸೀನತೆಯಿಂದಾಗಿ ಕೋಟ್ಯಂತರ ರೂಪಾಯಿ ಸಾರ್ವಜನಿಕ ಧನ ವ್ಯರ್ಥವಾಗಿದೆ. ಇನ್ನಾದರೂ ಇಂತಹ ಗಂಭೀರ ತಪ್ಪುಗಳು ಮರುಕಳಿಸದಂತೆ ಮತ್ತು ಭ್ರಷ್ಟಾಚಾರ ನಡೆಯದಂತೆ ಸರ್ಕಾರವು ಕಟ್ಟುನಿಟ್ಟಿನ ಹಾಗೂ ಪಾರದರ್ಶಕ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಹಣದ ದುರುಪಯೋಗಕ್ಕೆ ಕಾರಣರಾದವರ ಮೇಲೆ ಕಠಿಣ ಕಾನೂನು ಕ್ರಮ ಅಗತ್ಯವಿದೆ.

–ಡಾ.ಎಚ್.ಕೆ.ವಿಜಯಕುಮಾರ್, ಮೈಸೂರು.

ಬೇಗ ಪೂರ್ಣ ಮಂತ್ರಿ ಮಂಡಲ ರಚಿಸಿ; ರಾಜ್ಯಕ್ಕೆ ಒಳ್ಳೆಯ ಆಡಳಿತ ನೀಡಲಿ

ಮಾನ್ಯರೆ,

ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದೇ ತಳ ಮಟ್ಟದಿಂದ ತನ್ನ ಸ್ವಸಾಮರ್ಥ್ಯದಿಂದಲೇ ಜೀವನದ ಮಹತ್ವಾಕಾಂಕ್ಷೆಯಾದ ಮುಖ್ಯಮಂತ್ರಿ ಸ್ಥಾನಕ್ಕೆ ಏರಿದ ಡಾ.ಕೆ.ಶಿವಕುಮಾರ್ ಅವರು ಛಲದಂಕಮಲ್ಲನೇ ಸರಿ. ಆದರೆ ಈಗ ಇವರು ತಮ್ಮ ನಿಜವಾದ ನಾಯಕತ್ವವನ್ನು ರಾಜ್ಯಕ್ಕೆ ತೋರಬೇಕು. ಮೊದಲ ಹಂತದ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳೇ ಇನ್ನೂ ತಮ್ಮ ಖಾತೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಇನ್ನು ಕೆಲವರು ತಮಗೆ ದೊರೆತ ಖಾತೆಗಳನ್ನೇ ವಹಿಸಿಕೊಂಡಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇನ್ನೂ ಪೂರ್ಣ ಪ್ರಮಾಣದ ಮಂತ್ರಿ ಮಂಡಲವೇ ರಚನೆಯಾಗಿಲ್ಲ. ಆಗಲೇ ಹೈಕಮಾಂಡ್‌ಗೆ ವರದಿ ಒಪ್ಪಿಸಲು ದೆಹಲಿಗೆ ತೆರಳಿದ್ದಾರೆ. ಕಳೆದ ಎರಡು ದಿನಗಳಿಂದ ಹಿರಿಯ ಅಧಿಕಾರಿಗಳ ವರ್ಗಾವಣೆ ಎಗ್ಗಿಲ್ಲದೆ ಸಾಗಿದೆ. ಹೀಗಾದರೆ ರಾಜ್ಯದಲ್ಲಿ ಆಡಳಿತ ನಡೆಯುವುದಾದರೂ ಹೇಗೆ? ರಾಜ್ಯದ ಮುಖ್ಯಮಂತ್ರಿ ಆಗುವುದು ಎಷ್ಟು ಕಷ್ಟವೋ, ಅದಕ್ಕಿಂತಲೂ ಖಾತೆ ಹಂಚಿಕೆ ಮಾಡುವುದು ದೊಡ್ಡ ತಲೆನೋವು ಎನ್ನುತ್ತಿದ್ದರು ದಿವಂಗತ ರಾಮಕೃಷ್ಣ ಹೆಗಡೆ ಅವರು. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಆದಷ್ಟು ಬೇಗ ಪೂರ್ಣ ಪ್ರಮಾಣದ ಮಂತ್ರಿ ಮಂಡಲ ರಚಿಸಿ, ರಾಜ್ಯಕ್ಕೆ ಒಳ್ಳೆಯ ಆಡಳಿತ ನೀಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಹೆಣ ಬಿದ್ದರೂ ಹಣ ಮಾಡುವ ದಂಧೆ!

ಮಾನ್ಯರೇ,

ಎಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್ ಪೋಸ್ಟ್‌ನಿಂದ ವಿವಿಧ ಮಾರ್ಗವಾಗಿ ಸಾಗುವ ಬಹುತೇಕ ಖಾಸಗಿ ವಾಹನಗಳಾದ ಆಟೋ, ಟೆಂಪೋ, ಕ್ರೂಸರ್ ವಾಹನ ಸವಾರರು ತಮ್ಮ ಹಣದ ಆಸೆಗೆ ಪ್ರಯಾಣಿಕರ ಸುರಕ್ಷತೆಯನ್ನೇ ಮರೆತು ಅವರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ನಿಗದಿತ ಸಂಖ್ಯೆಗಿಂತ ಪ್ರಯಾಣಿಕರನ್ನು ತುಂಬಿಕೊಳ್ಳುವುದು, ಅತಿಯಾದ ವೇಗ, ಸರ್ಕಾರಿ ಬಸ್ಸುಗಳ ವೇಗಕ್ಕೆ ಮುಂಚಿತವಾಗಿ ಇರಬೇಕು ಎಂಬ ದುರಾಸೆಯಿಂದ ಜನರ ಜೀವವನ್ನು ಪಣಕ್ಕಿಡುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಮತ್ತು ತಾಲೂಕು ಆಡಳಿತ ಸೂಕ್ತ ಕ್ರಮ ಜರುಗಿಸಬೇಕು. 10 ರಿಂದ 22 ಜನರನ್ನು ಮೀರಿ ಹೆಚ್ಚಾಗಿ ಪ್ರಯಾಣಿಕರನ್ನು ತುಂಬಿಸಿಕೊಳ್ಳುತ್ತಿದ್ದಾರೆ. ಪ್ರಶ್ನೆ ಮಾಡಿದರೆ ಪ್ರಯಾಣಿಕರ ಮೇಲೆ ಮುಗಿಬೀಳುತ್ತಾರೆ. ಪೊಲೀಸ್, ಸಂಬಂಧಪಟ್ಟ ಅಧಿಕಾರಿಗಳಿಗೂ ಕ್ಯಾರೆ ಎನ್ನದ ವಾಹನ ಮಾಲೀಕರು, ತಮಗಿಷ್ಟ ಬಂದಂತೆ ಅಡ್ಡಾದಿಡ್ಡಿ ವಾಹನ ನಿಲ್ಲಿಸುವುದು ಸೇರಿದಂತೆ ಪ್ರಯಾಣಿಕರ ಜೀವವನ್ನು ಪ್ರಮಾದಕ್ಕೆ ಸಿಲುಕಿಸಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಮತ್ತು ಸ್ಥಳೀಯ ಶಾಸಕರು ಕ್ರಮ ಕೈಗೊಂಡು ಸಮಸ್ಯೆ ಪರಿಹರಿಸಬೇಕು.

–ಅನಿಲ್ ಮಳಲಿ, ಸ್ಥಳೀಯ ನಿವಾಸಿ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ನಮ್ಮ ಬದುಕನ್ನು ನಾವೇ ರೂಪಿಸಿಕೊಳ್ಳಬೇಕು...!

ನಮ್ಮ ಬದುಕು ಹೇಗಿರಬೇಕು ಎಂದು ನಿರ್ಧರಿಸುವ ಹಕ್ಕು ನಮಗೆ ಇದೆ. ಆದರೆ ಅದು ಬಲವಂತಕ್ಕೆ ಕಟ್ಟುಬಿದ್ದು ಅಡ್ಡದಾರಿ ಹಿಡಿಯಬಾರದು. ನಾನು ಹೀಗೇ ಇರುತ್ತೇನೆ ಎಂದು ನಿರ್ಧರಿಸಿ ಅದರಂತೆ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಬಹುತೇಕರ ಜೀವನ ಗಾಳಿ ಬಂದೆಡೆ ತೂರುವುದು ಎಂಬ ರೀತಿಯಲ್ಲೇ ಆಗುತ್ತಿದೆ. ನಮಗೆ ನಮ್ಮ ಜೀವನದ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣಗಳು ಹಲವಿರಬಹುದು. ನಾನು ಇಷ್ಟಪಡುವ ಕೆಲಸ ನನಗೆ ಸಿಗಲಿಲ್ಲ, ಈಗ ಸಿಕ್ಕಿರುವ ಕೆಲಸ ನನಗೆ ಇಷ್ಟವಿಲ್ಲ. ಆದರೆ ಏನು ಮಾಡುವುದು ಜೀವನ ನಡೆಯಬೇಕಲ್ಲ. ಹಾಗಾಗಿ ಸಿಕ್ಕ ಕೆಲಸವನ್ನು ಹೇಗೋ ನಿಭಾಯಿಸುತ್ತಿದ್ದೇನೆ ಎಂಬ ಮಾತುಗಳ ಸಮರ್ಥನೆ ಬಹುತೇಕರಲ್ಲಿ ಕೇಳಿ ಬರುತ್ತದೆ.

ನನ್ನ ಜೀವನ ಹೀಗೇ ಇರಬೇಕು ಎಂದು ನಿರ್ಧರಿಸುವವರು ಯಾರು? ಹಾಗೂ ಅದು ಯಾವ ವಯಸ್ಸಿನಲ್ಲಿ ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಾವು ಇಂದಿನ ಶೈಕ್ಷಣಿಕ ಹಾಗೂ ಸಾಮಾಜಿಕ ವ್ಯವಸ್ಥೆ ಗಮನಿಸಿದರೆ ನಮಗೆ ನಮ್ಮ ಜೀವನದ ಬಗ್ಗೆ ನಿರ್ಧಾರ ಕೈಗೊಳ್ಳಲು ಕಷ್ಟವಾಗುತ್ತಿದೆ. ಇತ್ತೀಚೆಗೆ ಒಬ್ಬರ ಮಗ ಎಸ್‌ಎಸ್‌ಎಲ್‌ಸಿ ಮುಗಿಸಿದ ನಂತರ ಮಾಮೂಲಿಯಂತೆ ಅವನನ್ನು ಪಿಯುಸಿಗೆ ಸೇರಿಸುವುದು ಮನೆಯವರ ಉದ್ದೇಶ. ಅದು ಸರಿಯೇ. ಆ ಹಂತದಲ್ಲಿ ನಮಗೆ ಇದೊಂದೇ ದಾರಿ ಎಂಬಂತೆ ಕಂಡುಬರುತ್ತಿದೆ.

ಆದರೆ ಅಲ್ಲಿಯೂ ಹತ್ತಾರು ಬಗೆಯ ಅವಕಾಶಗಳು ಇವೆಯಾದರೂ ತಂದೆ–ತಾಯಿ ಯೋಚಿಸುವುದು ಮಗುವಿನ ಮುಂದಿನ ವಿದ್ಯಾಭ್ಯಾಸಕ್ಕಿಂತ ಅವನು ಮುಂದೆ ಓದಿ ದೊಡ್ಡ ಹುದ್ದೆಗೆ ಸೇರಿ ಕೈತುಂಬಾ ಹಣ ಗಳಿಸಬೇಕು ಎಂಬುದಾಗಿರುತ್ತದೆ. ಹಾಗಾಗಿ ಮಗನಿಗೆ/ಮಗಳಿಗೆ ಮುಂದೆ ಪಿಯುಸಿಯಲ್ಲಿ ಯಾವ ಕಾಂಬಿನೇಷನ್ ಕೊಡಿಸಬೇಕು ಎಂಬ ಬಗ್ಗೆ ಸಹಜವಾಗೇ ಗೊಂದಲವಾಗುತ್ತದೆ. ಆಗ ಅವರು ನೋಡುವುದು ಪಿಯುಸಿ ನಂತರ ಇಂಜಿನಿಯರ್ ಆಗಿ ಹೆಚ್ಚು ವೇತನ ಪಡೆಯುವವರು ಯಾವ ವಿಭಾಗದಲ್ಲಿ ಓದಿದರು ಎಂಬ ಬಗ್ಗೆ, ಅದೂ ತನ್ನ ನೆಂಟರಿಷ್ಟರು, ಸ್ನೇಹಿತರ ಗುಂಪಿನಲ್ಲೇ ತಡಕಾಟ ಮಾಡಿ, ಅದರಲ್ಲಿ ಯಾರು ಹೆಚ್ಚು ಸಂಪಾದಿಸುತ್ತಿದ್ದಾರೋ, ಅವರು ಓದಿದ ವಿಷಯದ ಬಗ್ಗೆ ತಮ್ಮ ಮಗ/ಮಗಳು ಓದಿದರೆ ಸರಿ ಎಂದು ಅಂತಹ ಕಾಂಬಿನೇಷನ್ ಅನ್ನು ಕೊಡಿಸುತ್ತಾರೆ.

ಆದರೆ ಅವನ ಆಸಕ್ತಿಯ ವಿಷಯ ಯಾವುದು ಎಂದು ಅವರು ಗಮನಿಸುವುದಿಲ್ಲ ಅಥವಾ ಅವರನ್ನು ಕೇಳುವುದೂ ಇಲ್ಲ. ಇಂದು ಮಕ್ಕಳ ವಿದ್ಯಾಭ್ಯಾಸ ಎಂದರೆ ಮುಂದೆ ಕೈತುಂಬಾ ಸಂಪಾದಿಸುವುದು ಎಂಬಂತೆ ಭಾಸವಾಗತೊಡಗಿದೆ. ಅದೇ ಪಿಯುಸಿಯಲ್ಲಿ ವಾಣಿಜ್ಯ, ಕಲಾ ವಿಭಾಗಗಳಿವೆ. ಅಲ್ಲಿಯೂ ಹತ್ತಾರು ತರಹದ ವಿಷಯ ಪಡೆದು ಓದಬಹುದು. ಆದರೆ ಪೋಷಕರ ಕಣ್ಣು ಅದರತ್ತ ಹೋಗುವುದಿಲ್ಲ. ವಿಜ್ಞಾನದ ವಿಷಯ, ಅದರಲ್ಲೂ ಇಂಜಿನಿಯರಿಂಗ್ ವಿಷಯ, ಅದರಲ್ಲೂ ಮುಂದೆ ಹೆಚ್ಚು ವೇತನ ಪಡೆಯುವ ವಿಷಯ ಇದೇ ಅವರ ಆದ್ಯತೆಯಾಗಿಬಿಟ್ಟಿದೆ. ಬೇರೆ ವಿಷಯಗಳ ಅವರು ಗಮನಿಸುವುದೇ ಇಲ್ಲ. ಅವರ ಪಾಲಿಗೆ ಅವೆಲ್ಲಾ ಅಪ್ರಯೋಜಕ.

ಇತ್ತೀಚೆಗೆ ಒಬ್ಬ ಪ್ರೌಢಶಾಲಾ ಶಿಕ್ಷಕರೊಡನೆ ಮಾತನಾಡುವ ಅವಕಾಶ ಲಭಿಸಿತ್ತು. ಅವರು ತಮ್ಮ ಕೆಲಸವನ್ನು ಬಹಳವಾಗಿ ಪ್ರೀತಿಸುವವರು. ಬಹಳ ವರ್ಷದಿಂದ ನಗರದಿಂದ ಸಾಕಷ್ಟು ದೂರದ ಊರಿನಲ್ಲಿ ಕೆಲಸ ಮಾಡುತ್ತಾರೆ. ನೀವೇಕೆ ನಗರಕ್ಕೆ ವರ್ಗಾವಣೆ ತೆಗೆದುಕೊಳ್ಳಬಾರದು? ಎಂದು ಕೇಳಿದರೆ ಅವರ ಉತ್ತರ 'ಎಲ್ಲರೂ ತಮ್ಮ ಅನುಕೂಲ ಹಾಗೂ ಖುಷಿಗಾಗಿ ನಗರಕ್ಕೇ ಹೋದರೆ ಗ್ರಾಮೀಣ ಭಾಗದ ಮಕ್ಕಳ ಗತಿ ಏನು? ನನಗೆ ಸ್ವಲ್ಪ ತೊಂದರೆಯಾಗುತ್ತದೆ ನಿಜ. ಆದರೆ ನಾನು ಗ್ರಾಮಾಂತರದ ನನ್ನ ಶಾಲೆಗೆ ಹೋದಮೇಲೆ ಅದನ್ನು ಮರೆಯುತ್ತೇನೆ. ಅಲ್ಲಿನ ಮಕ್ಕಳು ದೊಡ್ಡ ಹುದ್ದೆಗೆ ಏರಬೇಕು ಎಂಬುದು ನನ್ನ ಕಾಳಜಿ.

ನಗರ ಪ್ರದೇಶದ ಮಕ್ಕಳಿಗೆ ಹೇಗೋ ಅವಕಾಶಗಳು ಸಿಗುತ್ತದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಪೋಷಕರಿಗೆ ತಮ್ಮ ಮಕ್ಕಳು ಮುಂದೆ ಏನು ಓದಬೇಕು ಎಂಬುದೇ ತಿಳಿದಿಲ್ಲ. ಬೇರೆಬೇರೆ ಅವಕಾಶಗಳ ಬಗ್ಗೆಯೂ ಅವರಿಗೆ ಅರಿವಿಲ್ಲ. ಆದ್ದರಿಂದ ಅವರಿಗೆ ನಾನು ನನ್ನ ಕೈಲಾದ ಮಾರ್ಗದರ್ಶನ ಮಾಡುತ್ತೇನೆ. ನಾನು ವೇತನ ಪಡೆಯುತ್ತಿರುವುದು, ನಾನು ಕೆಲಸ ಮಾಡುತ್ತಿರುವುದು ಇಂತಹವರಿಗಾಗಿಯೇ' ಎಂದರು. ಅಲ್ಲದೆ ಅವರ ಕಾಳಜಿ ಎಂದರೆ 'ನಿಜ, ಇಂದು ನಮ್ಮ ಗ್ರಾಮೀಣ ಮಕ್ಕಳ ಪೋಷಕರು ನಗರದವರಂತೆ ಹಣ ಮಾಡುವ ಹುದ್ದೆಯ ಕುರಿತೇ ಯೋಚಿಸುತ್ತಾರೆ. ಆದರೆ ಅವರಿಗೆ ಒಬ್ಬ ಶಿಕ್ಷಕ, ಪೋಸ್ಟ್‌ಮೆನ್, ಗ್ರಾಮೀಣ ಬ್ಯಾಂಕಿನ ನೌಕರ, ಗ್ರಾಮ ಸಹಾಯಕ, ಪಂಚಾಯತಿಯ ನೌಕರರು ಕಣ್ಣಿಗೆ ಬೀಳುವುದಿಲ್ಲ. ಇಂದು ನನಗೆ ಆತಂಕವಾಗುತ್ತಿರುವುದು ಏನೆಂದರೆ, ಮುಂದೆ ಶಿಕ್ಷಕ ವೃತ್ತಿಗೆ ನಿಷ್ಠರು ಬರುವುದಿಲ್ಲವೇನೋ ಎನಿಸತೊಡಗಿದೆ.



> ಓದು ಎಂದರೆ ಮುಂದೆ ಹಣ ಮಾಡುವ ದಾರಿ ಎಂಬ ಭಾವನೆಯ ಬದಲು ಅದು ಈ ದೇಶದ ಮುಂದಿನ ಸಮಾಜ ನಿರ್ಮಾಣದ ಕಾರ್ಯವೂ ಹೌದು ಎಂಬ ಯೋಚನೆ ಬದಲಾಗಿರುವಂತೆ ಕಾಣಿಸುತ್ತಿದೆ. ಇದು ಸರಿ ಎನ್ನಿಸುವುದಿಲ್ಲ. ನಾವು ಮಾಡುವ ಯಾವ ಕೆಲಸವೂ ಕನಿಷ್ಠವಲ್ಲ ಎಂಬುದನ್ನು ಮೊದಲು ಅರಿಯಬೇಕು. ಆ ಕೆಲಸ ನಾನು ಕೈಗೊಂಡಾಗಿದೆ. ಅದರಲ್ಲಿ ಉತ್ತಮ ಸಾಧನೆ ಮಾಡುತ್ತೇನೆಂಬ ಆಲೋಚನೆ ಮೂಡಬೇಕು.

ಇಂದಿನ ಶಿಕ್ಷಕರೂ ತಮಗೆ ದೊಡ್ಡ ಹುದ್ದೆ ಸಿಗಲಿಲ್ಲ. ಏನೋ ಕೆಲಸ ಮಾಡಬೇಕು ಅದಕ್ಕಾಗಿ ಈ ಕೆಲಸ ಮಾಡುತ್ತಿದ್ದೇವೆ ಎಂಬ ಮನೋಭಾವದಿಂದ ಬರುವವರೇ ಹೆಚ್ಚಾಗಿ ಕಂಡುಬರುತ್ತಿದ್ದಾರೆ. ಹೀಗಾದರೆ ಮುಂದೆ ಶಿಕ್ಷಣ ಕ್ಷೇತ್ರವು ದುರ್ಬಲವಾಗುತ್ತದೆ, ಮಕ್ಕಳಿಗೆ ಸರಿಯಾದ ಶಿಕ್ಷಣವೇ ಸಿಗುವುದಿಲ್ಲ. ಯಾವುದೇ ದೇಶದ ಶಿಕ್ಷಣ ವ್ಯವಸ್ಥೆ ಸರಿಯಿದ್ದಾಗ ಮಾತ್ರ ಆ ದೇಶ ಪ್ರಗತಿ ಕಾಣಲು ಸಾಧ್ಯ. ಆದರೆ ನನಗೆ ನಮ್ಮ ದೇಶದ ಭವಿಷ್ಯದ ಬಗ್ಗೆ ಆತಂಕವಾಗುತ್ತಿದೆ ಎಂದರು. ಅವರದ್ದು ಪ್ರಾಮಾಣಿಕ ಅಭಿಪ್ರಾಯ. ಅವರು ತಮ್ಮ ಜೀವನ ಗ್ರಾಮೀಣ ಭಾಗದ ಮಕ್ಕಳಿಗಾಗಿ ಮೀಸಲು ಎಂದು ಭಾವಿಸಿದ್ದಾರೆ.

ಇದು ನಿಜವೂ ಹೌದು. ಓದು ಎಂದರೆ ಮುಂದೆ ಹಣ ಮಾಡುವ ದಾರಿ ಎಂಬ ಭಾವನೆಯ ಬದಲು ಅದು ಈ ದೇಶದ ಮುಂದಿನ ಸಮಾಜ ನಿರ್ಮಾಣದ ಕಾರ್ಯವೂ ಹೌದು ಎಂಬ ಯೋಚನೆ ಬದಲಾಗಿರುವಂತೆ ಕಾಣಿಸುತ್ತಿದೆ. ಇದು ಸರಿ ಎನ್ನಿಸುವುದಿಲ್ಲ. ನಾವು ಮಾಡುವ ಯಾವ ಕೆಲಸವೂ ಕನಿಷ್ಠವಲ್ಲ ಎಂಬುದನ್ನು ಮೊದಲು ಅರಿಯಬೇಕು. ಆ ಕೆಲಸ ನಾನು ಕೈಗೊಂಡಾಗಿದೆ, ಅದರಲ್ಲಿ ಉತ್ತಮ ಸಾಧನೆ ಮಾಡುತ್ತೇನೆ ಎಂಬ ಆಲೋಚನೆ ಮೂಡಬೇಕು.

ಇಂದು ಸಮಾಜದಲ್ಲಿ ಅಂತಹ ಹಲವು ರೀತಿಯ ಕೆಲಸಗಳು ಇವೆ. ನಮ್ಮ ಮನೆಯಲ್ಲಿ ನಲ್ಲಿ ಕೆಟ್ಟುಹೋದರೆ ಅದನ್ನು ದುರಸ್ತಿ ಮಾಡಲು ನಮಗೆ, ನಮ್ಮ ಮಕ್ಕಳಿಗೆ ಬಾರದು. ನಮ್ಮ ಮನೆಯ ಬಳಕೆಯ ಒಂದು ವಿದ್ಯುತ್ ಉಪಕರಣ ಕೆಟ್ಟರೆ ನಮ್ಮ ದೈನಂದಿನ ಜೀವನ ಅಸ್ತವ್ಯಸ್ತವಾದಂತೆ, ಅದನ್ನು ದುರಸ್ತಿ ಮಾಡುವವರು ಬರುವವರೆಗೆ ನಮಗೆ ಚಡಪಡಿಕೆ ಉಂಟಾಗುತ್ತದೆ. ಅದು ದುರಸ್ತಿಯಾದ ನಂತರ ಆ ಕೆಲಸ ಮಾಡಿದವರನ್ನು ನಾವು ಮರೆಯುತ್ತೇವೆ. ಆದರೆ ಅಂತಹ ಕೆಲಸ ಮಾಡುವುದೂ ಬದುಕೇ ಎಂಬುದನ್ನು ನಾವು ಯೋಚಿಸುವುದಿಲ್ಲ. ನಮ್ಮ ಮಕ್ಕಳು ಅಂತಹ ಕೆಲಸ ಕಲಿಯಲಿ ಎಂದು ಬಯಸುವುದಿಲ್ಲ.

ಇತ್ತೀಚೆಗೆ ಸರ್ಕಾರವು ಹಲವು ವಿಧದ ಉದ್ಯೋಗಕ್ಕೆ ಸಂಬಂಧಿಸಿದ ಕೋರ್ಸ್‌ಗಳನ್ನು ಜಾರಿಗೆ ತಂದಿದೆ. ಅದಕ್ಕೆ ಮಕ್ಕಳು ಸೇರ್ಪಡೆಯಾಗುವುದಿಲ್ಲ ಎಂದು ಅಂತಹ ಕೋರ್ಸ್ ಓದುವ ವಿದ್ಯಾರ್ಥಿಗಳಿಗೆ ಸಹಾಯಧನ, ಹಾಸ್ಟೆಲ್ ಅನುಕೂಲ ಮಾಡಿಕೊಡುತ್ತದೆ. ಆದರೆ ಮಕ್ಕಳೇ ದಾಖಲಾಗುವುದಿಲ್ಲ. ನಮ್ಮ ಪರಿಚಿತರೊಬ್ಬರು ಒಂದು ಸಂಸ್ಥೆಯನ್ನು ಕಟ್ಟಿಕೊಂಡಿದ್ದು, ಪ್ರತಿ ಶೈಕ್ಷಣಿಕ ವರ್ಷ ಆರಂಭವಾದಾಗ ಹಲವಾರು ಗ್ರಾಮೀಣ ಭಾಗದ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ಬರೆಯುವ ಪುಸ್ತಕ, ಪೆನ್ನು ಇತ್ಯಾದಿಗಳನ್ನು ಕೊಡುತ್ತಾರೆ. ಅದಕ್ಕೆ ಅವರು ಯಾವುದೇ ಪ್ರಚಾರ ಬಯಸುವುದಿಲ್ಲ. ಇತ್ತೀಚೆಗೆ ಅವರು ಅಂತಹ ಒಂದು ಗ್ರಾಮೀಣ ಶಾಲೆಗೆ ಹೋದಾಗ ಅಲ್ಲಿ ಎಲ್ಲಾ ತರಗತಿಗಳಿಂದ ಕೇವಲ 70 ಮಕ್ಕಳು ಮಾತ್ರ ಇದ್ದರು. ಇದು ಕಳೆದ ವರ್ಷಕ್ಕಿಂತ ಕಡಿಮೆ. ಹೀಗಾದರೆ ಮುಂದೆ ನಾವು ಯಾರಿಗೆ ಇವನ್ನು ಹಂಚುವುದು ಎಂಬ ಚಿಂತೆಯಾಗಿದೆ ಎಂದು ಹೇಳಿದರು.

ಸರ್ಕಾರ ಪ್ರತಿ ವರ್ಷ ಶಾಲಾ ಶಿಕ್ಷಣಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತದೆ. ಆದರೆ ಸರ್ಕಾರಿ ಶಾಲೆಗೆ ಮಕ್ಕಳ ಸೇರ್ಪಡೆ ಕಡಿಮೆಯಾಗುತ್ತಿದೆ. ಹೇಗಾದರೂ ಸರಿ ತಮ್ಮ ಮಕ್ಕಳು ಉನ್ನತ ವೇತನ ಪಡೆಯುವವರ ಸಾಲಿನಲ್ಲಿ ನಿಲ್ಲಬೇಕು ಎಂಬ ಮನೋಭಾವದ ಪೋಷಕರು ತಮ್ಮ ಮಕ್ಕಳನ್ನು ದುಬಾರಿ ಖಾಸಗಿ ಶಾಲೆಗೆ ಸೇರ್ಪಡೆ ಮಾಡುತ್ತಿದ್ದಾರೆ. ಅವರು ಯಾರೂ ತಮ್ಮೂರಿನ ಸರ್ಕಾರಿ ಶಾಲೆಗಳ ಬಗ್ಗೆ ಯೋಚನೆಯನ್ನೇ ಮಾಡುತ್ತಿಲ್ಲ. ಮಕ್ಕಳು ಅಂತಹ ದುಬಾರಿ ಶಾಲೆಗೆ ಸೇರಿದರೆ ಅವರು ಸಮಾಜದ ಬಗ್ಗೆ ಹೇಗೆ ಕಳಕಳಿಯ ಭಾವನೆ ಬೆಳೆಸಿಕೊಳ್ಳುತ್ತಾರೆ? ಇನ್ನಷ್ಟು ವರ್ಷ ಹೀಗೇ ಆದರೆ, ಆ ಶಿಕ್ಷಕರು ಆತಂಕದಿಂದ ಹೇಳಿದಂತೆ ಮುಂದೆ ಸಾಮಾನ್ಯ ಎನಿಸಬಹುದಾದಂತಹ ಕೆಲಸಗಳಿಗೆ ಜನರೇ ಸಿಗುವುದಿಲ್ಲ. ಇದೆಲ್ಲಾ ನಮ್ಮತನದಿಂದ ದೂರ ಹೋದಂತೆ ಆಗುತ್ತಿದೆ. ಆ ರೀತಿ ವಿದ್ಯಾಭ್ಯಾಸ ಮಾಡಿದ ಮಕ್ಕಳು ಕುದುರೆಗೆ ಮುಖವಾಡ ಹಾಕಿದಂತೆ ಹೇಳಿಕೊಟ್ಟಿದ್ದನ್ನು ಬಿಟ್ಟು ಒಂದು ಹೆಜ್ಜೆಯೂ ಇತರೆ ಅಂಶಗಳ ಬಗ್ಗೆ ಗಮನಹರಿಸುವುದಿಲ್ಲ. ತಮ್ಮ ಪಾದರಕ್ಷೆ ಕಿತ್ತು ಹೋದರೆ ಅವರಿಗೆ ಗೊತ್ತಿರುವುದು ಅದನ್ನು ಬಿಸಾಡಿ ಹೊಸದನ್ನು ತೆಗೆದುಕೊಳ್ಳುವ ಬಗ್ಗೆಯೇ ಹೊರತು ಅದನ್ನು ಸರಿಪಡಿಸಿ ಹಾಕಿಕೊಳ್ಳಬಹುದು ಎಂಬುದು ಅವರಿಗೆ ತಿಳಿಯುತ್ತಿಲ್ಲ. ಆದರೆ ಶಿಕ್ಷಣ ಎಂದರೆ ಇಷ್ಟೇನೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಒಂದು ಪ್ರಸಂಗ ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಒಬ್ಬನ ಕೆಲಸ ಬಣ್ಣ ಬಳಿಯುವುದು. ಬಣ್ಣ ಬಳಿಯುವವರ ಕೆಲಸ ಎಂದರೆ ಮಾಲೀಕ ಏನು ಹೇಳುತ್ತಾನೋ ಅದರಂತೆ ಬಣ್ಣ ಬಳಿಯುವುದು ಎಂಬುದು ಸಾಮಾನ್ಯ ಅನಿಸಿಕೆ. ಅದನ್ನು ಬಿಟ್ಟು ಅವರು ಸಾಮಾನ್ಯವಾಗಿ ಬೇರೆ ಯೋಚನೆ ಮಾಡುವುದಿಲ್ಲ. ಇದು ಹಣಕ್ಕಾಗಿ ಕೆಲಸ ಮಾಡುವವರ ಮನೋಭಾವ. ಅದನ್ನು ಹೊರತುಪಡಿಸಿ, ತನ್ನ ಅನುಭವದ ಆಧಾರದ ಮೇಲೆ ಮಾಲೀಕ ಹೇಳಲು ಮರೆತ ವಿಷಯದ ಬಗ್ಗೆಯೂ ಯೋಚಿಸಿ, ಹುಡುಕಿ ಅಂತಹ ಕೆಲಸ ಮಾಡುವವನು ವಿಭಿನ್ನವಾಗಿ ಕಂಡುಬರುತ್ತಾನೆ. ಅಂತಹವರ ಕೆಲಸದ ಬಗ್ಗೆ ಮಾಲೀಕರಿಗೂ ಇಷ್ಟವಾಗುತ್ತದೆ. ಅಂತಹುದೇ ಒಂದು ಪ್ರಕರಣವಿದು.

ಇದು ಕಡಲ ತೀರದ ಒಂದು ಕಥೆ. ಒಬ್ಬ ಮಾಲೀಕ ಹಳೆಯದಾದ ತನ್ನ ದೋಣಿಗೆ ಬಣ್ಣ ಬಳಿಯಲು ಒಬ್ಬ ಬಣ್ಣ ಬಳಿಯುವವನಿಗೆ ಕೆಲಸ ಒಪ್ಪಿಸಿದ. ಆ ಕೆಲಸಗಾರ ದೋಣಿಗೆ ಬಣ್ಣ ಬಳಿಯುತ್ತಿರುವಾಗ ದೋಣಿಯ ಕೆಳಭಾಗದಲ್ಲಿ ಒಂದು ರಂಧ್ರ ಇರುವುದನ್ನು ಗಮನಿಸಿದ. ತನ್ನ ಸಮಯ ಪ್ರಜ್ಞೆ ಹಾಗೂ ಜಾಣ್ಮೆಯಿಂದ ರಂಧ್ರವನ್ನು ಸರಿಪಡಿಸಿ ಬಣ್ಣ ಹಚ್ಚುವ ಕೆಲಸ ಮುಗಿಸಿ ಕೂಲಿ ಹಣ ಪಡೆದು ಹೊರಟುಹೋದ. ಎರಡು ದಿನಗಳ ನಂತರ ದೋಣಿಯ ಮಾಲೀಕನು ಆ ಬಣ್ಣ ಹೊಡೆಯುವವನಿಗೆ ಒಂದು ಲಕ್ಷ ರೂಪಾಯಿ ತಂದು ಕೊಟ್ಟ. ಆಗ ಆ ಬಣ್ಣ ಬಳಿಯುವವನು ನನಗೆ ನನ್ನ ಕೆಲಸಕ್ಕೆ ಆಗಲೇ ಹಣ ನೀಡಿದ್ದೀರಿ. ಈಗ ಮತ್ತೇಕೆ ಹಣ ಎಂದು ಪ್ರಶ್ನಿಸಿದ. ಆಗ ದೋಣಿಯ ಮಾಲೀಕ 'ಈ ಹಣ ನೀನು ಬಣ್ಣ ಹೊಡೆದಿದ್ದಕ್ಕೆ ಅಲ್ಲ. ನನ್ನ ದೋಣಿಯಲ್ಲಿನ ರಂದ್ರವನ್ನು ಮುಚ್ಚಿ ಸರಿಪಡಿಸಿದ್ದಕ್ಕಾಗಿ ಎನ್ನುತ್ತಾನೆ. ಆದರೆ, ಆ ರಂಧ್ರ ಮುಚ್ಚಿದ್ದಕ್ಕೆ ಇಷ್ಟೊಂದು ಹಣ ನೀಡಬೇಕೇ? ಎಂದು ಬಣ್ಣ ಬಳಿಯುವವನು ಪ್ರಶ್ನಿಸುತ್ತಾನೆ. ಆಗ ದೋಣಿಯ ಮಾಲೀಕ; ಅದು ಹಾಗಲ್ಲ. ಆ ದೋಣಿಯಲ್ಲಿ ರಂಧ್ರವಿದೆ ಎಂದು ನಾನು ನಿನಗೆ ಹೇಳಲು ಮರೆತಿದ್ದೆ. ನಂತರ ನನ್ನ ಮಕ್ಕಳು ಸಮುದ್ರದಲ್ಲಿ ಮೀನು ಹಿಡಿಯಲು ಆ ದೋಣಿಯಲ್ಲಿ ಹೋದರು. ದೋಣಿಯ ರಂಧ್ರದ ಬಗ್ಗೆ ಅವರಿಗೆ ತಿಳಿದಿರಲಿಲ್ಲ. ನಾನೂ ಸಹ ಅವರಿಗೆ ಹೇಳಲು ಮರೆತಿದ್ದೆ.

ಅವರು ಸಮುದ್ರಕ್ಕೆ ಹೋಗಿದ್ದಾರೆ ಎಂದು ಗೊತ್ತಾದಾಗ ನನಗೆ ಬಹಳ ಆತಂಕವಾಯಿತು. ಆದರೆ, ಅದೃಷ್ಟವಶಾತ್ ಕ್ಷೇಮವಾಗಿ ಹಿಂದಿರುಗಿದರು. ಕೂಡಲೇ ನಾನು ದೋಣಿಯನ್ನು ಗಮನಿಸಿದೆ. ದೋಣಿಯ ಆ ರಂಧ್ರವನ್ನು ನೀನು ಮುಚ್ಚಿ ದುರಸ್ತಿ ಮಾಡಿದ್ದೆ. ನಾನು ಹೇಳದಿದ್ದರೂ ನೀನು ಆ ಕೆಲಸವನ್ನು ಮಾಡಿ, ನನ್ನ ಮಕ್ಕಳ ಪ್ರಾಣ ಉಳಿಸಿದೆ. ಇದಕ್ಕೆ ಹೇಗೆ ಕೃತಜ್ಞತೆ ಹೇಳಬೇಕೋ ತಿಳಿಯುತ್ತಿಲ್ಲ. ನಿನ್ನ ಈ ಸಹಾಯ ನನ್ನ ಕುಟುಂಬವನ್ನು ಉಳಿಸಿತು ಎಂದು ಕೃತಜ್ಞತೆಯಿಂದ ಹೇಳಿ ಹಣ ನೀಡಿ ಹೊರಟುಹೋದ. ದೋಣಿಯ ರಂಧ್ರ ಸಣ್ಣದಾಗಿರಬಹುದು. ಆದರೆ ಅದು ಇಡೀ ದೋಣಿಯನ್ನು ಆಪೋಷನ ತೆಗೆದುಕೊಳ್ಳಬಹುದು. ಇದನ್ನು ಆ ಬಣ್ಣ ಬಳಿಯುವವನು ತಾನು ದೊಡ್ಡ ಉಪಕಾರ ಮಾಡಿದೆ ಎಂದು ಭಾವಿಸುವುದಕ್ಕಿಂತ ತಾನು ಕಂಡ ದೋಷವನ್ನು ಸರಿಪಡಿಸಿದ ಅಷ್ಟೇ. ಅವನ ಮಟ್ಟಕ್ಕೆ ಅದು ದೊಡ್ಡ ವಿಷಯವಲ್ಲ. ಆದರೆ, ಅದು ಬೀರಿರುವ ಪರಿಣಾಮ ಮಾತ್ರ ದೊಡ್ಡದಾಗಿರುತ್ತದೆ. ಈ ಒಂದು ಜಾಣ್ಮೆ ಹಾಗೂ ಸಮಯ ಪ್ರಜ್ಞೆ ಮೂಡಿಸುವಂತಹ ಶಿಕ್ಷಣ ಈಗಿನ ಮಕ್ಕಳಿಗೆ ದೊರಕಬೇಕಿದೆ

ಬಾಲಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗು

ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಇನ್ಸ್‌ಪೆಕ್ಟರ್ ರವಿಶಂಕರ್ ಅಭಿಮತ



ಅಪೂರ್ವ ಸ್ನೇಹ ಬಳಗದ ವತಿಯಿಂದ ಮಕ್ಕಳಿಗೆ ಪುಸ್ತಕ–ಲೇಖನಿಗಳನ್ನು ವಿತರಿಸಲಾಯಿತು.

ಮೈಸೂರು, ಜೂ.12– ಬಾಲ ಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗಾಗಿದೆ, ಅದು ನಿರ್ಮೂಲನೆ ಯಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಲಕ್ಷ್ಮೀಪುರಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವಿಶಂಕರ್ ಹೇಳಿದರು.

ಚಾಮುಂಡಿಪುರಂನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಲ ಬೋಧಿನಿ ಶಾಲೆಯಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಹಾಗೂ ಅಪೂರ್ವ ಸ್ನೇಹ ಬಳಗದ ವತಿಯಿಂದ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಮಕ್ಕಳಲ್ಲಿ ಜಾಗೃತಿ ಮೂಡಿಸಿ ಮಾತನಾಡಿದ ಅವರು ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲ ನಾಗರಿಕರ ಸಹಕಾರ ಬಹಳ ಮುಖ್ಯ. ಶಿಕ್ಷಣ ಪಡೆಯುವ ವಯಸ್ಸಿನಲ್ಲಿ ಕಟ್ಟಡಗಳ ಕೆಲಸಗಳಲ್ಲಿ, ಅಂಗಡಿಗಳಲ್ಲಿ, ಗ್ಯಾರೇಜ್, ಹೋಟೆಲ್, ಕಾರ್ಖಾನೆಗಳಲ್ಲಿ, ಬೇಕರಿ ಮತ್ತಿತರ ಸ್ಥಳಗಳಲ್ಲಿ ಕೆಲಸಗಳನ್ನು ಮಾಡುತ್ತಿದ್ದಾರೆ. ಇಂತಹ ಪ್ರಕರಣಗಳನ್ನು ಕಂಡರೆ ತಕ್ಷಣವೇ ಸಕ್ಷಮ ಇಲಾಖೆಯ ಅಧಿಕಾರಿಗಳಿಗೆ ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಸಾರ್ವಜನಿಕರು ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಮಕ್ಕಳಿಗೆ ಪುಸ್ತಕ ಲೇಖನಿಗಳನ್ನು ವಿತರಿಸಲಾಯಿತು.

ಲಕ್ಷ್ಮೀಪುರಂ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರಾದ ರವಿಶಂಕರ್, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಕೆಬಿ ಲಿಂಗರಾಜು, ಕರ್ನಾಟಕ ಬ್ಯಾಂಕ್‌ನ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ವಿಶ್ವನಾಥ್, ಅಪೂರ್ವ ಸುರೇಶ್ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಉಪಾಧ್ಯಕ್ಷ ವಿಕ್ರಂ ಅಯ್ಯಂಗಾರ್, ಕೆ ಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಶಾಲೆಯ ಮುಖ್ಯ ಶಿಕ್ಷಕರಾದ ಲತಾ, ದೂರರಾಜಣ್ಣ, ಎಸ್ ಎನ್ ರಾಜೇಶ್, ಶಿಕ್ಷಕರಾದ ಲತಾ ಕುಮಾರಿ, ಮೊಸಿನ್ ತಾಜ್, ಲೀಲಾವತಿ. ಮಮತಾ ಹಾಗೂ ಇನ್ನಿತರರು ಹಾಜರಿದ್ದರು

ಯಾವ ಸಮುದಾಯದ ವಿರುದ್ಧವೂ ತಾರತಮ್ಯ ಮಾಡಿಲ್ಲ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ



ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುವ ಸಮುದಾಯ ಭವನಗಳು ಹಾಗೂ ವಿದ್ಯಾರ್ಥಿ ನಿಲಯಗಳ ಪೈಕಿ ಹೆಚ್ಚಿನವು ಕುರುಬ ಸಮುದಾಯಕ್ಕೆ ಸೇರಿರುವ ಸಂಘ–ಸಂಸ್ಥೆಗಳಿಗೆ ಸಿಕ್ಕಿವೆ ಎಂಬ ವಿವಾದ ಕೇಳಿಬಂದಿದ್ದು, ಇದರ ಬೆನ್ನಲ್ಲೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ. ಯಾವುದೇ ಸಮುದಾಯದ ವಿರುದ್ಧ ಉದ್ದೇಶಪೂರ್ವಕ ತಾರತಮ್ಯ ಮಾಡಿಲ್ಲ ಎಂದು ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, ವಿವಿಧ ಹಿಂದುಳಿದ ವರ್ಗಗಳ ಸಂಘಟನೆಗಳು ಮತ್ತು ಸಂಘಗಳ ಮನವಿಗಳನ್ನು ಪರಿಶೀಲಿಸಿ, ಸುಮಾರು 155 ಸಂಘ–ಸಂಸ್ಥೆಗಳಿಗೆ ಸಮುದಾಯ ಭವನ ಹಾಗೂ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕಾಗಿ 71.85 ಕೋಟಿ ರೂ.ವೆಚ್ಚದ ಪ್ರಾಥಮಿಕ ಅನುಮೋದನೆ ನೀಡಲಾಗಿದೆ ಎಂದು ಹೇಳಿದ್ದಾರೆ.

ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸಂಗೀತ, ನೃತ್ಯ, ತಾಳವಾದ್ಯಗಳ ತರಗತಿಗಳು

ಮೈಸೂರು, ಜೂ.12– ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ–ಕಾಲೇಜುಗಳಲ್ಲಿ ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ, ನೃತ್ಯದ ಬೇರೆ ಬೇರೆ ಪ್ರಕಾರಗಳು ಹಾಗೂ ತಾಳವಾದ್ಯಗಳ ಕಲಿಕೆಗಾಗಿ ಪ್ರತಿದಿನ ಸಂಜೆ, ಶನಿವಾರ ಹಾಗೂ ಭಾನುವಾರಗಳಂದು ಪೂರ್ಣಾವಧಿ ತರಗತಿಗಳನ್ನು ಪ್ರಾರಂಭಿಸಲಾಗುತ್ತದೆ. ನುರಿತ ಶಿಕ್ಷಕರು ತರಬೇತಿ ನೀಡಲಿದ್ದಾರೆ.

ವಿದ್ಯಾರ್ಥಿಗಳು ಅವರ ನಿವಾಸಗಳ ಹತ್ತಿರದ ಬಡಾವಣೆಗಳಲ್ಲಿರುವ ಜೆಎಸ್‌ಎಸ್ ಸಂಸ್ಥೆಗಳ ಶಾಲಾ ಕಾಲೇಜುಗಳಲ್ಲಿ ಅರ್ಜಿಗಳನ್ನು ಪಡೆದುಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜೂ. 22 ರೊಳಗೆ ಸಲ್ಲಿಸುವುದು.

ಆಸಕ್ತರು ಎನ್.ರೇಣುಕಸ್ವಾಮಿ, ಆರ್. ಸಿದ್ದೇಶ್‌ಕುಮಾರ್, ಜಿ.ಕೆ.ಕುಮಾರ್ ಹಾಗೂ ಜಿ.ಎಂ.ಪ್ರಸಾದ್ ಅವರನ್ನು ಕ್ರಮವಾಗಿ 96866–77296, 99648–45171, 99009–53152 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶನಿವಾರ 13 ಜೂನ್ 2026

ವಿವಾದದ ನಡುವೆಯೂ ಬಿಡದಿ ಟೌನ್ ಶಿಪ್‌ಗೆ ಅಂತಿಮ ಅಧಿಸೂಚನೆ ಪ್ರಕಟ

ಬೆಂಗಳೂರು, ಜೂ. 12– ರೈತರ ವಿರೋಧದ ನಡುವೆಯೂ ರಾಜ್ಯ ಸರ್ಕಾರ ಬಿಡದಿ ಟೌನ್ ಶಿಪ್‌ಗೆ ಅಂತಿಮ ಅಧಿಸೂಚನೆ ಪ್ರಕಟಿಸಿದೆ. ರಾಜಕೀಯ ತಿಕ್ಕಾಟ, ಪ್ರತಿಭಟನೆಗಳ ನಡುವೆಯೂ ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಈ ಯೋಜನಾ ವ್ಯಾಪ್ತಿಯ 9 ಕಂದಾಯ ಗ್ರಾಮಗಳ ಪೈಕಿ ಪ್ರಾರಂಭಿಕವಾಗಿ 3 ಗ್ರಾಮಗಳ 519 ಎಕರೆ ಭೂಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಪ್ರಕಟ ಮಾಡಿದೆ. ಮೊದಲ ಹಂತದ ಭೂ ಸ್ವಾಧೀನ ರಾಮ ನಗರ ಹಾಗೂ ಹಾರೋಹಳ್ಳಿ ತಾಲೂಕು ವ್ಯಾಪ್ತಿಯಲ್ಲಿ ನಡೆಯಲಿದ್ದು, ಪ್ರತಿ ಎಕರೆಗೆ 2.07 ಕೋಟಿಯಿಂದ 2.50 ಕೋಟಿ ರೂಪಾಯಿವರೆಗೂ ದರ ನಿಗದಿ ಮಾಡಲಾಗಿದೆ.ಅಥವಾ ಶೇ.50ರಷ್ಟು ಅಭಿವೃದ್ಧಿ



ಪಡಿಸಿರುವ ಭೂಮಿ ನೀಡಲು ಆದೇಶಿಸಲಾಗಿದೆ.

3 ಗ್ರಾಮಗಳ ಒಟ್ಟು 519 ಎಕರೆ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಕೆಂಪಯ್ಯನಪಾಳ್ಯದ 384 ಎಕರೆ 22 ಗುಂಟೆ, ಮಂಡಲಹಳ್ಳಿಯ 71 ಎಕರೆ 13 ಗುಂಟೆ ಹಾಗೂ ವಡೇರಹಳ್ಳಿಯ 63 ಎಕರೆ 10 ಗುಂಟೆ ಭೂಸ್ವಾಧೀನಕ್ಕೆ ನಗರಾಭಿವೃದ್ಧಿ ಇಲಾಖೆ ತನ್ನ ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ರೈತರು ಹಣ ಅಥವಾ ಅಭಿವೃದ್ಧಿಪಡಿಸಿದ ಭೂಮಿ ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗಿದ್ದು. ಆದರೆ, ರೈತರ ನಡೆ ಏನು ಎನ್ನುವುದು ಕಾದು ನೋಡಬೇಕಿದೆ.

ಒಟ್ಟು 754 ರೈತರ ಭೂಮಿ ಸ್ವಾಧೀನಕ್ಕೆ ನಿರ್ಧಾರ : ಒಟ್ಟು 754 ರೈತರ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿದೆ. ಈ ರೈತರಿಗೆ ತಮ್ಮ ಭೂಮಿಗೆ ಸಂಬಂಧಿಸಿದ ಎಲ್ಲಾ ಸೂಕ್ತ ದಾಖಲೆಗಳನ್ನು ಸಲ್ಲಿಸಿ, ನಿರ್ದಿಷ್ಟ ಸಮಯದಲ್ಲಿ ಪರಿಹಾರವನ್ನು ಪಡೆಯಲು ಸೂಚಿಸಲಾಗಿದೆ. ಪ್ರತಿ ಎಕರೆಗೆ ಕನಿಷ್ಠ 2.14 ಕೋಟಿರೂ ದರ ನಿಗದಿ ಮಾಡಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ. ಅಂದರೆ, ಇದಕ್ಕಿಂತ ಕಡಿಮೆ ದರಕ್ಕೆ ಭೂಮಿ ತೆಗೆದುಕೊಳ್ಳಬಾರದು ಎಂಬ ಭರವಸೆಯನ್ನು ಸರ್ಕಾರ ನೀಡಲು ಪ್ರಯತ್ನಿಸಿದೆ.

ರೈತರ ವಿರೋಧ, ಸ್ಥಳೀಯರ ಅಸಮಾಧಾನ ಇದ್ದರೂ ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ. ಸರ್ಕಾರದ ನಿಲುವು ಪ್ರಕಾರ, ಟೌನ್ ಶಿಪ್ ಯೋಜನೆ ಮೂಲಕ ಪ್ರದೇಶದಲ್ಲಿ ಅಭಿವೃದ್ಧಿ, ಮೂಲಸೌಕರ್ಯ, ಉದ್ಯೋಗಾವಕಾಶಗಳು ಹೆಚ್ಚುವುದು ಎಂದು ಹೇಳಲಾಗುತ್ತಿದೆ. ಆದರೆ ರೈತರಿಗೆ ತಮ್ಮ ಭೂಮಿ, ಜೀವನ, ಭವಿಷ್ಯ ಬಗ್ಗೆ ಆತಂಕ ಇದೆ.

ರೈತರ ವಿರೋಧದ ನಡುವೆಯೂ ಸರ್ಕಾರ ದಬ್ಬಾಳಿಕೆ ಮಾಡುತ್ತಿದೆ

ಬಿಡದಿ ಟೌನ್‌ಶಿಪ್ ಭೂಸ್ವಾಧೀನಕ್ಕೆ ಹೆಚ್‌ಡಿಕೆ ಆಕ್ರೋಶ

ಬೆಂಗಳೂರು, ಜೂ.12– ಬಿಡದಿ ಟೌನ್‌ಶಿಪ್ ಯೋಜನೆಗೆ ರಾಜ್ಯ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿರುವುದನ್ನು ಖಂಡಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ರೈತರ ವಿರೋಧದ ನಡುವೆಯೂ ಭೂಸ್ವಾಧೀನಕ್ಕೆ ಮುಂದಾಗಿರುವ ಸರ್ಕಾರದ ವಿರುದ್ಧ ಕಿಡಿಕಾರಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ರಾಜ್ಯ ಅಂತಿಮ ಅಧಿಸೂಚನೆ ಹೊರಡಿಸಿದೆ. ಬಹಳ ದಿನಗಳಿಂದ ಅಲ್ಲಿನ ರೈತರು ಪ್ರತಿಭಟನೆ ಮಾಡುತ್ತಲೇ ಇದ್ದಾರೆ. ಅಲ್ಲಿ ಯಶಸ್ವಿಯಾಗಿ ಕೃಷಿ, ತೋಟಗಾರಿಕೆ ಕೆಲಸ ನಡೆಯುತ್ತಿದೆ. ಆ ಭಾಗದ ರೈತರಿಂದ ಹಾಲು ಉತ್ಪಾದನೆ ಹೆಚ್ಚಾಗಿದೆ. ಆ ಸ್ಥಳದಲ್ಲಿ ಸರ್ಕಾರ ಒಕ್ಕಲೆಬ್ಬಿಸುವ ಕೆಲಸ ಮಾಡ್ತಿದೆ. ರೈತರಿಗೆ ಬೆಂಬಲ ಕೊಡಲು ಹೋದವರಮೇಲೆ ಪೊಲೀಸರ ಮೂಲಕ ಎಫ್‌ಐಆರ್ ಹಾಕಿ ತೊಂದರೆ ಕೊಡ್ತಿದ್ದಾರೆ ಎಂದು ಆರೋಪಿಸಿದರು.

ಈಗಿನ ಗೃಹ ಸಚಿವರ ಮಾತನ್ನು ನಾನು ಗಮನಿಸಿದ್ದೇನೆ. ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿರುವವರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಕೆಲವು ರೈತ ವಿರೋಧಿ ಧೋರಣೆಯ ಜನಪ್ರತಿನಿಧಿಗಳು ನಿಂತಿದ್ದಾರೆ. ಯಾವುದೇ ಅಧಿಸೂಚನೆ ಹೊರಡಿಸಿದರೂ ಅಲ್ಲಿನ ರೈತರು ಒಪ್ಪಿಗೆ ಕೊಟ್ಟಿಲ್ಲ. ಶೇಕಡ 80 ರಷ್ಟು ರೈತರ ವಿರೋಧ ಇದೆ ಎಂದು ಹೇಳಿದರು.



ಸರ್ಕಾರ ದಬ್ಬಾಳಿಕೆ ರೀತಿ ನಾವು ಮಾಡಿದ್ದೇ ತೀರ್ಮಾನ ಎಂದು ಹೊರಟಿದ್ದಾರೆ. ಕೃಷಿಯಿಂದ ಅಲ್ಲಿನ ರೈತರು ಉತ್ತಮ ಬದುಕು ಕಟ್ಟಿಕೊಂಡಿದ್ದಾರೆ. ಅಂತಹ ಭಾಗದಲ್ಲಿ ಈ ಯೋಜನೆ ಮಾಡಬೇಕೆಂದು ಹೊರಟಿದ್ದಾರೆ. 2006ರಲ್ಲಿ ಈ ಯೋಜನೆ ಮಾಡಬೇಕೆಂದು ನಿರ್ಧಾರ ಮಾಡಿದ್ದು ನಾನೇ. ಆಗ ಇದೇ ಕಾಂಗ್ರೆಸ್‌ನವರು ವಿರೋಧ ಮಾಡಿದ್ದರು. ಸತ್ಯಶೋಧನ ಸಮಿತಿ ವರದಿ ಹಾಗೂ ಜನರ ಅಭಿಪ್ರಾಯ ಗಮನಿಸಿ ನಾನು ಯೋಜನೆ ಕೈ ಬಿಟ್ಟಿದ್ದೆ. ಈಗಿನ ಸರ್ಕಾರ ಬೆಂಗಳೂರು ದಕ್ಷಿಣ ವ್ಯಾಪ್ತಿಯನ್ನು ವಿಸ್ತರಣೆ ಮಾಡಿ ಜನವಿರೋಧಿ ನೀತಿ ಮಾಡಲು ಹೊರಟಿದೆ ಎಂದು ಕಿಡಿಕಾರಿದರು.

ಪ್ರಿಯಾಂಕ್ ಖರ್ಗೆ ಕಾನೂನಿನ ಹೋರಾಟ ಮಾಡಲಿ ಎಂದಿದ್ದಾರೆ. ನೀವು ರೈತರ ಬಗ್ಗೆ ಎಷ್ಟು ಗೌರವ ಇಟ್ಟುಕೊಂಡಿದ್ದೀರಿ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ದೊಡ್ಡ ಬಳ್ಳಾಪುರ ಭಾಗದಲ್ಲೂ ರೈತರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಬೇಕಿದ್ದರೆ ಮುಖ್ಯಮಂತ್ರಿಗಳಿಗೆ ಆಹ್ವಾನ ಕೊಡ್ತೋಣ. ಮುಖ್ಯಮಂತ್ರಿಗಳೇ ಬಂದು ಹಳ್ಳಿ ಜನರನ್ನು ಕೇಳಲಿ. ಎಷ್ಟು ಜನರು ಅದಕ್ಕೆ ಒಪ್ಪಿಕೊಂಡಿದ್ದಾರೆ ಚರ್ಚೆ ಮಾಡಲಿ. ನಾನು ಹೋಗಬೇಕಾಗಿಲ್ಲ, ಜನರೇ ಮಾತಾಡ್ತಾರೆ. ಯಾವ ಶಾಸಕರ ಹೆಸರು ಹೇಳ್ತೀರೋ ಅವರನ್ನು ಜನರೇ ಓಡಾಡಿಸುತ್ತಿದ್ದಾರೆ. ಯಾವುದೇ ಯೋಜನೆ ತರೋದಾದರೆ ರೈತರ ಮನವೊಲಿಸಿ ಮಾಡಬೇಕು. ರೈತರ ಮೇಲೆ ದಬ್ಬಾಳಿಕೆ ಮಾಡಿ ಮಾಡ್ತೇವಿ ಅನ್ನೋದು ನಿಮಗೆ ತಿರುಗುಬಾಣವಾಗುತ್ತದೆ, ಕಾದು ನೋಡಿ ಎಂದು ಭವಿಷ್ಯ ನುಡಿದರು.

ಕಟ್ಟಡ ಒಡೆಯೋದು ತಪ್ಪು: ಸರ್ಕಾರಿ ನಿವಾಸ ಮಾಡಿಕೊಳ್ಳಲು ಸಿಎಂ ಡಿ.ಕೆ. ಶಿವಕುಮಾರ್ ಕುಮಾರ ಕೃಪ ಅತಿಥಿ ಗೃಹದ ಪಾರಂಪರಿಕ ಕಟ್ಟಡ ಒಡೆಯುತ್ತಿರುವುದಕ್ಕೂ ಕುಮಾರಸ್ವಾಮಿ ಕಿಡಿಕಾರಿದರು. ಅದನ್ನು ಅವರು ಮನೆ ಮಾಡಿಕೊಳ್ಳದಿರಲಿ. ಇನ್ನೂ 8 ವರ್ಷ ನಾನೇ ಇರುತ್ತೇನೆ ಅಂತ ಹೇಳ್ತಾರಲ್ಲ. ಮುಂದಿನ ಐದು ವರ್ಷ ಇವರೇ ಮುಂದುವರಿದರೆ ವಿಧಾನಸೌಧಕ್ಕೆ ಏನು ಮಾಡ್ತಾರೋ ಎಂದು ಗಾಬರಿ ಆಗಿದೆ ನನಗೆ ಎಂದು ಲೇವಡಿ ಮಾಡಿದರು.

ಈ ರೀತಿ ಪಾರಂಪರಿಕ ಕಟ್ಟಡವನ್ನು ಮನೆಗೆ ಬಳಸಿಕೊಳ್ಳೋದು ತಪ್ಪು. ಇದು ಮಹಾರಾಜರ ಕಾಲದಲ್ಲಿ ಕಟ್ಟಿದ ಕಟ್ಟಡ. ಅಲ್ಲಿ ಹೋಗಿ ಅದನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಪಕ್ಕದಲ್ಲೇ ಇವರು ಕಟ್ಟಿರುವ ಗೆಸ್ಟ್ ಹೌಸ್ ಇದೆ. ಆದರೆ ಮನೆಗಾಗಿ ಇಂತಹ ಪಾರಂಪರಿಕ ಕಟ್ಟಡ ಒಡೆಯುವ ಅವಶ್ಯಕತೆ ಇರಲಿಲ್ಲ ಎಂದು ಕಿಡಿಕಾರಿದರು.

ಹೀರೋ ವುಮೆನ್ಸ್ ಪ್ರೊಫೆಷನಲ್ ಗಾಲ್ಫ್ ಟೂರ್ನಮೆಂಟ್

ಗುರುಗ್ರಾಮ್‌ನ ರಿಯಾ ಜಾಡೋನ್ ಪ್ರೊಫೆಷನಲ್ ಗಾಲ್ಫ್ ಆಟಗಾರ್ತಿ

ಮೈಸೂರು, ಜೂ.12(ಎಂಕೆ)– ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯೂಜಿಸಿ) ಆವರಣದಲ್ಲಿ ನಡೆಯುತ್ತಿರುವ ಮೂರು ದಿನಗಳ 'ಹೀರೋ ವುಮೆನ್ಸ್ ಪ್ರೊಫೆಷನಲ್ ಗಾಲ್ಫ್ ಟೂರ್ನಮೆಂಟ್‌ನಲ್ಲಿ 17ರ ಹರೆಯದ ಹರಿಯಾಣದ ಗುರುಗ್ರಾಮ್‌ನ ರಿಯಾ ಜಾಡೋನ್ ಪ್ರೊಫೆಷನಲ್ ಗಾಲ್ಫ್ ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

2025ರ ನವೆಂಬರ್‌ನಲ್ಲಿ ಐಜಿಯು ಪುಣೆ ಲೇಡೀಸ್ ಚಾಂಪಿಯನ್‌ಶಿಪ್ ಗೆದಿದ್ದ ರಿಯಾ, ಈ ಋತುವಿನ ಆರಂಭದಲ್ಲಿ ವೃತ್ತಿಪರ ಆಟಗಾರ್ತಿಯಾಗಿ ಬದಲಾಗಿದ್ದಾರೆ. ಮೊದಲ ದಿನವೇ ಅತ್ಯುತ್ತಮ ಪ್ರದರ್ಶನ ನೀಡಿದ ಅವರು ಅಂಕಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.

ಎರಡನೇ ದಿನದಾಟದಲ್ಲಿ ಎಲ್ಲರ ಗಮನ ಸೆಳೆದ ಕರ್ನಾಟಕ ಅನ್ವಿತಾ ನರೇಂದರ್ ಹಾಗೂ ದೆಹಲಿಯ ಅನನ್ಯಾ ಸೂದ್ ಪಾಯಿಂಟ್ ಪಟ್ಟಿಯಲ್ಲಿ ರಿಯಾ ಜಾಡೋನ್ ಜೊತೆಗೆ ಜಂಟಿಯಾಗಿ ಮೊದಲ ಸ್ಥಾನ ಪಡೆದಿದ್ದಾರೆ.

ಹಾಗೆಯೇ ಮೈಸೂರಿನ ಆಟಗಾರ್ತಿ ವಿಧಾತ್ರಿ ಅರಸ್, ದುರ್ಗಾ ನಿಟ್ಟೂರು, ಅಮನ್ ದೀಪ್ ಡ್ರಾಲ್ ಹಾಗೂ ಅನ್ವಿ ದಹಿಯಾ ಜಂಟಿಯಾಗಿ ಎರಡನೇ ಸ್ಥಾನಕ್ಕೂ ತೀವ್ರ ಪೈಪೋಟಿ ನಡೆಸಿದ್ದಾರೆ. ಈ ಮೂಲಕ ಕೊನೆಯ ದಿನದಾಟ ತೀವ್ರ ಕುತೂಹಲ ಕೆರಳಿಸಿದ್ದು, ಚಾಂಪಿಯನ್ ಯಾರಾಗಲಿದ್ದಾರೆ ಎಂಬುದನ್ನು ಕಾದುನೋಡಬೇಕಿದೆ.



ರಿಯಾ ಜಾಡೋನ್

ಇಂದು ಸೈನ್ಸ್ ಸಂಜೆ

ಮೈಸೂರು: ಕಲಾ ಸುರುಚಿ, ಕುತೂಹಲಿ– ಕನ್ನಡ ಸಂಸ್ಥೆ ಆಶ್ರಯದಲ್ಲಿ ಜೂ.13 ರಂದು ಸಂಜೆ 6.30 ರಿಂದ 7.30 ರವರೆಗೆ ಸೈನ್ಸ್ ಸಂಜೆ ಕಾರ್ಯಕ್ರಮವನ್ನು ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಏರ್ಪಡಿಸಲಾಗಿದೆ. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಡೆಪ್ಯುಟಿ ಸಿಇಓ ಹಾಗೂ ಮುಖ್ಯಸ್ಥರು (ಶಿಕ್ಷಣ) ಪ್ರವೀಣ್‌ಕುಮಾರ್ ಸಯ್ಯಪ್ಪರಾಜು ಅವರು 'ಮೂಲವಸ್ತುಗಳ ಪತ್ತೆ' ಕುರಿತು ಭಾಷಣ ಮಾಡಲಿದ್ದಾರೆ.

ಒಂದು ವಾಹನಕ್ಕೆ 200 ಲೀಟರ್ ಮಾತ್ರ: ಡೀಸೆಲ್ ಮಾರಾಟಕ್ಕೆ ಮಿತಿ ಹೇರಿದ ಕೇಂದ್ರ

ನವದೆಹಲಿ, ಜೂ.12– ಜಾಗತಿಕ ತೈಲ ಪೂರೈಕೆ ಅಡಚಣೆಯ ನಡುವೆ ಸ್ಥಳೀಯ ಕೊರತೆಯನ್ನು ನೀಗಿಸುವ ಸಲುವಾಗಿ ಕೇಂದ್ರ ಸರ್ಕಾರವು ಒಂದು ವಾಹನಕ್ಕೆ ದಿನಕ್ಕೆ 200 ಲೀಟರ್ ಡೀಸೆಲ್ ಮಾರಾಟವನ್ನು ಮಿತಿಗೊಳಿಸಿದೆ.

ಅಲ್ಲದೇ, ಕೈಗಾರಿಕೆ, ವಾಣಿಜ್ಯ ಮತ್ತು ಸಾಂಸ್ಥಿಕ ಬಳಕೆದಾರರು ಪೆಟ್ರೋಲ್ ಪಂಪ್‌ಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಖರೀದಿಸುವುದನ್ನು ನಿರ್ಬಂಧಿಸಲಾಗಿದೆ ಎಂದು ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ.

ವಾಹನಗಳ ಟ್ಯಾಂಕ್ ಅಥವಾ ಪಿಇಎಸ್‌ಒ ಅನುಮೋದಿತ ಕಂಟೇನರ್‌ಗೆ ಮಾತ್ರ ಬಂಕ್‌ಗಳಲ್ಲಿ ಡೀಸೆಲ್ ಅನ್ನು ಮಾರಾಟ ಮಾಡಬಹುದು. ಪ್ರತಿ ಗ್ರಾಹಕ ಅಥವಾ



ವಾಹನಕ್ಕೆ ದಿನಕ್ಕೆ 200 ಲೀಟರ್‌ಗಳಿಗಿಂತ ಹೆಚ್ಚು ಮಾರಾಟ ಮಾಡುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೈಗಾರಿಕೆ, ವಾಣಿಜ್ಯ ಮತ್ತು ಸಾಂಸ್ಥಿಕ ಗ್ರಾಹಕರು ಇನ್ನು ಮುಂದೆ ಪೆಟ್ರೋಲ್ ಬಂಕ್‌ಗಳಿಂದ ಪೆಟ್ರೋಲ್ ಅಥವಾ ಡೀಸೆಲ್ ಖರೀದಿಸಲು ಅನುಮತಿಸಲಾಗುವುದಿಲ್ಲ. ಅವರು ತಮ್ಮ ಸ್ವಂತ ಗ್ರಾಹಕ ಪಂಪ್‌ಗಳಿಂದ ಇಂಧನ ಪಡೆಯಬೇಕು ಎಂದು ಪ್ರಕಟಣೆ ತಿಳಿಸಿದೆ. ಈ ನಿರ್ಬಂಧವು 90 ದಿನಗಳವರೆಗೆ ಚಾಲ್ತಿಯಲ್ಲಿರುತ್ತದೆ.

ಬೆಲೆ ವ್ಯತ್ಯಾಸದಿಂದಾಗಿ ಬೃಹತ್ ಬಳಕೆದಾರರು ಪೆಟ್ರೋಲ್ ಪಂಪ್‌ಗಳಿಂದ ಇಂಧನವನ್ನು ಖರೀದಿಸಲು ಆರಂಭಿಸಿದ ನಂತರ ಕೆಲವೆಡೆ ಅಸಹಜ ಬೇಡಿಕೆ ಹೆಚ್ಚಳದ ಬೆಳವಣಿಗೆ, ವಿಶೇಷವಾಗಿ ಡೀಸೆಲ್‌ನ ಬೇಡಿಕೆ ಹೆಚ್ಚಳದಿಂದಾಗಿ 90 ದಿನಗಳವರೆಗೆ ಈ ನಿರ್ಬಂಧಗಳು ಜಾರಿಯಲ್ಲಿರುತ್ತವೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಇಂಧನ ವೆಚ್ಚ ಏರಿಕೆಯಿಂದ ಸಾಮಾನ್ಯ ಬಳಕೆದಾರರನ್ನು ರಕ್ಷಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಚಿಲ್ಲರೆ ಬೆಲೆಗಳನ್ನು ಮಾರ್ಪಡಿಸಿದ್ದರಿಂದ ಈ ವ್ಯತ್ಯಾಸವು ಉದ್ಭವಿಸಿದೆ. ವಿದ್ಯುತ್ ಉತ್ಪಾದನೆ ಮತ್ತು ಇತರ ಫೀಡ್‌ಸ್ಟಾಕ್ ಅಗತ್ಯಗಳಿಗಾಗಿ ಡೀಸೆಲ್ ಬಳಸುವ ಟೆಲಿಕಾಂ ಟವರ್‌ಗಳು ಮತ್ತು ಕೈಗಾರಿಕೆಗಳಂತಹ ಬೃಹತ್ ಬಳಕೆದಾರರಿಗೆ ಮಾರುಕಟ್ಟೆ ಬೆಲೆಯನ್ನು ವಿಧಿಸಲಾಗುತ್ತದೆ. ಜನರಿಗೆ ಬಂಕ್‌ಗಳ ಮೂಲಕ ಮಾರಾಟ ಮಾಡುವ ಡೀಸೆಲ್ ಬೆಲೆ ಕಡಿಮೆ ಇರುತ್ತದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಮೇ ತಿಂಗಳಲ್ಲಿ ಪೆಟ್ರೋಲ್ ಬೇಡಿಕೆ ಶೇ 4.8ರಷ್ಟು ಮತ್ತು ಡೀಸೆಲ್ ಬೇಡಿಕೆ 6.4ರಷ್ಟು ಹೆಚ್ಚಾಗಿರುವುದನ್ನು ಗುರುತಿಸಿವೆ.

ಅಮಿತ್ ಶಾ ಭೇಟಿಯಾದ ಸಿಎಂ ಡಿ.ಕೆ.ಶಿವಕುಮಾರ್

ರಾಜ್ಯದ ಭದ್ರತಾ ಮೂಲ ಸೌಕರ್ಯಕ್ಕೆ ನೆರವಾಗಲು ಮನವಿ

ನವದೆಹಲಿ, ಜೂ.12– ಕರ್ನಾಟಕ ರಾಜ್ಯದ ಭದ್ರತಾ ಮೂಲಸೌಕರ್ಯ ಮತ್ತು ಪೊಲೀಸ್ ಸಾಮರ್ಥ್ಯ ಸುಧಾರಣೆಗೆ ನೆರವಾಗುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಡಿಕೆಶಿ, ಭದ್ರತೆ ಸಂಬಂಧ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.

ಪ್ರೆಸಿಡೆಂಟ್ಸ್ ಕಲರ್ ಪ್ರಶಸ್ತಿ: ಕರ್ನಾಟಕ ರಾಜ್ಯ ಪೊಲೀಸ್‌ಗೆ 'ಪ್ರೆಸಿಡೆಂಟ್ಸ್ ಕಲರ್' ಪ್ರಶಸ್ತಿ ನೀಡುವ ಸಂಬಂಧ 2024ರ ಮೇ 8ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತುತ ಪರಿಶೀಲನೆ ಹಂತದಲ್ಲಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಇನ್ನು ಸಹ ಈ ಪ್ರತಿಷ್ಠಿತ ಗೌರವವನ್ನು ಸ್ವೀಕರಿಸಬೇಕಾಗಿದ್ದು, ಈ ವಿಷಯವನ್ನು ಶೀಘ್ರ ಪರಿಶೀಲಿಸಿ ಪ್ರಶಸ್ತಿ ನೀಡಲು ಅನುಮೋದನೆ ನೀಡಬೇಕು.

ಬೆಟಾಲಿಯನ್ಸ್‌ಗೆ ಮನವಿ: ವಿಜಯನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಇನ್ನೂ ಎರಡು ಹೆಚ್ಚುವರಿ ಇಂಡಿಯಾ ರಿಸರ್ವ್ ಬೆಟಾಲಿಯನ್ಸ್(ಐಆರ್‌ಬಿ) ಸ್ಥಾಪಿಸಲು ಅಂದಾಜು 243.87 ಕೋಟಿ ರೂ.ಗಳ ವೆಚ್ಚದ ಹೊಸ ಪ್ರಸ್ತಾವನೆಯನ್ನು ಕಳೆದ ವರ್ಷ ಫೆಬ್ರವರಿಯಲ್ಲಿ ಸಲ್ಲಿಸಲಾಗಿದ್ದು, ಇದಕ್ಕೆ ಶೀಘ್ರ ಮಂಜೂರಾತಿ ನೀಡಬೇಕು. ನಾಲ್ಕು ಪ್ರಮುಖ ನಗರಗಳಲ್ಲಿ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಗಳು ಹಾಗೂ ಸಂವಹನ ಉಪಕರಣಗಳ ಸ್ಥಾಪನೆಗಾಗಿ ಎಎಸ್‌ಯುಎಂಪಿ ಯೋಜನೆಯಡಿ 280 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಆದಷ್ಟು ಬೇಗ ಮಂಜೂರಾತಿ ನೀಡಬೇಕು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ಕಂಪನಿಗಳ ಕಾಯ್ದೆ 2013ರ ಶೆಡ್ಯೂಲ್ VIIರ ಅಡಿಯಲ್ಲಿ ಪೊಲೀಸ್ ಸಂಬಂಧಿತ ಚಟುವಟಿಕೆಗಳನ್ನು ಸೇರಿಸುವ ಪ್ರಸ್ತಾವನೆಯನ್ನೂ ಅನುಮೋದಿಸಬೇಕು.

ಮೂಲಸೌಕರ್ಯ ಮೇಲ್ದರ್ಜೆಗೆ: ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಬ್ಯೂರೋ(ಬಿಪಿಆರ್&ಡಿ)ದ ಗ್ಯಾಪ್ ಅನಾಲಿಸಿಸ್ ಮಾರ್ಗಸೂಚಿಗಳ ಅನ್ವಯ ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೆ ಏರಿಸಲು 258.53 ಕೋಟಿ ರೂ.ಗಳ ಸಮಗ್ರ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದಕ್ಕೆ ಶೀಘ್ರ ಅನುಮೋದನೆ ನೀಡಬೇಕು. ಕಾರಾಗೃಹಗಳ ಆಧುನೀಕರಣ ಯೋಜನೆಯಡಿ ಸಿಸಿಟಿವಿ, ವಾಕಿ–ಟಾಕಿ ಮತ್ತು ಇತರ ಭದ್ರತಾ ಉಪಕರಣಗಳ ಖರೀದಿಗೆ 20 ಕೋಟಿ ರೂ. ಬಿಡುಗಡೆ ಮಾಡುವಂತೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಮೊತ್ತವನ್ನು ಶೀಘ್ರ ಮಂಜೂರು ಮಾಡಬೇಕು. ಪೊಲೀಸ್ ಠಾಣೆಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಸಲ್ಲಿಸಿರುವ 278.26 ಕೋಟಿ ರೂ. ಪ್ರಸ್ತಾವನೆಯನ್ನು ಅನುಮೋದಿಸಬೇಕು.


ಸೈಬರ್ ವಂಚನೆ ತಡೆಗೆ ಬಿಗಿ ಕ್ರಮ: ಸೈಬರ್ ಅಪರಾಧಗಳು ಸಮಾಜದ ಆರ್ಥಿಕತೆ ಮತ್ತು ರಾಷ್ಟ್ರೀಯ ಭದ್ರತೆಗೆ ಗಂಭೀರ ಹಾಗೂ ನಿರಂತರ ಸವಾಲನ್ನು ಒಡ್ಡುತ್ತಿದ್ದು, ಇವುಗಳನ್ನು ನಿಗ್ರಹಿಸಲು ಅತ್ಯಾಧುನಿಕ ಸೈಬರ್ ಭದ್ರತಾ ವ್ಯವಸ್ಥೆ ಅಗತ್ಯವಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಅಂದಾಜು 360 ಕೋಟಿ ರೂ.ಗಳ ವೆಚ್ಚದಲ್ಲಿ 'ಕರ್ನಾಟಕ ಸೈಬರ್ ಕ್ರೈಮ್ ಕಂಟ್ರೋಲ್ ಅಂಡ್ ಕೋಆರ್ಡಿನೇಷನ್ ಯೂನಿಟ್' ಅನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದರ ವಿವರವಾದ ಯೋಜನಾ ಪ್ರಸ್ತಾವನೆಯನ್ನು ಶೀಘ್ರದಲ್ಲೇ ಸಲ್ಲಿಸಲು ಸಿದ್ಧವಿದ್ದು, ಈ ಉಪಕ್ರಮವನ್ನು ಪರಿಗಣಿಸಿ, ಯೋಜನೆಗೆ ಅನುಮೋದನೆ ನೀಡಬೇಕೆಂದು ಮನವಿ ಮಾಡಿದರು.




ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ, ರಾಜ್ಯದ ಭದ್ರತಾ ವ್ಯವಸ್ಥೆ ಸುಧಾರಣೆ ಸಂಬಂಧ ಮನವಿ ಸಲ್ಲಿಸಿ, ಅವರನ್ನು ಅಭಿನಂದಿಸಿದರು.

ನಿರಂತರ ಚರಂಡಿ ನೀರು ಹರಿವು; ಕಾರಂಜಿ ಕೆರೆಗೂ ಸಂಚಕಾರ

●ಕೆರೆಯಲ್ಲಿ ತುಂಬಿರುವ ಕೆಸರು ●ರಾಶಿರಾಶಿ ಮದ್ಯದ, ಪ್ಲಾಸ್ಟಿಕ್ ಬಾಟಲ್‌ಗಳು



ಚರಂಡಿ ನೀರು ಸೇರಿ ಕೆರೆಯ ನೀರಿನ ಬಣ್ಣ ಬದಲಾಗಿರುವುದು.



ಕಾರಂಜಿ ಕೆರೆ ಒಡಲು ಸೇರುತ್ತಿರುವ ಚರಂಡಿ ನೀರು.

ಮೈಸೂರು, ಜೂ.12(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಮುಖ ಪ್ರವಾಸಿ ತಾಣ ಹಾಗೂ ಜೀವವೈವಿಧ್ಯ ನೆಲೆಗೆ ಹೆಸರಾದ ಕಾರಂಜಿ ಕೆರೆ ಅವಸಾನದತ್ತ ಸಾಗುತ್ತಿದೆ.

ಒಂದು ಕಾಲದಲ್ಲಿ ಸ್ವಚ್ಛ ನೀರು, ಹಸಿರು ಪರಿಸರ ಹಾಗೂ ಪಕ್ಷಿಗಳ ಕಲರವದಿಂದ ಸಾಕಷ್ಟು ಪ್ರವಾಸಿಗರನ್ನು ತನ್ನತ್ತ ಆಕರ್ಷಿಸುತ್ತಿದ್ದ ಕಾರಂಜಿ ಕೆರೆ, ಇದೀಗ ಮೋರಿ ನೀರಿನ ಸಂಗ್ರಹ ಕೊಳವಾಗಿ ಮಾರ್ಪಡುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದು ಹೀಗೆ ಮುಂದುವರಿದರೆ, ಕೆರೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಿದೆ.

ನಗರದ ಮೈಸೂರು–ನರಸೀಪುರ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ, ಮೈಸೂರು ಮೃಗಾಲಯದ ಪಕ್ಕದಲ್ಲಿರುವ ಕಾರಂಜಿ ಕೆರೆ ಸುಮಾರು 90 ಎಕರೆ ವಿಸ್ತೀರ್ಣದಲ್ಲಿದೆ. ಈ ಕೆರೆಯ ಒಡಲಿಗೆ ಹಲವು ವರ್ಷಗಳಿಂದ ನಿರಂತರವಾಗಿ ಹರಿಯುತ್ತಿರುವ ಮೋರಿ ನೀರು ಹಾಗೂ ಯುಜಿಡಿ ನೀರಿನಿಂದಾಗಿ ಕೆರೆಯ ನೀರು ಕಲುಷಿತವಾಗುತ್ತಿದ್ದು, ಅಲ್ಲಿನ ಜಲಚರಗಳು, ಸೀಸನ್‌ನಲ್ಲಿ ವಿಹಾರಕ್ಕಾಗಿ ಬರುತ್ತಿದ್ದ ಬಗೆಬಗೆಯ ಪಕ್ಷಿಗಳು, ಇತರೇ ಜೀವ–ಜಂತುಗಳ ಪ್ರಾಣಕ್ಕೆ ಕುತ್ತು ತಂದಿದೆ.

ಸಿದ್ಧಾರ್ಥನಗರದ ರಾಜಕಾಲುವೆಯ ಮೂಲಕ ಹರಿದುಬರುವ ನೀರಿನಲ್ಲಿ ಕೇವಲ ಮಳೆ ನೀರು ಮಾತ್ರವಲ್ಲದೆ, ಯುಜಿಡಿ (ಭೂಗತ ಒಳಚರಂಡಿ) ನೀರು ಸಹ ಮಿಶ್ರಣವಾಗುತ್ತಿದೆ. ಈ ಕೊಳಚೆ ನೀರು ಯಾವುದೇ ಶುದ್ಧೀಕರಣವಿಲ್ಲದೆ ನೇರವಾಗಿ ಕಾರಂಜಿ ಕೆರೆಯನ್ನು ಸೇರುತ್ತಿರುವ ಪರಿಣಾಮ ಕೆರೆಯ ನೀರಿನ ಗುಣಮಟ್ಟ ದಿನದಿಂದ ದಿನಕ್ಕೆ ಹದಗೆಡುತ್ತಿದೆ.

ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಕೆರೆಗಳಿಗೆ ರಾಜಕಾಲುವೆ ಮೂಲಕ ಸೇರಬೇಕಾದ ಮಳೆ ನೀರು, ಚರಂಡಿ ನೀರಿನೊಂದಿಗೆ ಹಾಗೂ ಯುಜಿಡಿ ನೀರಿನೊಂದಿಗೆ ಮಿಶ್ರಣವಾಗಿ, ಕೆರೆ ಸೇರುತ್ತಿದೆ. ಈಗಾಗಲೇ ಅರ್ಧಕ್ಕೂ ಹೆಚ್ಚು ಭಾಗದ ಕೆರೆಯನ್ನು ಮೋರಿ ನೀರೇ ಆವರಿಸಿದ್ದು, ಮುಂದಿನ ದಿನಗಳಲ್ಲಿ ಕಾರಂಜಿ ಕೆರೆ ಕೇವಲ ನೆನಪಾಗಿ ಉಳಿಯುವುದರಲ್ಲಿ ಸಂಶಯವಿಲ್ಲ.

ನಗರೀಕರಣದಿಂದ ಉಂಟಾದ ಸಮಸ್ಯೆಯಿದು: ಸಿದ್ಧಾರ್ಥ ನಗರ ಬಡಾವಣೆ ವಿಸ್ತರಣೆಗೊಂಡ ಬಳಿಕ ಈ ಸಮಸ್ಯೆ ಎದುರಾಗಿದೆ. ರಾಜಕಾಲುವೆಗೆ ನೇರವಾಗಿ ಚರಂಡಿ ನೀರನ್ನು ಸಂಪರ್ಕಿಸಲಾಗಿದೆ. ಇದರ ಸುತ್ತಮುತ್ತಲೂ ಇರುವ ಹಲವಾರು ಮ್ಯಾನ್‌ಹೋಲ್‌ಗಳು ಉಕ್ಕಿ ಹರಿಯುತ್ತಿರುವುದು, ಅದರಿಂದ ಬರುವ ಕೊಳಕು ನೀರು ಸಹ ಕೆರೆಗೆ ಸೇರುತ್ತಿದೆ. ಜನದಟ್ಟಣೆಯಿಂದ ನಿರ್ವಹಣೆ ಕಷ್ಟವಾಗಿದ್ದು, ಎಲ್ಲಾ ನೀರು ಕಾರಂಜಿ ಕೆರೆಗೆ ನುಗ್ಗುತ್ತಿವೆ.

> "ಯುಜಿಡಿ ನೀರನ್ನು ಕೆರೆಗೆ ಬಿಡದಂತೆ ಪಾಲಿಕೆಗೆ ತಿಳಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಯತೀಂದ್ರ ಸಿದ್ದರಾಮಯ್ಯ ಅವರ ಗಮನಕ್ಕೂ ತರಲಾಗಿತ್ತು. ಪರಿಸರ ದಿನಾಚರಣೆ ಅಂಗವಾಗಿ ಕಾರಂಜಿ ಕೆರೆಗೆ ಭೇಟಿ ಕೊಟ್ಟಿದ್ದ ಸಂಸದ ಯದುವೀರ್ ಅವರ ಗಮನಕ್ಕೂ ತರಲಾಗಿದ್ದು, ತ್ವರಿತವಾಗಿ ಸ್ಪಂದಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಸ್ಥಳೀಯ ಆಡಳಿತ ಮಂಡಳಿಗೆ ದೂರು ನೀಡಿ ನಮಗೂ ಸಾಕಾಗಿದೆ. ಜಿಲ್ಲಾಧಿಕಾರಿಗಳು ಭೇಟಿ ನೀಡಿ ಸಮಸ್ಯೆ ಪರಿಹರಿಸುವುದಾಗಿ ಹೇಳುತ್ತಿದ್ದಾರೆ. ಹೀಗಿದ್ದರೂ ಯಾವುದೇ ಕ್ರಮ ಆಗಿಲ್ಲ.
>
> -ಕೆ.ರಂಗಸ್ವಾಮಿ, ಅಧ್ಯಕ್ಷ, ಮೃಗಾಲಯ ಪ್ರಾಧಿಕಾರ.

ಕೆಲಸಕ್ಕೆ ಬಾರದ ಟ್ರೀಟ್‌ಮೆಂಟ್ ಪ್ಲಾಂಟ್: ಚರಂಡಿ ನೀರನ್ನು ಸ್ವಚ್ಛಗೊಳಿಸಿದ ಬಳಿಕ ಕೆರೆಗೆ ಹರಿಯಬಿಡುವುದಕ್ಕಾಗಿ ಮೋರಿ ಮುಂಭಾಗದಲ್ಲಿ ಟ್ರೀಟ್‌ಮೆಂಟ್ ಪ್ಲಾಂಟ್‌ಗಳನ್ನು ನಿರ್ಮಿಸಲಾಗಿದೆ. ಹೀಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಒಳಚರಂಡಿ ನೀರು ನೇರವಾಗಿ ಕೆರೆ ಒಡಲು ಸೇರುತ್ತಿದೆ. ಈ ಪ್ಲಾಂಟ್ ಕೇವಲ ಅಲ್ಪಮಟ್ಟಿನ ಮದ್ಯದ ಬಾಟಲ್‌ಗಳು, ವಾಟರ್ ಬಾಟಲ್‌ಗಳನ್ನು ಮಾತ್ರ ತಡೆಯುತ್ತಿದೆ ಅಷ್ಟೆ.

ಕೆರೆಯ ಒಡಲಲ್ಲಿ ಮದ್ಯದ ಬಾಟಲ್, ವಾಟರ್ ಬಾಟಲ್: ನಿರಂತರವಾಗಿ ಚರಂಡಿ ನೀರು ಸೇರುತ್ತಿರುವ ಕಾರಣ ಕೆರೆಯ ಕೆಲವು ಭಾಗ ಕೆಸರಾಗಿ ಬದಲಾಗಿದೆ. ಬೇಸಿಗೆಯಲ್ಲಿ ನೀರು ಕಡಿಮೆಯಾಗಿದ್ದು, ಕೆರೆಯ ಆವರಣದಲ್ಲಿ ರಾಶಿ–ರಾಶಿ ವಾಟರ್ ಬಾಟಲ್, ವಿವಿಧ ಬ್ರ್ಯಾಂಡ್‌ನ ಮದ್ಯದ ಬಾಟಲ್‌ಗಳು ಚೆಲ್ಲಾಡಿವೆ. ಮತ್ತೊಂದೆಡೆ ರಾಜಕಾಲುವೆಗೆ ಅಡ್ಡಲಾಗಿ ಹಾಕಲಾಗಿರುವ ಪಂಜರದಲ್ಲಿಯೂ ರಾಶಿ ರಾಶಿ ಬಾಟಲ್‌ಗಳು ಹೇಸಿಗೆ ಮೂಡಿಸುತ್ತಿದೆ

ಪಕ್ಷಿಗಳೇ ನಾಪತ್ತೆಯಾಗಿವೆ: ಕಾರಂಜಿ ಕೆರೆ ಪಕ್ಷಿಪ್ರಿಯರ ವಿಹಾರ ತಾಣ. ಇಲ್ಲಿ 147ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳನ್ನು ಗುರುತಿಸಲಾಗಿದೆ. ಸ್ಥಳೀಯ ಪಕ್ಷಿಗಳ ಜೊತೆಗೆ ವಲಸೆ ಪಕ್ಷಿಗಳೂ ಇಲ್ಲಿಗೆ ಆಗಮಿಸುತ್ತವೆ. ಪೆಲಿಕಾನ್, ಪೇಂಟೆಡ್ ಸ್ಟಾರ್ಕ್, ಓಪನ್‌ಬಿಲ್ ಸ್ಟಾರ್ಕ್, ಕೊಕ್ಕರೆ, ಬಕ, ಕಾರ್ಮೊರಂಟ್ ಸೇರಿದಂತೆ ಅನೇಕ ಜಾತಿಯ ಪಕ್ಷಿಗಳು ಇಲ್ಲಿ ಕಂಡುಬರುತ್ತಿದ್ದವು. ಈಗ ವಲಸೆ ಪ್ರಮಾಣ ದಿನೇ–ದಿನೆ ಕಡಿಮೆಯಾಗುತ್ತಾ ಬರುತ್ತಿದೆ. ಜೊತೆಗೆ ಸ್ಥಳೀಯ ಪ್ರಭೇಧದ ಹಾವುಗಳು, ವಿವಿಧ ಬಗೆಯ ಚಿಟ್ಟೆಗಳು, ಇತರೆ ಜೀವ ಸಂಕುಲ ಹಂತ–ಹಂತವಾಗಿ ಕಡಿಮೆಯಾಗುತ್ತಿದೆ.

ಮೋರಿ ನೀರಿಗೆ ಪ್ರತ್ಯೇಕ ಮಾರ್ಗ ತೋರಿ: ನಗರದ ಆಕರ್ಷಣೀಯ ಕೇಂದ್ರಗಳಲ್ಲಿ ಒಂದಾದ ಕಾರಂಜಿಗೆ ಅವೈಜ್ಞಾನಿಕವಾಗಿ ಚರಂಡಿ ನೀರನ್ನು ಸಂಪರ್ಕಿಸುತ್ತಿರುವುದು ಸರಿಯಲ್ಲ. ಈ ಬಗ್ಗೆ ತ್ವರಿತ ಕ್ರಮ ಕೈಗೊಂಡು ಮೋರಿ ನೀರಿಗೆ ಬೇರೆಯದೇ ಆದ ಶಾಶ್ವತ ಮಾರ್ಗ ಕಂಡುಕೊಳ್ಳಬೇಕು. ಇಲ್ಲವಾದಲ್ಲಿ ಕಾರಂಜಿ ಕೆರೆಯೂ ನಾಶವಾಗುತ್ತದೆ. ಸಂಬಂಧಪಟ್ಟ ಅಧಿಕಾರಿ ವರ್ಗ ಈ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು ಎಂದು ಸಾಮಾಜಿಕ ಕಳಕಳಿಯುಳ್ಳ ನಾಗರಿಕರು ಆಗ್ರಹಿಸಿದ್ದಾರೆ.

> "15 ವರ್ಷಗಳಿಂದ ಇದೇ ಸಂಗತಿ ನಡೆದು ಬರುತ್ತಿದೆ. ಈ ಹಿಂದೆ ಹೋರಾಟ ಮಾಡಿ, ಚರಂಡಿ ನೀರು ಕೆರೆ ಸೇರದಂತೆ ತಡೆಹಿಡಿಯಲಾಗಿತ್ತು. ಈಗ ಮತ್ತೆ ಇದೇ ಕೆಲಸ ಮುಂದುವರಿಯುತ್ತಿದೆ. ಕುಕ್ಕರಹಳ್ಳಿ ಕೆರೆ ಉಳಿವಿಗೆ ಹೋರಾಟ ಮಾಡುತ್ತಿರುವ ರೀತಿಯಲ್ಲಿ ಕಾರಂಜಿ ಕೆರೆ ಉಳಿವಿಗೂ ಹೋರಾಟ ಮಾಡಬೇಕಿದೆ.
>
> - ಭಾಮಿ ಶೆಣೈ, ಮೈಗ್ರಾಪ ಸಂಸ್ಥಾಪಕರು.

> "ಮೊನ್ನೆಯಷ್ಟೆ ಶಾಸಕ ಶ್ರೀವತ್ಸ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ. ಜೊತೆಗೆ ಪಾಲಿಕೆಗೂ ಮಾಹಿತಿ ನೀಡಿದ್ದು, ನಿನ್ನೆ ಬಂದು ಪರಿವೀಕ್ಷಣೆ ಮಾಡಿ ಹೋಗಿದ್ದಾರೆ. ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು.
>
> -ಪಿ.ಅನುಷಾ, ಕಾರ್ಯನಿರ್ವಾಹಕ ನಿರ್ದೇಶಕರು, ಮೈಸೂರು ಮೃಗಾಲಯ

ರಾಷ್ಟ್ರೀಯ ಮಹಿಳಾ ಮಾಸ್ಟರ್ಸ್ ಅಥ್ಲೇಟಿಕ್ ಕ್ರೀಡಾಕೂಟ

ಮೈಸೂರು ಜಿಲ್ಲಾ ಮಾಸ್ಟರ್ಸ್ ಅಸೋಸಿಯೇಷನ್‌ನ ಎಂಟು ಮಹಿಳಾ ಕ್ರೀಡಾಪಟುಗಳಿಗೆ 19 ಪದಕ



ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್‌ನ ಎಂಟು ಮಹಿಳಾ ಕ್ರೀಡಾಪಟುಗಳು ವಿವಿಧ ಕ್ರೀಡೆಗಳಲ್ಲಿ ಪಾಲ್ಗೊಂಡು 19 ಪದಕಗಳನ್ನು ತಮ್ಮದಾಗಿಸಿಕೊಂಡಿರುವ ಕ್ರೀಡಾಪಟುಗಳೊಂದಿಗೆ ಇತರೆ ಗಣ್ಯರು.

ಮೈಸೂರು, ಜೂ.12(ಎಸ್‌ಪಿಎನ್)– ಗೋವಾದಲ್ಲಿ ನಡೆದ ರಾಷ್ಟ್ರೀಯ ಮಹಿಳಾ ಮಾಸ್ಟರ್ಸ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದ ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್‌ನ ಎಂಟು ಮಹಿಳಾ ಕ್ರೀಡಾಪಟುಗಳು ವಿವಿಧ ಕ್ರೀಡೆಗಳಲ್ಲಿ ಪಾಲ್ಗೊಂಡು 19 ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದರಲ್ಲಿ 9 ಚಿನ್ನ, 5 ಬೆಳ್ಳಿ, 5 ಕಂಚು.

40 ವರ್ಷ ಮೇಲ್ಪಟ್ಟ ಪುರುಷರ ಗುಂಪಿನಲ್ಲಿ ಕ್ರೀಡಾಪಟು ಪುನೀತ್ 100ಮೀ ರಿಲೆಯಲ್ಲಿ ಪ್ರಥಮ, 400 ಮೀ ರಿಲೆಯಲ್ಲಿ ತೃತೀಯ ಬಹುಮಾನ ಮತ್ತು ಹೈ ಜಂಪ್ ಕ್ರೀಡೆಯಲ್ಲಿ ತೃತೀಯ ಬಹುಮಾನ ಹಾಗೂ 40 ವರ್ಷ ಮೇಲ್ಪಟ್ಟ ಮಹಿಳಾ ಗುಂಪಿನಲ್ಲಿ 100 ಮೀ ರಿಲೆಯಲ್ಲಿ ಜಯಲಕ್ಷ್ಮಿ ಕೊಲ್ಲಿಪುರ ಅವರು ತೃತೀಯ ಮತ್ತು ಹ್ಯಾಮರ್ ಥ್ರೋ ಕ್ರೀಡೆಯಲ್ಲಿ ಕೆ.ಜಿ.ಶರ್ಮಿಳಾ ಅವರು, ಪ್ರಥಮ ಸ್ಥಾನ ಗಳಿಸಿದ್ದಾರೆ. 55 ವರ್ಷ ಮೇಲ್ಪಟ್ಟ ವಿಭಾಗದಲ್ಲಿ ಕೆ.ಎ.ಭಾಗೀರಥಿ ಅವರು, 100 ಮತ್ತು 200 ಮೀ ಓಟ ಸ್ಪರ್ಧೆಯಲ್ಲಿ ಪ್ರಥಮ, 400 ಮೀ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

70 ವರ್ಷದ ಮಹಿಳಾ ವಿಭಾಗದಲ್ಲಿ ಬಿ.ಸಿ.ಪಾರ್ವತಿ ಅವರು 800 ಮೀ, 1500 ಮೀ ಓಟ ಸ್ಪರ್ಧೆಯಲ್ಲಿ ಪ್ರಥಮ ಹಾಗೂ 3 ಸಾವಿರ ಮೀ ನಡುಗೆ ಸ್ಪರ್ಧೆಯಲ್ಲಿ ಪ್ರಥಮ ಮತ್ತು 400 ಮೀ ರಿಲೇಯಲ್ಲಿ ಪ್ರಥಮ ಸ್ಥಾನಗಳಿಸಿ, ವೈಯಕ್ತಿಕ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ. ಮತ್ತೋರ್ವ ಕ್ರೀಡಾಪಟು 70 ವರ್ಷ ವಿಜಯ ರಮೇಶ್, ಲಾಂಗ್ ಜಂಪ್ ಮತ್ತು ಶಾಟ್‌ಪುಟ್ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. 75 ವರ್ಷದ ಮಹಿಳಾ ವಿಭಾಗದಲ್ಲಿ ಎಚ್.ಎಂ.ಭಾರತಿ ಅವರು ಶಾಟ್‌ಪುಟ್ ಪ್ರಥಮ, ಡಿಸ್ಕಸ್ ಥ್ರೋ ದ್ವಿತೀಯ, ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನಗಳಿಸಿದ್ದಾರೆ ಎಂದು ಮೈಸೂರು ಜಿಲ್ಲಾ ಮಾಸ್ಟರ್ ಅಥ್ಲೆಟಿಕ್ ಅಸೋಸಿಯೇಷನ್ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಆರ್‌ಎನ್‌ಎಂ ಎಂಟರ್ ಪ್ರೈಸಸ್ ಕಚೇರಿ ಆವರಣದಲ್ಲಿ ಬುಧವಾರ ನಡೆದ ಸರಳ ಸಮಾರಂಭದಲ್ಲಿ ಪದಕ ವಿಜೇತ ಎಲ್ಲಾ ಕ್ರೀಡಾಪಟುಗಳನ್ನು ಅಸೋಸಿಯೇಷನ್ ಅಧ್ಯಕ್ಷರಾದ ಸುಮನ ನರಸಿಂಹಮೂರ್ತಿ, ಕಾರ್ಯದರ್ಶಿ ಬಿ.ಬಸವರಾಜು, ಖಜಾಂಚಿ ಕೆ.ಎನ್.ಸೋಮಶೇಖರ್ ನೇತೃತ್ವದಲ್ಲಿ ಎಲ್ಲಾ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯರಾದ ಸೋಮಶೇಖರ್, ರಾಣಿ ಬಿ.ರಾಜ್, ಮಹದೇವಯ್ಯ, ಎಂ.ಯೋಗೇಂದ್ರ, ಎಂ.ಎಸ್.ಮಹೇಶ್, ಪಾರ್ವತಿ ಕಾಂತರಾಜು, ಎಂ.ಪಿ.ಚಂದ್ರಶೇಖರ್, ಎನ್.ವಿನಾಯಕ್, ಬಸವ ರಾಜು, ಬಲ ರಾಮೇಗೌಡ, ರವಿ, ಸುಜಾತ ಇದ್ದರು.

ಮೈಸೂರು ಮಿತ್ರ

ಜೂ.15, ಕಬ್ಬಿನ ಬಾಕಿ ಹಣಕ್ಕೆ ಆಗ್ರಹಿಸಿ ರೈತ ಸಂಘದಿಂದ ಪ್ರತಿಭಟನೆ



ಭಾರತೀನಗರ ವೃತ್ತ ಘಟಕದ ರೈತ ಮುಖಂಡರು ಪೂರ್ವಭಾವಿಸಭೆ ನಡೆಸಿದರು.

ಭಾರತೀನಗರ, ಜೂ.12– ಕಬ್ಬಿನ ಬಾಕಿ ಹಣಕ್ಕಾಗಿ ಆಗ್ರಹಿಸಿ ರೈತ ಸಂಘದ ನೇತೃತ್ವದಲ್ಲಿ ಜೂ.15 ರಂದು ಬೆಳಗ್ಗೆ 11 ಗಂಟೆಗೆ ಪ್ರತಿಭಟನೆ ನಡೆಸಲು ಮದ್ದೂರು ತಾಲ್ಲೂಕು ಭಾರತೀನಗರ ವೃತ್ತ ಘಟಕದ ರೈತ ಮುಖಂಡರು ನಿರ್ಧರಿಸಿದ್ದಾರೆ.

ರೈತರಿಗೆ ನೀಡಬೇಕಾಗಿರುವ ಕಬ್ಬಿನ 100 ರೂ. ಹಣದಲ್ಲಿ 50 ರೂ.ಗಳನ್ನು ಸರ್ಕಾರ ಕಾರ್ಖಾನೆಗಳಿಗೆ ವಿತರಣೆ ಮಾಡಿದ್ದು, ಕೊಪ್ಪ ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆ ಹಾಗೂ ಕೆ.ಎಂ.ದೊಡ್ಡಿಯ ಶ್ರೀಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ 50 ರೂ.ಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದೆ. ಈ ಕೂಡಲೇ ತಡೆಯಾಜ್ಞೆಯನ್ನು ಹಿಂಪಡೆದು 50 ರೂ. ಪ್ರೋತ್ಸಾಹ ಧನವನ್ನು ರೈತರಿಗೆ ಬಟವಾಡೆ ಮಾಡಬೇಕೆಂದು, ಬಟವಾಡೆ ನಂತರ ಕಾರ್ಖಾನೆ ಆರಂಭಿಸಬೇಕೆಂದು ಕಾರ್ಖಾನೆಗಳನ್ನು ಒತ್ತಾಯಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ವ್ಯವಸಾಯದ ಖರ್ಚುಗಳು ಹೆಚ್ಚಾಗಿದೆ. ಡೀಸೆಲ್, ರಸಗೊಬ್ಬರಗಳ ಬೆಲೆ ಏರಿಕೆಯಾಗಿದೆ. ಇದರಿಂದ ರೈತರಿಗೆ ಕಬ್ಬು ಬೆಳೆಯಿಂದ ನಷ್ಟ ಅನುಭವಿಸುತ್ತಿದ್ದಾರೆ. ಕಾರ್ಖಾನೆ ಪ್ರಾರಂಭಿಸಬೇಕಾದರೆ ಟನ್ ಕಬ್ಬಿಗೆ 5 ಸಾವಿರ ನಿಗದಿ ಪಡಿಸಬೇಕು ಎಂದರು.

ಸೋಮವಾರ ನಡೆಯುವ ಪ್ರತಿಭಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆಗಮಿಸಿ ಯಶಸ್ವಿಗೊಳಿಸಿಕೊಡ ಬೇಕೆಂದು ರೈತ ಸಂಘದ ವಿಭಾಗೀಯ ಘಟಕದ ಉಪಾಧ್ಯಕ್ಷ ಬೋರಾಪುರ ಶಂಕರೇಗೌಡ ಮನವಿ ಮಾಡಿದ್ದಾರೆ.

ಸಭೆಯಲ್ಲಿ ರೈತ ಸಂಘದ ಜಿಲ್ಲಾ ಘಟಕದ ವಿಜಾಪುರ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ನಿಂಗಪ್ಪಾಜಿ, ಉಪಾಧ್ಯಕ್ಷ ಜಿ.ಎ.ಶಂಕರ್, ವೃತ್ತ ಘಟಕದ ಅಧ್ಯಕ್ಷ ಕಳ್ಳಿಮೆಳೆದೊಡ್ಡಿ ಸಿದ್ದರಾಜು, ತಾಲೂಕು ಘಟಕದ ಉಪಾಧ್ಯಕ್ಷ ಮುಟ್ಟನಹಳ್ಳಿ ವೆಂಕಟೇಶ್, ಕಾರ್ಯದರ್ಶಿ ಸಿ.ಟಿ.ಕೆ ಮಹದೇವ, ಡಿ.ಎ. ಕೆರೆ ರಮೇಶ, ಮಾದಯ್ಯದೇಶಿಗೌಡ ಇದ್ದರು.

ಪಾಂಡವಪುರ ಪ್ರೀಮಿಯರ್ ಲೀಗ್ ಸೀಸನ್–2 ಕ್ರಿಕೆಟ್ ಪಂದ್ಯಾವಳಿ ಚಾಲನೆ

ಬೆಟ್ಟಿಂಗ್ ದಂಧೆಯಿಂದ ದೂರ ಸರಿದು ಭವಿಷ್ಯ ರೂಪಿಸಿಕೊಳ್ಳಿ



ಪಾಂಡವಪುರ ಪ್ರೀಮಿಯರ್ ಲೀಗ್ ಸೀಜನ್–2 ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಬ್ಯಾಟಿಂಗ್ ಮಾಡುವ ಮೂಲಕ ಚಾಲನೆ ನೀಡಿದರು.

ಪಾಂಡವಪುರ, ಜೂ.12– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನಿಪ್ಪು ವಾರಿಯರ್ ಸೀಜನ್–2 ವತಿಯಿಂದ ನಡೆದ ಪಾಂಡವಪುರ ಪ್ರೀಮಿಯರ್ ಲೀಗ್ ಸೀಜನ್–2 ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕ್ರಿಕೆಟ್ ಪಂದ್ಯಾವಳಿಗಳು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಪ್ರಖ್ಯಾತಿ ಪಡೆದುಕೊಳ್ಳುತ್ತಿವೆ. ಆದರೆ, ಯುವಕರು ಕ್ರೀಡೆಯನ್ನು ಸ್ಪರ್ಧಾತ್ಮಕವಾಗಿ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ದುರ್ಬಳಕೆ ಮಾಡಿಕೊಳ್ಳಬಾರದು, ಇತ್ತೀಚಿನ ದಿನಗಳಲ್ಲಿ ಕೆಲವು ಯುವಕರು ಕ್ರಿಕೆಟ್ ಮೂಲಕ ಬೆಟ್ಟಿಂಗ್ ಕಟ್ಟಿ ಭವಿಷ್ಯವನ್ನು ನಾಶಮಾಡಿಕೊಳ್ಳುತ್ತಿದ್ದಾರೆ. ದಯಮಾಡಿ ನಮ್ಮ ಯುವ ಸಮುದಾಯ ಬೆಟ್ಟಿಂಗ್ ದಂಧೆಯಿಂದ ದೂರ ಸರಿದು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯುವಕರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಸಾಕಷ್ಟು ಉತ್ತಮ ಪರಿಣಾಮ ಬೀರಲಿದೆ. ಹಾಗಾಗಿ ಪ್ರತಿಯೊಬ್ಬ ಯುವಕರು ಕ್ರೀಡೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಪಂದ್ಯಾವಳಿಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ 18ಕ್ಕೂ ಅಧಿಕ ತಂಡಗಳು ಭಾಗವಹಿಸಿವೆ. ಮೂರು ದಿನಗಳ ಕಾಲ ನಡೆಯುವ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಗಳಿಸುವ ತಂಡಕ್ಕೆ 1 ಲಕ್ಷ ದ್ವಿತೀಯ ಸ್ಥಾನಕ್ಕೆ 50 ಸಾವಿರ ಹಾಗೂ ತೃತೀಯ ಸ್ಥಾನಕ್ಕೆ 30 ಸಾವಿರ ಬಹುಮಾನ ದೊರೆಯಲಿದೆ.

ಸಮಾರಂಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಆರ್.ಸೋಮಶೇಖರ್, ಆಯೋಜಕರಾದ ನಿಪ್ಪು, ಹೇಮಂತ್, ಮೇಘರಾಜ್, ವರದ, ಮಂಜು, ನವೀನ್, ಬಾಬು, ಜೆಡಿಎಸ್ ಮುಖಂಡರಾದ ಬಿ.ಎಸ್.ಜಯರಾಮು, ಗುರು ಸೇರಿದಂತೆ ಹಲವರು ಹಾಜರಿದ್ದರು.

ನಾಳೆ ಕಕರುಡಿ ಉಗಾದಿ ತೆಲುಗು ಅನುವಾದ ಕೃತಿ ಲೋಕಾರ್ಪಣೆ

ಮಂಡ್ಯ: ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದಿಂದ ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ "ಕಕರುಡಿ ಉಗಾದಿ" ತೆಲುಗು ಅನುವಾದ ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಜೂ.14ರಂದು ಬೆಳಗ್ಗೆ 11.30ಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ರಾಜೇಂದ್ರ ಪ್ರಸಾದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೂ ಮುನ್ನ ಬೆಳಗ್ಗೆ 10 ಗಂಟೆಗೆ ಹಿಂದೂಸ್ತಾನಿ ಗಾಯಕ ಅನಿರುದ್ಧ ಐತಾಳ ಮತ್ತು ಸಂಗಡಿಗರಿಂದ ಭಾವಗಾಯನ ನೆರವೇರಲಿದೆ. 2025ನೇ ಸಾಲಿನ ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿಗೆ ಲೇಖಕ ಜಿ.ಹೆಚ್.ರಘುನಾಥ ಅವರ 'ಇಲ್ಲಿಂದ ಮುಂದೆಲ್ಲ ಕಥೆ' ಕೃತಿಯನ್ನು ಆಯ್ಕೆ ಮಾಡಲಾಗಿದೆ ಎಂದರು.

ಹಿರಿಯ ಸಾಹಿತಿ ಮತ್ತು ಚಿಂತಕ ನಾಡೋಜ ಬರಗೂರು ರಾಮಚಂದ್ರಪ್ಪ ಅವರು ಲೇಖಕ ಜಿ.ಹೆಚ್.ರಘುನಾಥ ಅವರಿಗೆ 50 ಸಾವಿರ ನಗದಿನೊಂದಿಗೆ ಪ್ರಶಸ್ತಿ ಪ್ರದಾನ ಮಾಡುವರು. ರಂಗನಾಥ ರಾಮಚಂದ್ರರಾವ್ ಅವರು ಅನುವಾದಿಸಿರುವ 'ಕಕರುಡಿ ಉಗಾದಿ' ಕೃತಿಯನ್ನು ಹಿರಿಯ ಸ್ತ್ರೀವಾದಿ ಚಿಂತಕಿ ಮತ್ತು ಲೇಖಕಿ ಡಾ. ಸಬಿಹಾ ಭೂಮಿಗೌಡ ಬಿಡುಗಡೆ ಮಾಡುವರು. ಕನ್ನಡ ಪ್ರಾಧ್ಯಾಪಕ ಡಾ.ನಿತ್ಯಾನಂದ ಬಿ.ಶೆಟ್ಟಿ ಪ್ರಶಸ್ತಿ ವಿಜೇತ ಕೃತಿಯ ಕುರಿತು ಮಾತನಾಡುವರು. ಟ್ರಸ್ಟ್‌ನ ಅಧ್ಯಕ್ಷೆ ಎಚ್.ಆರ್.ಸುಜಾತಾ ಅಧ್ಯಕ್ಷತೆ ವಹಿಸುವರು. ಟ್ರಸ್ಟ್‌ನ ಆಜೀವ ಪೋಷಕ ಡಿ.ಪಿ.ರಾಜಮ್ಮ ರಾಮಣ್ಣ ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ಟ್ರಸ್ಟ್‌ನ ಅಧ್ಯಕ್ಷೆ ಎಚ್.ಆರ್.ಸುಜಾತಾ, ಸದಸ್ಯರಾದ ಲೋಕಾನಂದ, ರಾಕೇಶ್ ಇದ್ದರು.

ಲೋಕಾಯುಕ್ತ ಬಲೆಗೆ ರೆವೆನ್ಯೂ ಇನ್ಸ್‌ಪೆಕ್ಟರ್

ಹಲಗೂರು, ಜೂ.12– ಪೋಡಿ ಮಾಡಿಕೊಡಲು ಲಂಚ ಸ್ವೀಕರಿಸುತ್ತಿದ್ದ ರೆವೆನ್ಯೂ ಇನ್ಸ್‌ಪೆಕ್ಟರ್ ಲೋಕಾಯುಕ್ತ ಬಲೆಗೆ ಸಿಕ್ಕಿ ಬಿದ್ದಿದ್ದಾರೆ.

ಹಲಗೂರು ತಾಲೂಕು ಕಚೇರಿಯ ರೆವಿನ್ಯೂ ಇನ್ಸ್‌ಪೆಕ್ಟರ್ ಮಧುಸೂದನ್ ಎಂಬುವರೇ ಲೋಕಾಯುಕ್ತ ಬಲೆಗೆ ಸಿಕ್ಕಿ ಬಿದ್ದವರಾಗಿದ್ದಾರೆ.

ರೈತ ನಂಜುಂಡಸ್ವಾಮಿ ಅವರ ಜಮೀನು ಹೊಂದಿದ್ದು, ಅದನ್ನು ಪೋಡಿ ಮಾಡಿಕೊಡಲು ರೆವಿನ್ಯೂ ಇನ್ಸ್‌ಪೆಕ್ಟರ್ ಮಧುಸೂದನ್ 2 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಇಂದು ಮುಂಗಡವಾಗಿ 10 ಸಾವಿರ ರೂ. ಲಂಚ ಸ್ವೀಕರಿಸುವಾಗಲೇ ಮಂಡ್ಯ ಜಿಲ್ಲಾ ಲೋಕಾಯುಕ್ತ ಪೊಲೀಸರು ಹಣದ ಸಮೇತ ಬಂಧಿಸಿದ್ದಾರೆ. ಮಧುಸೂದನ್ ಲಂಚದ ಹಣಕ್ಕಾಗಿ ನೀಡುತ್ತಿದ್ದ ಕಿರುಕುಳ ತಾಳಲಾರದೆ ರೈತ ನಂಜುಂಡಸ್ವಾಮಿ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಮಾಯಣ್ಣಗೌಡ ನಿಧನ



ಕೆ.ಆರ್.ಪೇಟೆ, ಜೂ.12– ತಾಲೂಕಿನ ಕಸಬಾ ಹೋಬಳಿಯ ಬೊಮ್ಮನಾಯಕನಹಳ್ಳಿ ಗ್ರಾಮದ ಹಿರಿಯ ಮುಖಂಡರು ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರೂ ಆದ ಮಾಯಣ್ಣಗೌಡ ನಿಧನ ಹೊಂದಿದರು.

ಅವರಿಗೆ 71 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಅಗ್ರಹಾರ ಬಾಚಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ಪ್ರೇಮಮ್ಮ, ಇಬ್ಬರು ಪುತ್ರಿಯರು, ಓರ್ವ ಪುತ್ರ ಬಿ.ಎಂ.ಧನಂಜಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಶನಿವಾರ (ಜೂ.13) ಬೆಳಗ್ಗೆ 11 ಗಂಟೆಗೆ ಹುಟ್ಟೂರು ಬೊಮ್ಮನಾಯಕನಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಅಗ್ರಹಾರಬಾಚಹಳ್ಳಿ ಗೌರಮ್ಮ



ಕೆ.ಆರ್.ಪೇಟೆ: ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರಬಾಚಹಳ್ಳಿ ಗ್ರಾಮದ ದೇವೇಗೌಡರ ಪತ್ನಿ ಗೌರಮ್ಮ(70) ನಿಧನ ಹೊಂದಿದರು.

ಮೃತರು ಪತಿ, ಪುತ್ರರಾದ ನಾಯಕನಹಳ್ಳಿ ಶಾಲೆಯ ಶಿಕ್ಷಕ ಡಿ.ಬೋರೇಗೌಡ, ರೈತರಾದ ಮಂಜೇಗೌಡ ಬಿ.ಬೋರೇಗೌಡ, ಪುತ್ರಿ ಬಿ.ಲತಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ

ಮಕ್ಕಳಿಗೆ ಮೂಲ ಸೌಕರ್ಯದ ಜೊತೆಗೆ ರಕ್ಷಣೆ ಒದಗಿಸಿ



ಜಿಪಂ ಸಭಾಂಗಣದಲ್ಲಿ ನಡೆದ ಸಭೆಯನ್ನು ಉದ್ಘಾಟಿಸುತ್ತಿರುವುದು.

ಮಂಡ್ಯ: ಜಿಲ್ಲೆಯ ಎಲ್ಲಾ ಶಾಲಾ ಮಕ್ಕಳಿಗೆ ಗುಣಮಟ್ಟದ ಮತ್ತು ಪೌಷ್ಟಿಕ ಆಹಾರವನ್ನು ನೀಡುವುದು ಅತ್ಯಗತ್ಯವಾಗಿದ್ದು ಮಕ್ಕಳಿಗೆ ಮೂಲ ಸೌಕರ್ಯಗಳ ನೀಡುವುದರ ಜೊತೆಗೆ ಮಕ್ಕಳ ಸಂರಕ್ಷಣೆ ನಮ್ಮ ಜವಾಬ್ದಾರಿ ಎಂದು ಜಿ.ಪಂ. ಸಿಇಓ ಕೆ.ಆರ್.ನಂದಿನಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮಪಡಿಸಲು ಹಾಗೂ ಶಾಲಾ ಕಟ್ಟಡ ಸುರಕ್ಷತೆಗೆ ಸಂಬಂಧ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಾಲೆಗಳಲ್ಲಿ ನೀಡುವ ಬಿಸಿಯೂಟ ಯೋಜನೆ ಮತ್ತು ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮಗಳು ಮಕ್ಕಳ ಆರೋಗ್ಯವನ್ನು ಉತ್ತಮವಾಗಿಡಲು ಸಹಾಯ ಮಾಡುತ್ತವೆ ಎಂದರು. ಮಕ್ಕಳು ಊಟ ಮಾಡುವ ಸಂದರ್ಭದಲ್ಲಿ ಮಕ್ಕಳಿಗೆ ಕುಳಿತು ಊಟ ಮಾಡಲು ಮ್ಯಾಟ್‌ಗಳನ್ನು ಅಳವಡಿಸುವಂತೆ ಸೂಚಿಸಿದರು ಹಾಗೂ ಶಾಲಾ ಅವರಣವನ್ನು ಸ್ವಚ್ಛತೆಯಿಂದ ನೋಡಿಕೊಳ್ಳಬೇಕು ಎಂದು ತಿಳಿಸಿದ ಅವರು ಮಕ್ಕಳ ಪಠ್ಯ–ಪುಸ್ತಕ ಹಾಗೂ ಸಮವಸ್ತ್ರದ ಕೊರತೆಯಾಗದಂತೆ ನೋಡಿಕೊಳ್ಳಬೇಕು ಮತ್ತು ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದರು.

ಮಳವಳ್ಳಿ, ಮದ್ದೂರಿಗೆ ಸಮರ್ಪಕ ನೀರು ಪೂರೈಕೆ

ಜಾಕ್ವೆಲ್ ನೀರು ಶುದ್ಧೀಕರಣಗಳಿಗೆ ನಿರಂತರ ವಿದ್ಯುತ್ ಪೂರೈಕೆಗೆ ಜಿಲ್ಲಾಧಿಕಾರಿ ನಿರ್ದೇಶನ

ಮಂಡ್ಯ: ಮಳವಳ್ಳಿ ಮತ್ತು ಮದ್ದೂರು ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಜಾಕ್ವೆಲ್ ಮತ್ತು ಜಲ ಶುದ್ಧೀಕರಣ ಘಟಕಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾರ್ಗವನ್ನು ಅಳವಡಿಸುವ ಮೂಲಕ ಸಾರ್ವಜನಿಕರಿಗೆ ನೀರು ಸರಬರಾಜುವಿನಲ್ಲಿ ಸುಗಮಗೊಳಿಸುವಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.



ಜಿಲ್ಲಾಧಿಕಾರಿ ಡಾ.ಕುಮಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಮಳವಳ್ಳಿ ಮತ್ತು ಮದ್ದೂರು ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಜಾಕ್ವೆಲ್ ಮತ್ತು ಜಲ ಶುದ್ಧೀಕರಣ ಘಟಕಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾರ್ಗವನ್ನು ಅಳವಡಿಸುವ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳು ಹಾಗೂ ಚೆಸ್ಕಾಂ ಮತ್ತು ಮದ್ದೂರು ನಗರ ಸಭೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಮದ್ದೂರು ಮತ್ತು ಮಳವಳ್ಳಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಶುದ್ಧಿಕರಣ ಘಟಕಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾರ್ಗವನ್ನು ಅಳವಡಿಸುವ ಕಾಮಗಾರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅನುಮತಿ ಪಡೆದು ಚೆಸ್ಕಾಂ ವತಿಯಿಂದ 3 ದಿನಗಳಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮತ್ತು 1 ವಾರದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವತಿಯಿಂದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ವಿದ್ಯುತ್ ಮಾರ್ಗ ಅಳವಡಿ ಸಲು ಅಗತ್ಯ ಅನುಮೋದನೆಯನ್ನು ನೀಡಲು ಕ್ರಮ ವಹಿಸುವಂತೆ ಸೂಚಿಸಿದರು.

ಸಭೆಯಲ್ಲಿ ಶಾಸಕ ಕೆ.ಎಂ.ಉದಯ, ರಾಷ್ಟ್ರೀಯ ಪ್ರಾಧಿಕಾರದ ಯೋಜನಾ ನಿರ್ದೇಶಕ ಗಂಗಾಧರ್, ನಗರಸಭೆಯ ಕಾರ್ಯಪಾಲಕ ಅಭಿಯಂತರ ಪ್ರತಾಪ್, ಚೆಸ್ಕಾಂನ ಅಧೀಕ್ಷಕ ಅಭಿಯಂತರ ಸೋಮಶೇಖರ್, ಮದ್ದೂರು ನಗರಸಭೆಯ ಆಯುಕ್ತೆ ರಾಧಿಕಾ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

18 ಮಂದಿ ಸೇರ್ಪಡೆ!

ಹೊಸಬರಿಗೆ ಅವಕಾಶ: ಸಂಪುಟ ವಿಸ್ತರಣೆ ವೇಳೆ ರಾಹುಲ್ ಗಾಂಧಿ ಸಲಹೆಯಂತೆ ಹೊಸಬರು ಮತ್ತು ಯುವಕರಿಗೆ ಆದ್ಯತೆ ನೀಡಲು ಮುಂದಾಗಿರುವ ಮುಖ್ಯಮಂತ್ರಿ, ಅಂತಿಮವಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರೊಂದಿಗೂ ಸಮಾಲೋಚನೆ ನಂತರವಷ್ಟೇ ಪಟ್ಟಿ ಅಂತಿಮಗೊಳ್ಳಲಿದೆ.

ವಿಸ್ತರಣೆ ಸಂದರ್ಭದಲ್ಲಿ ಅವಕಾಶ ಪಡೆದುಕೊಳ್ಳಲು ಸುಮಾರು 70ಕ್ಕೂ ಹೆಚ್ಚು ಶಾಸಕರು ಭಾರೀ ಲಾಬಿ ನಡೆಸುತ್ತಿದ್ದರೆ, ಕೆಲವರಂತೂ ದೆಹಲಿಯಲ್ಲೇ ಠಿಕಾಣಿ ಹೂಡಿದ್ದಾರೆ.

ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಗೊಂಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಗರದಲ್ಲೇ ಇದ್ದು, ಅವರ ಸದಾಶಿವ ನಗರ ನಿವಾಸ ಪಕ್ಷದ ಶಾಸಕರ ಚಟುವಟಿಕೆ ಕೇಂದ್ರವಾದಂತಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ವೇಳೆ ಪೂರ್ಣ ಪ್ರಮಾಣದ ಸಂಪುಟಕ್ಕೆ ಸಲಹೆ ಮಾಡಿದ್ದರು. ಆದರೆ, ರಾಜ್ಯಸಭಾ ಹಾಗೂ ಪರಿಷತ್ ಚುನಾವಣೆಯಿಂದಾಗಿ ಸಾಧ್ಯವಾಗಲಿಲ್ಲ.

ತಮಿಳುನಾಡು ಸಿಎಂ ಜೋಸೆಫ್ ವಿಜಯ್

ಬಳಿಕ ತಾಯಿಗೆ 1 ಕೆಜಿ 600 ಗ್ರಾಂ ತೂಕದ ಬೆಳ್ಳಿ ಖಡ್ಗವನ್ನ ಕಾಣಿಕೆಯಾಗಿ ಅರ್ಪಿಸಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಬಾಬು ಹೆಗಡೆ ತಿಳಿಸಿದ್ದಾರೆ. ಸಂಕಲ್ಪ ಪೂಜೆ ಬಳಿಕ ದೀಪಾರಾಧನೆ ಮಾಡಲಾಯಿತು. ಈ ವೇಳೆ ಸಿಎಂಗೆ ಅರ್ಚಕರು ರಕ್ಷಾ ದಾರ ಕಟ್ಟಿದರು. ಪೂಜೆ ಬಳಿಕ ವಿಜಯ್ ದೇವಸ್ಥಾನದಿಂದ ಹೊರಟರು. ನೆಚ್ಚಿನ ನಟ, ಸಿಎಂ ನೋಡಲು ಅಭಿಮಾನಿಗಳು ಮುಗಿಬಿದ್ದರು. ಅವರನ್ನು ನಿಯಂತ್ರಿಸಲು ಪೊಲೀಸರು, ಭದ್ರತಾ ಸಿಬ್ಬಂದಿ ಹರಸಾಹಸ ಪಟ್ಟರು.

ಕಾಂಗ್ರೆಸ್ ಶಾಸಕರು ರೆಸಾರ್ಟ್ ವಾಸ್ತವ್ಯ

ಕಣಕ್ಕಿಳಿದಿರುವುದರಿಂದ ಪ್ರತಿ ಅಭ್ಯರ್ಥಿಯ ಗೆಲುವಿಗೆ ಕನಿಷ್ಠ 28 ಮತ ಬೇಕು. ಪ್ರಸ್ತುತ ವಿಧಾನಸಭೆಯಲ್ಲಿ ಕಾಂಗ್ರೆಸ್ ಬಳಿ ಅಧಿಕೃತವಾಗಿ 135 ಮತಗಳಿದ್ದು ಇಬ್ಬರು ಪಕ್ಷೇತರ ಶಾಸಕರು ಕಾಂಗ್ರೆಸ್ ಬೆಂಬಲಿಸಿದ್ದಾರಲ್ಲದೆ, ಎಸ್‌ಕೆಪಿಯ ದರ್ಶನ್ ಪುಟ್ಟಣ್ಣಯ್ಯ ಕೂಡ ಕಾಂಗ್ರೆಸ್ ಪರವಾಗಿಯೇ ಇದ್ದಾರೆ. ಹೀಗಾಗಿ ಕಾಂಗ್ರೆಸ್ ಬತ್ತಳಿಕೆಯಲ್ಲಿ 138 ಮತಗಳಿದ್ದು ಮೊದಲ 4 ಅಭ್ಯರ್ಥಿಗಳು ಅನಾಯಾಸವಾಗಿ ಗೆಲ್ಲಬಹುದಾಗಿದೆ. ಕೊನೆಯ ಅಭ್ಯರ್ಥಿ ವಿನಯ್ ಕಾರ್ತಿಕ್ ಅವರಿಗೆ ಮತಗಳ ಕೊರತೆ ಎದುರಾಗಲಿದ್ದು, ಬಿಜೆಪಿಯಿಂದ ಉಚ್ಚಾಟಿತರಾಗಿರುವ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಮತಗಳು ಬಿದ್ದರೆ ಗೆಲುವಿನ ದಾರಿ ಸುಲಭವಾಗಲಿದೆಯಾದರೂ ಇನ್ನೂ ಎರಡು ಮತಗಳ ಕೊರತೆ ಉಂಟಾಗಲಿದೆ.

ಇನ್ನು ಬಿಜೆಪಿ ಹತ್ತಿರ ಅಧಿಕೃತವಾಗಿ 62 ಮತಗಳಿದ್ದು ಕೆಆರ್‌ಪಿಪಿಯ ಜನಾರ್ದನ್ ರೆಡ್ಡಿ ಬೆಂಬಲ ಸಿಗುವ ಸಾಧ್ಯತೆಗಳಿವೆ. ಜತೆಗೆ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಮನವೊಲಿಕೆ ನಡೆದಿದ್ದು ಬಿಜೆಪಿಯ ಇಬ್ಬರು ಅಭ್ಯರ್ಥಿಗಳ ಗೆಲುವು ಕಷ್ಟವಾಗಲಾರದು. ಆದರೆ, ಜೆಡಿಎಸ್‌ನಿಂದ ಕಣಕ್ಕಿಳಿದಿರುವ ಗೋವಿಂದರಾಜು ಅವರಿಗೆ ಜೆಡಿಎಸ್‌ನ 18 ಶಾಸಕರು ಮತ ಹಾಕಿದರೂ ಹೆಚ್ಚುವರಿಯಾಗಿ 10 ಮತಗಳ ಅಗತ್ಯವಿದೆ. ಬಿಜೆಪಿ ಬಳಿ 4 ಮತಗಳಷ್ಟೇ ಹೆಚ್ಚುವರಿಯಾಗಿ ಉಳಿಯಲಿವೆ. ಬಿಜೆಪಿ ಉಚ್ಚಾಟಿತ ಶಾಸಕ ಯತ್ನಾಳ್ ಮತ್ತು ಜನಾರ್ದನ್ ರೆಡ್ಡಿ ಜೆಡಿಎಸ್ ಅಭ್ಯರ್ಥಿ ಪರವಾಗಿ ಮತ ಚಲಾಯಿಸಿದರೆ ಇನ್ನೂ ಎರಡು ಮತಗಳ ಕೊರತೆ ಉಂಟಾಗಲಿದೆ ಈ ಎರಡು ಮತಗಳನ್ನು ಗಳಿಸಲು ಕೇಂದ್ರ ಮಂತ್ರಿ ಕುಮಾರಸ್ವಾಮಿ ಅವರು ಕಾಂಗ್ರೆಸ್ ಅತೃಪ್ತ ಶಾಸಕರ ಕದ ತಟ್ಟುತ್ತಿದ್ದಾರೆ. ಬಿಜೆಪಿಯಿಂದ ಹೊರಗಿರುವ ಶಿವರಾಮ್ ಹೆಬ್ಬಾರ್ ಅವರನ್ನು ಸಂಪರ್ಕಿಸಿದ್ದಾರೆ. ಹೀಗಾಗಿ ಯಾವ್ಯಾವ ಪಕ್ಷದಿಂದ ಎಷ್ಟು ಶಾಸಕರು 'ಅಡ್ಡಮತದಾನ' ಮಾಡಬಹುದು ಎಂಬ ಕುತೂಹಲ ಉಂಟಾಗಿದೆ.

ರೆಸಾರ್ಟ್ ವಾಸ್ತವ್ಯ: ಕಾಂಗ್ರೆಸ್ ಶಾಸಕರು ಅಡ್ಡ ಮತದಾನ ಮಾಡುವುದನ್ನು ತಪ್ಪಿಸುವ ದೃಷ್ಟಿಯಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಹಳೆಯ ತಂತ್ರಕ್ಕೆ ಶರಣಾಗಿದ್ದಾರೆ ರೆಸಾರ್ಟ್ ವಾಸ್ತವ್ಯ ಆಯೋಜಿಸಿದ್ದಾರೆ. ಈ ತಿಂಗಳ 16ರಂದು ಸಂಜೆ ಬೆಂಗಳೂರು ಹೊರ ವಲಯದ ಬಿಡದಿ ಸಮೀಪದ ವಂಡರ್ ಲಾ ರೆಸಾರ್ಟ್‌ಗೆ ಬರುವಂತೆ ಪಕ್ಷದ ಎಲ್ಲಾ ಶಾಸಕರಿಗೂ ಸೂಚಿಸಲಾಗಿದೆ ಅಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಆಯೋಜಿಸಲಾಗಿದೆ ಎಂದು ಶಾಸಕಾಂಗ ಪಕ್ಷದ ಕಾರ್ಯದರ್ಶಿ ಅಲ್ಲಮಪ್ರಭು ಪಾಟೀಲ್ ತಿಳಿಸಿದ್ದಾರೆ.

ಶಾಸಕಾಂಗ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸುವ ಎಲ್ಲ ಶಾಸಕರಿಗೆ ಎರಡು ದಿನಗಳ ಕಾಲ ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ . ಜೂನ್ 18ರಂದು ಮತದಾನ ನಡೆಯಲಿದ್ದು ಎಲ್ಲ ಶಾಸಕರು ರೆಸಾರ್ಟ್‌ನಿಂದ ನೇರವಾಗಿ ವಿಧಾನಸೌಧದಲ್ಲಿ ತೆರೆಯಲಾಗುವ ಮತಗಟ್ಟೆಗೆ ಆಗಮಿಸಲು ವ್ಯವಸ್ಥೆ ಮಾಡಲಾಗಿದೆ. ವಂಡರ್ ಲಾ ರೆಸಾರ್ಟ್‌ನಲ್ಲಿ ಶಾಸಕರ ವಾಸ್ತವ್ಯದ ಉಸ್ತುವಾರಿಯನ್ನು ಮಾಜಿ ಸಂಸದ ಡಿ.ಕೆ.ಸುರೇಶ್ ಮತ್ತು ಕುಣಿಗಲ್ ಕ್ಷೇತ್ರದ ಶಾಸಕ ರಂಗನಾಥ್ ಅವರಿಗೆ ವಹಿಸಲಾಗಿದೆ.

ನೀವೇ ಸಿಎಂ ಆಗಿ ಅಂದ್ರೂ ಆಗಲಿಲ್ಲವಲ್ಲ

ತಮ್ಮದೇ ಪಕ್ಷದವರ ಜೊತೆ ಕೂತು ಚರ್ಚೆ ಮಾಡಲಿ. ಅಂದು ಅವರು ನನ್ನ ಜೊತೆ ಬಂದಾಗ ನಾನು, ಸಿಎಂ ಆಗಬೇಡಿ ಅಂತಾ ಹೇಳಿದ್ನಾ? ನೀವೇ ಮುಖ್ಯಮಂತ್ರಿಯಾಗಿ ಎಂದು ನಾನೇ ಖುದ್ದಾಗಿ ಹೇಳಿದ್ದೆ. ನೀವೇ ಸಿಎಂ ಆಗಿ ಎಂದಾಗಲೂ ಅವರು ಆಗಲಿಲ್ಲವಲ್ಲ ಎಂದು ಟಾಂಗ್ ನೀಡಿದ್ದಾರೆ. 2018ರಲ್ಲಿ ಕಾಂಗ್ರೆಸ್ 80 ಸ್ಥಾನ ಗೆದ್ದರೂ ಮೈತ್ರಿ ಸರ್ಕಾರದಲ್ಲಿ ಕುಮಾರಸ್ವಾಮಿ ಅವರು ಸಿಎಂ ಆದರು. ಅವತ್ತು ನನ್ನನ್ನೂ ಮುಖ್ಯಮಂತ್ರಿ ಮಾಡಬಹುದಿತ್ತು. ಆದರೆ ಅವಕಾಶ ಸಿಗಲಿಲ್ಲ. 2026ರಲ್ಲೂ ಸಿಎಂ ಹುದ್ದೆ ನಿರೀಕ್ಷೆ ಇತ್ತು. ಆದರೆ ರಾಜಕೀಯ ಕಾರಣಗಳಿಂದ ಸಾಧ್ಯವಾಗಲಿಲ್ಲ ಎಂದು ಡಿಸಿಎಂ ಪರಮೇಶ್ವರ ಇತ್ತೀಚೆಗೆ ಬೇಸರ ಹೊರ ಹಾಕಿದ್ದರು.


ಅಭಿನಂದನೆ...



ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡ ಅವರ ಲಲಿತಾಭಿನಂದನ ಕಾರ್ಯಕ್ರಮದ ಬಳಿಕ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡರನ್ನು ಅಭಿನಂದಿಸಿ, ಶುಭ ಕೋರಿದರು.

ಇದು ನನ್ನ ಕೊನೆಯ ಪ್ರಮಾಣಪತ್ರ ಸ್ವೀಕಾರವಾಗಬಹುದು!: ಖರ್ಗೆ

ಬೆಂಗಳೂರು: ರಾಜ್ಯಸಭೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವಿರೋಧವಾಗಿ ಆಯ್ಕೆಯಾಗಿದ್ದು, ಚುನಾವಣಾಧಿಕಾರಿಯಿಂದ ಆಯ್ಕೆ ಪ್ರಮಾಣ ಪತ್ರವನ್ನು ಇಂದು ಸ್ವೀಕರಿಸಿ ದರು.



ಪ್ರಮಾಣ ಪತ್ರ ಸ್ವೀಕರಿಸುವ ವೇಳೆ ಇದು ನನ್ನ ಕೊನೆಯ ಪ್ರಮಾಣಪತ್ರ ಸ್ವೀಕಾರ ಆಗಬಹುದು ಎಂದರು.

ವಿಧಾನಸೌಧ'ದಲ್ಲಿ ಚುನಾವಣಾಧಿಕಾರಿಯಿಂದ ಪ್ರಮಾಣಪತ್ರ ಸ್ವೀಕರಿಸಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಇದು ವಿಶೇಷ ಪ್ರಕರಣ. ಈ ಪ್ರಕರಣವನ್ನು ಎಳೆಯಲು, ಅವರು ಹೆಚ್ಚು ಸಮಯ ತೆಗೆದುಕೊಂಡಿದ್ದಾರೆ. ಸುಪ್ರೀಂಕೋರ್ಟ್ ಹೇಳಿದಂತೆ ನಾವು ಹೈಕೋರ್ಟ್‌ಗೆ ಹೋಗುತ್ತೇವೆ. ಮಧ್ಯಪ್ರದೇಶದಲ್ಲಿ ನಡೆದದ್ದು ಕಾನೂನುಬಾಹಿರ ಮತ್ತು ಪ್ರಜಾಪ್ರಭುತ್ವ ವಿರೋಧಿ. ಮೋದಿ ಇಲ್ಲದೇ ಇದು ಆಗುತ್ತಿರಲಿಲ್ಲ, ಬಿಜೆಪಿ ಪ್ರಜಾಪ್ರಭುತ್ವವನ್ನು ಕೊಲ್ಲುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಆರ್‌ಎಸ್‌ಎಸ್ ಏಜೆಂಟರನ್ನು ಎಲ್ಲೆಡೆ ಕೂರಿಸಿದ್ದಾರೆ: ತನ್ನ ಜನರನ್ನು ಎಲ್ಲೆಡೆ ಕೂರಿಸಿದ್ದಾರೆ. ಜಾರ್ಖಂಡ್‌ನಲ್ಲೂ ಇದೇ ರೀತಿ ಆಯ್ತು. ಮತ ಖರೀದಿ, ವಿಭಜನೆ ಮತ್ತು ಏಜೆಂಟರನ್ನು ಇರಿಸಲಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಹಸ್ತಕ್ಷೇಪ ಇರಬಾರದು. ಆರ್‌ಎಸ್‌ಎಸ್ ಏಜೆಂಟ್‌ಗಳನ್ನು ಎಲ್ಲೆಡೆ ಇರಿಸಲಾಗಿದೆ. ನಿಯಮಗಳನ್ನು ಯಾರು ಪರಿಶೀಲಿಸುತ್ತಿಲ್ಲ ಎಂದು ಆರೋಪಿಸಿದರು.

13ನೇ ಸಲ ಜನಪ್ರತಿನಿಧಿಯಾಗುವ ಅವಕಾಶ ಸಿಕ್ಕಿದೆ. ಕಲಬುರ್ಗಿ ಜನತೆಗೆ ಧನ್ಯವಾದ ಹೇಳುತ್ತೇವೆ. ಪಕ್ಷದ ಎಲ್ಲಾ ಕಾರ್ಯಕರ್ತರಿಗೂ ಧನ್ಯವಾದ. ಖುಷಿ ಆಗುತ್ತಿದೆ. ಜೀವನದಲ್ಲಿ ಸತತವಾಗಿ ಈ ಅವಕಾಶ ಸಿಗುತ್ತಿರುವುದು ಕಾಂಗ್ರೆಸ್ ಕೊಡುಗೆಯಾಗಿದೆ. ಇಂದಿರಾಗಾಂಧಿಯಿಂದ ಸೋನಿಯಾ ಗಾಂಧಿವರೆಗೆ ನನಗೆ ಅವಕಾಶ ನೀಡಿದ್ದಾರೆ. ಸೋನಿಯಾ ಗಾಂಧಿಗೆ, ರಾಜ್ಯದ ಜನರಿಗೆ, ಯಾವ ಮತ ಕ್ಷೇತ್ರದಿಂದ ನನ್ನನ್ನು ಆರಿಸುತ್ತಾರೆ ಅವರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ರಾಹುಲ್ ಗಾಂಧಿ ನನ್ನ ಜೊತೆ ಇದ್ದು ಪ್ರೋತ್ಸಾಹ ನೀಡಿದ್ದಾರೆ. ರಾಹುಲ್ ಗಾಂಧಿ ನನ್ನ ಜೊತೆ ಸೌಹಾರ್ದತೆಯಿಂದ ವರ್ತಿಸುತ್ತಾರೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹಾಗೂ ರಾಜ್ಯದ ಜನರು ಕೆಲಸ ಮಾಡಲು ಅವಕಾಶ ನೀಡಿದ್ದಾರೆ. ಯಾವಾಗಲೂ ಯಾವುದೇ ಕೆಲಸದಲ್ಲಿ ಮಾಧ್ಯಮ ಬೆಂಬಲ ಇಲ್ಲದೇ ಯಾರೂ ಕೂಡ ಜನರಿಗೆ ಪರಿಚಿತರಾಗುವುದಿಲ್ಲ. ಲೋಪದೋಷವನ್ನು ಎತ್ತಿ ಹಿಡಿಯುವುದು ಮಾಧ್ಯಮದವರ ಕೆಲಸವಾಗಿದೆ ಎಂದು ಅಭಿನಂದಿಸಿದರು.

1972ರಲ್ಲಿ ನಾನು ವಿಧಾನಸೌದಕ್ಕೆ ಕಾಲಿಟ್ಟಿದ್ದೇನೆ. ಅನೇಕ ಏರುಪೇರು ನೋಡಿದ್ದೇನೆ. ಈಗ ಸ್ವಲ್ಪ ಬದಲಾವಣೆ ಆಗಿದೆ. ಮಾಧ್ಯಮಗಳು ಕಾರ್ಪೊರೇಟ್ ಸಂಸ್ಥೆಗಳ ನಿಯಂತ್ರಣದಲ್ಲಿದೆ. ಮುಂಚೆ ಪತ್ರಕರ್ತರು ಯಾವಾಗಲೂ ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿದ್ದರು. ಪ್ರಜಾಪ್ರಭುತ್ವ ನಿಷ್ಪಕ್ಷಪಾತವಾಗಿ ಬೆಳೆಯಬೇಕಾದರೆ, ಮಾಧ್ಯಮದವರು ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು. ರಾಜಕೀಯ ವರ್ತನೆನೂ ಹಾಗೇ ಇರಬೇಕು. ಅರವತ್ತು ವರ್ಷದಲ್ಲಿ ಬಹಳ ಬದಲಾವಣೆ ಕಂಡಿದ್ದೇನೆ. ಸುಧಾರಣೆ ಆಗಬೇಕು ಎಂಬುದು ನನ್ನ ಅನಿಸಿಕೆ ಎಂದು ಸ್ವಲ್ಪ ಖಾರವಾಗಿಯೇ ಹೇಳಿದರು.

ಎಲ್ಲಾ ಕ್ಷೇತ್ರಗಳಲ್ಲಿ, ಎಲ್ಲಾ ವರ್ಗಗಳಲ್ಲಿ ಬದಲಾವಣೆ ಆಗಿದೆ. ರಾಜಕೀಯದವರು ಉತ್ತಮವಾಗಿ ಕೆಲಸ ಮಾಡಬೇಕು, ವಿಚಾರಧಾರೆಯಡಿ ಕೆಲಸ ಮಾಡಬೇಕು. ಇಲ್ಲವಾದರೆ ಜನರು ಅವರನ್ನು ಚುನಾವಣೆಯಲ್ಲಿ ಬದಲಾಯಿಸುತ್ತಾರೆ. ಕಾರ್ಪೊರೇಟ್ ಸಂಸ್ಥೆಗಳಿಗೆ ಯಾರೂ ಪಾಠ ಮಾಡುತ್ತಾರೆ. ಅವರಿಗೆ ಹೇಳುವವರು ಯಾರು. ಅವರನ್ನು ಯಾರು ಬದಲಾಯಿಸುತ್ತಾರೆ. ಅದರ ಉದಾಹರಣೆಯನ್ನು ಜಾರ್ಖಂಡ್, ಮಧ್ಯಪ್ರದೇಶದಲ್ಲಿ ನೋಡಿದ್ದೇವೆ ಎಂದು ವಾಗ್ದಾಳಿ ನಡೆಸಿದ್ದಾರೆ.

ನಾನಾ ವೈದ್ಯಕೀಯ ಕೋರ್ಸ್‌ಗಳ ಶುಲ್ಕದಲ್ಲಿ ಪ್ರಸಕ್ತ ವರ್ಷವೂ ಯಥಾಸ್ಥಿತಿ!

ಬೆಂಗಳೂರು, ಜೂ.12(ಕೆಎಂಶಿ)–ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕ ಹೆಚ್ಚಳ ಮಾಡದೇ ಯಥಾಸ್ಥಿತಿ ಮುಂದುವರೆಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ಇಂದಿಲ್ಲಿ ತೆಗೆದುಕೊಂಡಿದೆ.

ಸರ್ಕಾರದ ನಿರ್ಧಾರದಿಂದ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕ ಹೆಚ್ಚಳ ಆತಂಕದಲ್ಲಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅಧ್ಯಕ್ಷತೆಯಲ್ಲಿ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಆಡಳಿತ ಮಂಡಳಿ ಪ್ರತಿನಿಧಿಗಳ ಜೊತೆ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಕೊಳ್ಳಲಾಯಿತು.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಶುಲ್ಕ ಹೆಚ್ಚಳ ಪ್ರಸ್ತಾವನೆಗೆ ಅವಕಾಶವನ್ನೇ ಕೊಟ್ಟಿಲ್ಲ, 2025–26ನೇ ಸಾಲಿನ ಶೈಕ್ಷಣಿಕ ವರ್ಷದ ಶುಲ್ಕ ಪ್ರಮಾಣ ಯಥಾಸ್ಥಿತಿ ಮುಂದುವರೆಯಲಿದೆ ಎಂದರು.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ನಡೆದ ನೀಟ್ ಪ್ರವೇಶ ಪರೀಕ್ಷೆ ರದ್ದಾಗಿ ಮರುಪರೀಕ್ಷೆ ಒತ್ತಡಕ್ಕೆ ಅಭ್ಯರ್ಥಿಗಳು ಒಳಗಾಗಿರುವ ಸಮಯದಲ್ಲಿ ಶುಲ್ಕ ಹೆಚ್ಚಳ ಸರಿಯಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಕಳೆದ ಸಾಲಿನ ಶುಲ್ಕವನ್ನೇ ಮುಂದುವರೆಸಲಾಗುವುದು. ಈ ನಿಯಮ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಿಗೂ ಅನ್ವಯಿಸುತ್ತದೆ. ಇದರಿಂದ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆ ತಪ್ಪಿದಂತಾಗಿದೆ ಎಂದರು.

ಶುಲ್ಕ ವಿವರ: ಎಂಬಿಬಿಎಸ್–ಸರ್ಕಾರಿ ಕಾಲೇಜು 55,000 ರೂ., ಕೆಪಿಸಿಎಫ್ ಸರ್ಕಾರಿ ಕೋಟಾ 1,41,621 ರೂ., ಕೆಆರ್‌ಎಲ್‌ಎಂಪಿಸಿಎ ಸರ್ಕಾರಿ ಕೋಟಾ 1,41,621 ರೂ., ಎಎಂಪಿಸಿಕೆ ಸರ್ಕಾರಿ ಕೋಟಾ 1,41,621 ರೂ.

ಖಾಸಗಿ ವಿಶ್ವವಿದ್ಯಾಲಯಗಳ ಸರ್ಕಾರಿ ಕೋಟಾ 1,41,621 ರೂ., ಕೆಪಿಸಿಎಫ್ ಖಾಸಗಿ ಕೋಟಾ 11,88,167 ರೂ., ಕೆಆರ್‌ಎಲ್‌ಎಂಪಿಸಿಎ ಖಾಸಗಿ ಕೋಟಾ 11,88,167 ರೂ., ಎಎಂಪಿಸಿಕೆ ಖಾಸಗಿ ಕೋಟಾ 11,88,167 ರೂ.

ದಂತ ವೈದ್ಯಕೀಯ: ಸರ್ಕಾರಿ ಕಾಲೇಜುಗಳ ಕೋಟಾ 40,000 ರೂ., ಕೆಪಿಸಿಎಫ್ ಸರ್ಕಾರಿ ಕೋಟಾ 83,358 ರೂ., ಕೆಆರ್‌ಎಲ್‌ಎಂಪಿಸಿಎ ಸರ್ಕಾರಿ ಕೋಟಾ 83,358 ರೂ., ಎಎಂಪಿಸಿಕೆ ಸರ್ಕಾರಿ ಕೋಟಾ 83,358 ರೂ.

ಖಾಸಗಿ ಕೋಟಾ: ಕೆಪಿಸಿಎಫ್ 7,32,625 ರೂ., ಕೆಆರ್‌ಎಲ್‌ಎಂಪಿಸಿಎ 7,32,625 ರೂ., ಎಎಂಪಿಸಿಕೆ 7,32,625 ರೂ.

ಸುತ್ತಲಿ ದಾರ ಕುತ್ತಿಗೆ ಬಿಗಿದ ಸ್ಥಿತಿಯಲ್ಲಿ ಮಕ್ಕಳ ಸಾವು; ತಾಯಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆ

ಕೆ.ಆರ್.ಆಸ್ಪತ್ರೆಯಲ್ಲಿ ಸಾವು–ಬದುಕಿನ ನಡುವೆ ಹೋರಾಟ

ಚುಂಚನಕಟ್ಟೆ, ಜೂ.12– ಇಬ್ಬರು ಮಕ್ಕಳು ಸುತ್ತಲಿ ದಾರ ಕುತ್ತಿಗೆಗೆ ಬಿಗಿದ ಸ್ಥಿತಿಯಲ್ಲಿ ಸಾವನ್ನಪ್ಪಿದರೆ, ತಾಯಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈಗ ಆಕೆ ಸಾವು ಬದುಕಿನ ನಡುವೆ ಹೋರಾಡುತ್ತಿರುವ ಈ ಘಟನೆ ಶುಕ್ರವಾರ ಸಾಲಿಗ್ರಾಮ ತಾಲೂಕಿನ ಜವರೇಗೌಡನ ಕೊಪ್ಪಲಿನಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಅನಿಲ್ ಕುಮಾರ್ ಪತ್ನಿ ಪ್ರಿಯಾಂಕಾ(26) ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರೆ, ಆಕೆಯ ಪುತ್ರಿಯರಾದ ಧೃತಿ(3), ದಿಶಾ(ಒಂದೂವರೆ ವರ್ಷ) ಸುತ್ತಲಿ ದಾರ ಕುತ್ತಿಗೆಗೆ ಬಿಗಿದ ಸ್ಥಿತಿಯಲ್ಲಿ ಸಾವನ್ನಪ್ಪಿದ್ದಾರೆ.

ವಿವರ: ಕಳೆದ 8 ವರ್ಷಗಳ ಹಿಂದೆ ಪಿರಿಯಾಪಟ್ಟಣ ತಾಲೂಕಿನ ವಡ್ಡರಹಳ್ಳಿ ಗ್ರಾಮದ ಸ್ವಾಮಿಗೌಡರ ಪುತ್ರಿ ಪ್ರಿಯಾಂಕಾ ಅವರನ್ನು ಮದುವೆಯಾಗಿದ್ದ ಅನಿಲ್ ಕುಮಾರ್, ತಂದೆ ತಾಯಿಯೊಂದಿಗೆ ವಾಸವಿದ್ದರು. ಈ ದಂಪತಿಗೆ ಧೃತಿ ಹಾಗೂ ದಿಶಾ ಎಂಬ ಹೆಣ್ಣು ಮಕ್ಕಳಿದ್ದು, ಎಲ್ಲರೂ ಅನ್ಯೋನ್ಯವಾಗಿದ್ದರು. ಆದರೆ ಶುಕ್ರವಾರ ಅನಿಲ್ ಕುಮಾರ್ ಮುಂಜಾನೆಯೇ ಜಮೀನಿಗೆ ತೆರಳಿ, ಸುಮಾರು 10 ಗಂಟೆಗೆ ಮನೆಗೆ ಆಗಮಿಸಿದ್ದ. ಬಳಿಕ ಊಟ ಮಾಡಿ ತಂದೆ ತಾಯಿಯೊಂದಿಗೆ ಹೊಗೆಸೊಪ್ಪು ಬ್ಯಾರನ್ ಮನೆ ಕ್ಲೀನ್ ಮಾಡಲು ಹೊರಟಿದ್ದಾರೆ. ಮಕ್ಕಳನ್ನು ರೆಡಿ ಮಾಡು ಅಕ್ಕನ ಮನೆಗೆ ಕರೆದುಕೊಂಡು ಹೋಗೋಣ ಎಂದು ಪತ್ನಿ ಪ್ರಿಯಾಂಕಾಗೆ ತಿಳಿಸಿದ್ದ. ಈ ವೇಳೆ ಮಕ್ಕಳು ಹೊಗೆಸೊಪ್ಪು ಕಟ್ಟಲು ತಂದಿದ್ದ ಸುತ್ತಲಿ ದಾರ ಹಿಡಿದು ಆಟವಾಡುತ್ತಿದ್ದನ್ನು ಗಮನಿಸಿದ ಅನಿಲ್, ಸುತ್ತಲಿ ದಾರದೊಂದಿಗೆ ಆಟವಾಡದಂತೆ ತಡೆದು, ತಂದೆ ತಾಯಿಯೊಂದಿಗೆ ಬ್ಯಾರನ್ ಮನೆಗೆ ಹೋಗಿದ್ದರು.

ಬಳಿಕ 11.30ಕ್ಕೆ ಮನೆಗೆ ಬಂದಾಗ ಮನೆ ಬಾಗಿಲು ಹಾಕಿದ್ದು, ಒಳ ಹೋಗಿ ನೋಡಲಾಗಿ ಪತ್ನಿ ಪ್ರಿಯಾಂಕ ಸೀರೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿದ್ದ. ಕೆಳಗೆ ನೆಲದಲ್ಲಿ ಕುತ್ತಿಗೆಗೆ ಸುತ್ತಲಿ ದಾರ ಬಿಗಿದ ಸ್ಥಿತಿಯಲ್ಲಿ ಧೃತಿ ಹಾಗೂ ದಿಶಾ ಮಲಗಿದ್ದರು. ಇದನ್ನು ಕಂಡು ಅನಿಲ್ ಕೂಗಿಕೊಂಡಾಗ ಅಕ್ಕಪಕ್ಕದವರು ಧಾವಿಸಿ ಮಕ್ಕಳು ಹಾಗೂ ಪ್ರಿಯಾಂಕಳನ್ನು ಕಾರಿನಲ್ಲಿ ಕೆ.ಆರ್.ನಗರ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರು. ಈ ವೇಳೆ ಮಕ್ಕಳನ್ನು ಪರೀಕ್ಷಿಸಿದ ವೈದ್ಯರು ಅವು ಸಾವನ್ನಪ್ಪಿರುವುದನ್ನು ದೃಢಪಡಿಸಿದರು. ಪ್ರಿಯಾಂಕಾರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ.

ಮಕ್ಕಳು ಆಟವಾಡುತ್ತಿದ್ದ ವೇಳೆ ಅವರೇ ಸುತ್ತಲಿ ದಾರದಿಂದ ಕುತ್ತಿಗೆಗೆ ಬಿಗಿದುಕೊಂಡು ಸಾವನ್ನಪ್ಪಿರಬಹುದು. ಇದನ್ನು ಕಂಡ ನನ್ನ ಪತ್ನಿ ಭಯದಿಂದ ಆತ್ಮಹತ್ಯೆಗೆ ಯತ್ನಿಸಿರಬಹುದು. ಆದರೂ, ಈ ಘಟನೆ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಪ್ರಿಯಾಂಕಾಳ ಪತಿ ಅನಿಲ್ ಕುಮಾರ್ ಸಾಲಿಗ್ರಾಮ ಠಾಣೆಗೆ ದೂರು ನೀಡಿದ್ದಾರೆ.

ಮಕ್ಕಳ ಕೈಯಲ್ಲಿ ಪುಸ್ತಕಗಳಿರಬೇಕೇ ಹೊರತು ಸಲ್ಲದ ಉಪಕರಣಗಳಲ್ಲ...!

●ನ್ಯಾಯಾಧೀಶ ನಾಗರಾಜು ಎಸ್. ಅಂಕಸದೊಡ್ಡಿ ಕಿವಿಮಾತು ●ಮೈಸೂರಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ





'ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ' ಅಂಗವಾಗಿ ಮೈಸೂರಿನಲ್ಲಿ ಶುಕ್ರವಾರ ಬೃಹತ್ ಜಾಗೃತಿ ಜಾಥಾ ನಡೆಸಲಾಯಿತು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಉಷಾರಾಣಿ ಚಾಲನೆ ನೀಡಿದರು. ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಮೈಸೂರಿನ ಮಹಾರಾಜ ಪದವಿಪೂರ್ವ ಕಾಲೇಜು ಕೃಷ್ಣರಾಜ ಸಭಾ ಮಂಟಪದಲ್ಲಿ ಶುಕ್ರವಾರ ಆಯೋಜಿಸಿದ್ದ 'ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ' ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ನಾಗರಾಜು ಎಸ್. ಅಂಕಸದೊಡ್ಡಿ ಉದ್ಘಾಟಿಸಿದರು.

ಮೈಸೂರು, ಜೂ.12(ಎಂಕೆ)– ಮಕ್ಕಳು ದೇಶದ ಭವಿಷ್ಯ ಅವರ ಕೈಯ್ಯಲ್ಲಿ ಪುಸ್ತಕಗಳು ಇರಬೇಕೇ ಹೊರತು ಸಲ್ಲದ ಉಪಕರಣಗಳಲ್ಲ. ಪ್ರತಿ ಮಗುವಿಗೂ ಶಿಕ್ಷಣ, ಸುರಕ್ಷತೆ ಮತ್ತು ಸಂತೋಷದ ಬಾಲ್ಯ ನೀಡುತ್ತೇವೆ ಎಂಬ ಸಂಕಲ್ಪವನ್ನು ನಾಡಿನ ಪ್ರತಿಯೊಬ್ಬರು ಮಾಡುವಂತೆ ಮೈಸೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ನಾಗರಾಜು ಎಸ್. ಅಂಕಸದೊಡ್ಡಿ ಕರೆ ನೀಡಿದರು.

ಮೈಸೂರಿನ ಮಹಾರಾಜ ಪದವಿಪೂರ್ವ ಕಾಲೇಜು ಕೃಷ್ಣರಾಜ ಸಭಾ ಮಂಟಪದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಪಂ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಮಕ್ಕಳ ಸಹಾಯವಾಣಿ 1098 ಹಾಗೂ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಗುವಿನ ಸಂದೇಶ: 1996ರ ಎಂ.ಸಿ. ಮೆಹ್ತಾ ಮತ್ತು ತಮಿಳುನಾಡು ಕೇಸ್‌ನಲ್ಲಿ ಅಂದಿನ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಡಿ.ಎಂ.ಅನ್ಸಾರಿ ಅವರು ತಮ್ಮ ತೀರ್ಪಿನಲ್ಲಿ 'ನಾನು ಮಗು ನಮ್ಮ ಆಗಮನಕ್ಕಾಗಿ ಇಡೀ ಜಗತ್ತು ಕಾಯುತ್ತಿದೆ. ನಾನು ಏನಾಗುತ್ತೇನೆ ಎಂಬುದನ್ನು ನೋಡಲು ಭೂಮಿಯೇ ಆಸಕ್ತಿಯಿಂದ ನನ್ನನ್ನು ಗಮನಿಸುತ್ತಿದೆ. ಸಭ್ಯತೆಯ ಭವಿಷ್ಯ ನನ್ನ ಮೇಲೆ ಅವಲಂಬಿತವಾಗಿದೆ. ಏಕೆಂದರೆ ನಾನು ಹೇಗಿರುತ್ತೇನೋ ನಾಳೆಯ ಜಗತ್ತು ಆಗೆಯೇ ಇರುತ್ತದೆ ನಾನು ಮಗು... ನನ್ನ ಭವಿಷ್ಯದ ಹಣೆ ಬರಹ ನಿಮ್ಮ ಕೈಯ್ಯಲ್ಲಿದೆ. ನಾನು ಯಶಸ್ವಿಯಾಗುವೆನೋ ಅಥವಾ ವಿಫಲನಾಗುವೆನೋ ಎಂಬುದನ್ನು ಬಹುಮಟ್ಟಿಗೆ ನೀವು ನಿರ್ಧರಿಸುತ್ತೀರಿ. ಸಂತೋಷ ಮತ್ತು ಸಾರ್ಥಕ ಜೀವನವನ್ನು ರೂಪಿಸುವ ವಿಷಯಗಳನ್ನು ದಯವಿಟ್ಟು ನನಗೆ ನೀಡಿ. ನಾನು ಈ ಜಗತ್ತಿಗೆ ಆಶೀರ್ವಾದವಾಗುವಂತೆ ನನ್ನನ್ನು ತರಬೇತಿ ನೀಡಿ ಎಂದು ನಿಮ್ಮಲ್ಲಿ ಬೇಡಿಕೊಳ್ಳುತ್ತೇನೆ' ಎಂಬ ಸಾಲುಗಳನ್ನು ಉಲ್ಲೇಖಿಸಿ ಬಾಲ ಕಾರ್ಮಿಕ ಅನಿಷ್ಟ ಪದ್ಧತಿಯನ್ನು ಹೊಗಲಾಡಿಸಿ, ಮಕ್ಕಳ ಸುಂದರ ಕನಸನ್ನು ಸಾಕಾರಗೊಳಿಸಬೇಕಿದೆ ಎಂದು ತಿಳಿಸಿದರು.

ಮಕ್ಕಳು ಶಾಲೆಗೆ ಹೋಗಿ ಶಿಕ್ಷಣ ಪಡೆದು ಸಮಾಜದ ಮುಖ್ಯ ವಾಹಿನಿಗೆ ಬರಬೇಕು. ಎಲ್ಲರೊಂದಿಗೆ ಒಡನಾಟ ಇರಬೇಕು. ತಮ್ಮ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಬೇಕು. ದುರದೃಷ್ಟವಶಾತ್ ಇಂದಿಗೂ ಅನೇಕ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ದುಡಿಮೆ ಮಾಡುತ್ತಿವೆ. ಎಷ್ಟೋ ಕಡೆಗಳಲ್ಲಿ ಬಾಲ ಕಾರ್ಮಿಕರು ತಮ್ಮ ಅಮೂಲ್ಯವಾದ ಕಾಲವನ್ನು ಕಳೆಯುತ್ತಿದ್ದಾರೆ. ಆದ್ದರಿಂದ ನಾವೆಲ್ಲರೂ ಯಾವುದೇ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಪ್ರೇರೆಪಿಸಬಾರದು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಾಪಸ್ ಶಾಲೆಗೆ ಕರೆತರುವ ಪ್ರಯತ್ನ ಮಾಡಬೇಕು. ಮಕ್ಕಳ ಹಕ್ಕುಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಮಕ್ಕಳಿಗೆ ಸುರಕ್ಷಿತ, ಆರೋಗ್ಯಕರ ಮತ್ತು ಶಿಕ್ಷಣಪೂರ್ವ ವಾತಾವರಣವನ್ನು ನೀಡಬೇಕು. ಪ್ರತಿ ಮಗುವಿಗೂ ಶಿಕ್ಷಣ, ಸುರಕ್ಷತೆ ಮತ್ತು ಸಂತೋಷದ ಬಾಲ್ಯ ನೀಡುತ್ತೇವೆ ಎಂಬ ಸಂಕಲ್ಪ ಮಾಡಬೇಕು ಎಂದರು.

ಶಿಕ್ಷಣವೇ ಅಸ್ತ್ರ: ಸಹಾಯಕ ಕಾರ್ಮಿಕ ಆಯುಕ್ತೆ ಲಲಿತಾಬಾಯಿ ಮಾತನಾಡಿ, ಸಮಾಜದಲ್ಲಿರುವ ಎಲ್ಲಾ ಅನಿಷ್ಟ ಪದ್ಧತಿಗಳು ಮತ್ತು ತಾರತಮ್ಯಗಳು ತೊಲಗಬೇಕಾದರೆ ಇರುವ ಏಕೈಕ ಮತ್ತು ಮುಖ್ಯ ಅಸ್ತ್ರವೇ ಶಿಕ್ಷಣ. ಪ್ರತಿಯೊಬ್ಬರ ಜೀವನದಲ್ಲೂ ಶಿಕ್ಷಣ ಮತ್ತು ಸಮಯದ ನಿರ್ವಹಣೆ ಮುಖ್ಯವಾಗಿದ್ದು, ಅನಾವಶ್ಯಕವಾಗಿ ಸಮಯವನ್ನು ಹಾಳು ಮಾಡಬೇಡಿ. ದೇಶದ ಕಾನೂನುಗಳನ್ನು ತಿಳಿದುಕೊಳ್ಳಿ. ಜೀವನದ ಪ್ರತಿಯೊಂದು ಕ್ಷಣವನ್ನೂ ಸತ್ಕಾರ್ಯಗಳಿಗಾಗಿ ಮತ್ತು ನಿಮ್ಮ ಏಳಿಗೆಗಾಗಿ ಬಳಸಿಕೊಳ್ಳಿ. ಜೀವನದಲ್ಲಿ ಉತ್ತಮ ಸ್ನೇಹಿತರನ್ನು ಹೊಂದಿರಿ ಮತ್ತು ಅವರ ಪ್ರಗತಿಗೂ ನೀವೇ ಕಾರಣರಾಗಿರಿ ಎಂದು ಹೇಳಿದರು.

ಸಿಸಿಬಿ ಎಸಿಪಿ ಮೊಹಮ್ಮದ್ ಶರೀಫ್ ರಾವುತರ್, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರವಿಚಂದ್ರ, ಮಕ್ಕಳ ರಕ್ಷಣಾಧಿಕಾರಿ ಆಶಾ, ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಮಹಾರಾಜ ಕಾಲೇಜಿನ ಪ್ರಾಂಶುಪಾಲ ಉದಯಶಂಕರ್, ಬಾಲ ಕಾರ್ಮಿಕ ಯೋಜನಾ ಸೊಸೈಟಿ ನಿರ್ದೇಶಕ ಹೆಚ್.ಸಿ.ಮಲ್ಲಿಕಾರ್ಜುನ, ಪೀಪಲ್ಸ್ ಪಾರ್ಕ್ ಶಾಲೆಯ ಮುಖ್ಯೋಪಾಧ್ಯಾಯ ಜಾನ್, ಡಾನ್ ಬಾಸ್ಕೋ ಸಂಸ್ಥೆಯ ಜೆವಾ ಜೋಶ್ ಮತ್ತಿತರರು ಉಪಸ್ಥಿತರಿದ್ದರು.

ಮಕ್ಕಳ ಬೆಳವಣಿಗೆ ಮೇಲೆ ಪರಿಣಾಮ...

"ಬಡತನ, ಅಜ್ಞಾನ, ಸಾಮಾಜಿಕ ಅಸಮಾನತೆ ಹಾಗೂ ಶಿಕ್ಷಣದ ಕೊರತೆ ಬಾಲ ಕಾರ್ಮಿಕತೆಗೆ ಪ್ರಮುಖ ಕಾರಣಗಳಾಗಿವೆ. ಬಾಲ ಕಾರ್ಮಿಕತೆ ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುವುದಷ್ಟೇ ಅಲ್ಲ ಅವರ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯ ಮೇಲೂ ಪರಿಣಾಮ ಬೀರುತ್ತದೆ. ಭಾರತದ ಸಂವಿಧಾನವೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಿದೆ. 14 ವರ್ಷದೊಳಗಿನ ಮಕ್ಕಳು ಅಪಾಯಕಾರಿ ಹಾಗೂ ವಾಣಿಜ್ಯ ಚಟುವಟಿಕೆಗಳಲ್ಲಿ ದುಡಿಯುವುದನ್ನು ನಿಷೇಧಿಸಿದೆ. ಆದರೂ ಕೇವಲ ಕಾನೂನುಗಳಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಸಮಾಜದ ಪ್ರತಿಯೊಬ್ಬರು ತಮ್ಮ ಜವಾಬ್ದಾರಿ ಅರಿತು ಬಾಲ ಕಾರ್ಮಿಕ ಪಿಡುಗನ್ನು ಹೊಗಲಾಡಿಸಲು ಶ್ರಮ ಪಡಬೇಕು.

- ನಾಗರಾಜು ಎಸ್. ಅಂಕಸದೊಡ್ಡಿ, ಹಿರಿಯ ಸಿವಿಲ್ ನ್ಯಾಯಾಧೀಶರು

ಮಕ್ಕಳ ರಕ್ಷಣೆಗೆ ಪ್ರಮುಖ ಕಾನೂನುಗಳಿವೆ...

ಭಾರತದಲ್ಲಿ ಮಕ್ಕಳ ಸುರಕ್ಷತೆ ಮತ್ತು ಹಕ್ಕುಗಳಿಗಾಗಿ 'ಬಾಲ್ಯ ವಿವಾಹ ನಿಷೇಧ ಕಾಯ್ದೆ', 'ಪೋಷಣೆ ಮತ್ತು ಸಂರಕ್ಷಣೆ ಕಾಯ್ದೆ', 'ಪೋಷಕರು ಮತ್ತು ರಕ್ಷಕರ ಕಾಯ್ದೆ, ಬಾಲನ್ಯಾಯ(ಮಕ್ಕಳ ಕಾಳಜಿ ಮತ್ತು ರಕ್ಷಣೆ) ಕಾಯ್ದೆ' ಹಾಗೂ ಪೋಕ್ಸೋ ಕಾಯ್ದೆ'ಗಳಿದ್ದು, ಈ ಕಾಯ್ದೆಗಳ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ವಕೀಲ ಎನ್.ಸುಂದರ್ ರಾಜ್ ಹೇಳಿದರು.

ಸಂವಿಧಾನದ ವಿಧಿ 24(ಬಾಲಕಾರ್ಮಿಕ ನಿಷೇಧ) ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಯಾವುದೇ ರೀತಿಯ ದುಡಿಮೆಗೆ ಅಥವಾ ಅಪಾಯಕಾರಿ ಕೆಲಸಗಳಿಗೆ ಹಚ್ಚುವುದನ್ನು ಇದು ಸಂಪೂರ್ಣವಾಗಿ ನಿಷೇಧಿಸುತ್ತದೆ. ವಿಧಿ 21(ಎ) (ಶಿಕ್ಷಣದ ಮೂಲಭೂತ ಹಕ್ಕು) 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸರ್ಕಾರ ನೀಡಬೇಕು. ವಿಧಿ 45(ಪೌಷ್ಟಿಕ ಆಹಾರ ಮತ್ತು ಆರೈಕೆ) ಹುಟ್ಟಿನಿಂದ 6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಅಂಗನವಾಡಿಗಳ ಮೂಲಕ ಪೌಷ್ಟಿಕ ಆಹಾರ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಸೌಲಭ್ಯ ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ. ವಿಧಿ 51 (ಎ) ಮತ್ತು (ಕೆ) (ಪೋಷಕರ ಕರ್ತವ್ಯ) ತಮ್ಮ ಮಕ್ಕಳಿಗೆ 14 ವರ್ಷ ತುಂಬುವವರೆಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸುವುದು ಪ್ರತಿಯೊಬ್ಬ ಪೋಷಕರ ಮೂಲಭೂತ ಕರ್ತವ್ಯವಾಗಿದೆ. ಯಾವುದೇ ಕಾರಣಕ್ಕೂ ಶಿಕ್ಷಣವನ್ನು ತಪ್ಪಿಸಬಾರದು ಎಂದು ಮನವರಿಕೆ ಮಾಡಿಕೊಟ್ಟರು.

ಮೈಸೂರಿನಲ್ಲಿ ಬೃಹತ್ ಜಾಗೃತಿ ಜಾಥಾ

ಮೈಸೂರು, ಜೂ.12– 'ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ' ಅಂಗವಾಗಿ ಮೈಸೂರಿನಲ್ಲಿ ಬೃಹತ್ ಜಾಗೃತಿ ಜಾಥಾ ನಡೆಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಪಂ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಮಕ್ಕಳ ಸಹಾಯವಾಣಿ 1098 ಹಾಗೂ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿಗಳು ಭಾಗವಹಿಸಿ ಸಾಮಾಜಿಕ ಅನಿಷ್ಟ ಪದ್ಧತಿಗಳಲ್ಲೊಂದಾದ ಬಾಲ ಕಾರ್ಮಿಕ ಪದ್ಧತಿಯನ್ನು ತೊಲಗಿಸಬೇಕು ಎಂದು ಸಾರ್ವಜನಿರಲ್ಲಿ ಮನವರಿಕೆ ಮಾಡಿಕೊಟ್ಟರು.

ನಗರದ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಜಾಗೃತಿ ಜಾಥಾ ಕೆ.ಆರ್.ವೃತ್ತದ ಮಾರ್ಗವಾಗಿ ಡಿ.ದೇವರಾಜ ಅರಸು ರಸ್ತೆಯ ಮೂಲಕ ಮಹಾರಾಜ ಪದವಿ ಪೂರ್ವ ಕಾಲೇಜಿನವರೆಗೆ ಸಾಗಿತು. ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಮಾರ್ಗದುದ್ದಕ್ಕೂ ವಿದ್ಯಾರ್ಥಿಗಳು 'ನಿಲ್ಲಲಿ ಲೈಂಗಿಕ ದೌರ್ಜನ್ಯ, ಬೆಳಗಲಿ ಮಕ್ಕಳ ಭವಿಷ್ಯ', 'ಮಕ್ಕಳ ಸಮಗ್ರ ಬೆಳವಣಿಗೆಗೆ ಬೇಕು ಆಟ–ಪಾಠ', 'ಬಡತನಕ್ಕೆ ಶಿಕ್ಷಣವೇ ಮದ್ದು', 'ಭಿಕ್ಷೆ ಬೇಡುವುದು ಅಪರಾಧ, ನೀಡುವುದನ್ನು ನಿಲ್ಲಿಸಿ' ಎಂಬಿತ್ಯಾದಿ ಜಾಗೃತಿ ಸಂದೇಶಗಳುಳ್ಳ ನಾಮಫಲಕಗಳನ್ನು ಹಿಡಿದು ಸಾಗಿದರು.

ಚಾಲನೆ: 'ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ'ಯ ಜಾಗೃತಿ ಜಾಥಾಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಉಷಾರಾಣಿ ಚಾಲನೆ ನೀಡಿದರು. ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಡಿಡಿಪಿಐ ಉದಯ್‌ಕುಮಾರ್, ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್ ಮತ್ತಿತರರು ಜಾಥಾದಲ್ಲಿ ಹೆಜ್ಜೆ ಹಾಕಿ ವಿದ್ಯಾರ್ಥಿಗಳಿಗೆ ಸಾಥ್ ನೀಡಿದರು.

ದೇಶದಲ್ಲಿ 74.3 ಲಕ್ಷ ಬಾಲ ಕಾರ್ಮಿಕರು...!

"2025ರಲ್ಲಿ ನಡೆದ ಅಧಿಕೃತ ಸಮೀಕ್ಷೆಯ ಪ್ರಕಾರ ದೇಶದಲ್ಲಿ ಇನ್ನೂ 74.3 ಲಕ್ಷ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡುಬಂದಿದೆ. ಈ ಪೈಕಿ ಉತ್ತರ ಪ್ರದೇಶ ಶೇ.30ರಷ್ಟು ಬಾಲಕಾರ್ಮಿಕರೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಬಿಹಾರ (ಶೇ.12), ಮಹಾರಾಷ್ಟ್ರ (ಶೇ.8) ಮತ್ತು ರಾಜಸ್ಥಾನ (ಶೇ.6) ನಂತರದ ಸ್ಥಾನಗಳಲ್ಲಿವೆ. ಹಾಗೆಯೇ 2025ರಲ್ಲೇ ಸುಮಾರು 44,902 ಬಾಲಕಾರ್ಮಿಕರನ್ನು ವಿವಿಧ ಕಡೆಗಳಿಂದ ರಕ್ಷಿಸಿ, ಮುಖ್ಯವಾಹಿನಿಗೆ ತರಲಾಗಿದೆ.

- ಎನ್.ಸುಂದರ್ ರಾಜ್, ಹಿರಿಯ ವಕೀಲ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ

'ಸಿದ್ದರಾಮಯ್ಯ, ಮಹದೇವಪ್ಪ ನಡುವೆ ಭಿನ್ನಾಭಿಪ್ರಾಯ ತರುವ ಪ್ರಯತ್ನ

ಮೈಸೂರು, ಜೂ.12(ಜಿಎ)–ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಇನ್ನೂ ಸ್ಥಾನ ದೊರಕದಿರುವ ಸಂಗತಿಯನ್ನು ಬಳಸಿಕೊಂಡು ಕೆಲವರು ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಮಹದೇವಪ್ಪ ಅವರ ನಡುವೆ ಭಿನ್ನಾಭಿಪ್ರಾಯವುಂಟು ಮಾಡುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ವಿವಿಧ ಸಮುದಾಯಗಳ ಮುಖಂಡರು ಕಿಡಿಕಾರಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿ, ಸಿದ್ದರಾಮಯ್ಯ, ಡಾ.ಹೆಚ್.ಸಿ. ಮಹದೇವಪ್ಪ ಯತೀಂದ್ರ ಸಿದ್ದರಾಮಯ್ಯ ಅವರು ಒಂದು ಕುಟುಂಬದ ಸದಸ್ಯರಂತಿದ್ದಾರೆ. ಇವರ ಬಗ್ಗೆ ಮಾತನಾಡುವಾಗ ಎಚ್ಚರದಿಂದಿರಬೇಕೆಂದು ಆಗ್ರಹಿಸಿದರು.

ದಲಿತ ಮುಖಂಡ ಭುಗತಗಳ್ಳಿ ಮಣಿಯಯ್ಯ ಮಾತನಾಡಿ, ಕಳೆದ 40 ವರ್ಷಗಳಿಂದಲೂ ಸಿದ್ದರಾಮಯ್ಯ ಹಾಗೂ ಮಹದೇವಪ್ಪ ಅನ್ಯೋನ್ಯವಾಗಿದ್ದಾರೆ. ಸಿದ್ದರಾಮಯ್ಯ ತಾವು ಅಧಿಕಾರದಲ್ಲಿರುವಾಗಲೆಲ್ಲ ಮಹದೇವಪ್ಪರಿಗೆ ಸಚಿವ ಸ್ಥಾನ ದೊರಕುವಂತೆ ನೋಡಿಕೊಂಡಿದ್ದಾರೆ. ಈ ಭಾಗದ ಪ್ರಾತಿನಿಧ್ಯ ಕಾರಣಕ್ಕಾಗಿ ಯತೀಂದ್ರ ಸಿದ್ದರಾಮಯ್ಯ ಅವರಿಗೆ ಸಚಿವ ಸ್ಥಾನ ದೊರೆತಿರಬಹುದು. ಆದರೆ ಮಹದೇವಪ್ಪ ಅವರಿಗೆ ಇನ್ನೂ ಸಚಿವ ಸ್ಥಾನ ದೊರೆತಿಲ್ಲ ಎಂದು ಯತೀಂದ್ರ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾಗಿಲ್ಲ. ಸಿದ್ದರಾಮಯ್ಯ ಅವರ ಅವಧಿಯಲ್ಲಿ ಹೀಗಾಗಿದ್ದರೆ ಬೇರೆ ಮಾತು. ಆದರೆ ಈಗ ಅವರೇ ಸ್ಥಾನ ಬಿಟ್ಟು ಕೊಟ್ಟಿದ್ದಾರೆ. ಮಹದೇವಪ್ಪ ಸಂಪುಟ ಸೇರಲು ಇನ್ನೂ ಅವಕಾಶವಿದೆ ಎಂದರು. ಮಾಜಿ ಮೇಯರ್ ನಾರಾಯಣ, ಸುರೇಶ್ ವಾಜಮಂಗಲ, ಸಿದ್ದಯ್ಯ, ಆರ್.ಶಿವ, ಪಾಳ್ಯ ಸುರೇಶ್ ಉಪಸ್ಥಿತರಿದ್ದರು.

ಇಂದು, ನಾಳೆ 'ಮಹಾಮಾಯಿ' ಜಾನಪದ ನಾಟಕ

ಮೈಸೂರು, ಜೂ.12– ಮೈಸೂರಿನ ಬಿದಿರು ಥಿಯೇಟರ್ ರಂಗ ತಂಡವು ಜೂ.13 ಹಾಗೂ 14ರಂದು ಸಂಜೆ 6.30ಕ್ಕೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ 'ಮಹಾಮಾಯಿ' ಜಾನಪದ ನಾಟಕವನ್ನು ಪ್ರದರ್ಶಿಸಲಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಚಂದ್ರಶೇಖರ ಕಂಬಾರ ಅವರ ರಚನೆಯ ಈ ನಾಟಕವನ್ನು ಮಂಜುನಾಥ್ ಭ್ಯಾಟೆ ನಿರ್ದೇಶಿಸಿದ್ದು, ದೇವಾನಂದ ವರಪ್ರಸಾದ್ ಸಂಗೀತ ಸಹಕಾರ ನೀಡಿದ್ದಾರೆ. ತಾಯಿ–ಮಗನ ನಡುವಿನ ಪ್ರೀತಿ–ವಾತ್ಸಲ್ಯ, ಜೀವನ ಹೋರಾಟ, ಸಂಘರ್ಷವನ್ನು ಜಾನಪದ ರೂಪದಲ್ಲಿ ಕಣ್ಣಿಗೆ ಕಟ್ಟುವುದು ಈ ನಾಟಕದ ವಿಶೇಷ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿವಿಧ ಕ್ಷೇತ್ರದ ಸಾಧಕರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ



ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಮಹೋತ್ಸವ ಆಚರಿಸಲಾಯಿತು.

ಮೈಸೂರು, ಜೂ.12(ಎಂಕೆ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಮಹೋತ್ಸವ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ' ಪ್ರಧಾನ ಕಾರ್ಯಕ್ರಮವನ್ನು ಶುಕ್ರವಾರ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಾಧಕರಾದ ಕಮಲಾಕ್ಷಿ, ಕೆ.ಎಸ್.ಗುರುಸ್ವಾಮಿ, ಎಂ.ಸುಬ್ರಹ್ಮಣ್ಯ, ಕೆ.ಎಸ್.ಶಿವರಾಂ, ವಿ.ಮಂಜುನಾಥ್ ಹಾಗೂ ಬಿ.ಬಿ.ರಾಜಶೇಖರ್ ಅವರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಮೈಸೂರು ವಿಶ್ವಮಟ್ಟದಲ್ಲಿ ಗಮನ ಸೆಳೆದಿದೆ ಎಂದರೆ ಮುಖ್ಯ ಕಾರಣೀಭೂತರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ನಾಲ್ವಡಿಯವರ ಕೊಡುಗೆ ಅನನ್ಯ. ಮೈಸೂರು ಮಾತ್ರವಲ್ಲದೆ ದೇಶ–ವಿದೇಶದಲ್ಲಿಯೂ ನಾಲ್ವಡಿಯವರ ಸ್ಮರಣಾ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ ಎಂದು ಸ್ಮರಿಸಿದರು.

ಮುಖಂಡ ಅಂಬಳೆ ಶಿವಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಮಾಜಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಹಿರಿಯ ಪತ್ರಕರ್ತ ಎಸ್.ಟಿ. ರವಿಕುಮಾರ್, ಜಿಲ್ಲಾ ಕಸಾಪ ಮಹಿಳಾ ಘಟಕದ ಅಧ್ಯಕ್ಷೆ ರತ್ನ ಹಾಲಪ್ಪಗೌಡ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಮತ್ತಿತರರಿದ್ದರು.

ಕಲಾಮಂದಿರದಲ್ಲಿ ಜಾದೂ ಪ್ರದರ್ಶನ

ಮೈಸೂರು, ಜೂ. 12– ಮೈಸೂರಿನ ಕಲಾಮಂದಿರದಲ್ಲಿ ಡೈಮಂಡ್ ಸ್ಟಾರ್ ಮ್ಯಾಜಿಷಿಯನ್ ಹೇಮ್ರಾಜ್ ಅವರಿಂದ ಜಾದೂ ಪ್ರದರ್ಶನವಿದೆ. ಪ್ರತಿದಿನ ಸಂಜೆ 5 ಗಂಟೆಗೆ ಮತ್ತು ರಾತ್ರಿ 7.15ಕ್ಕೆ ಪ್ರದರ್ಶನವಿದೆ. ಭಾನುವಾರ ಮಧ್ಯಾಹ್ನ 3 ಗಂಟೆ, 5.15 ಗಂಟೆ ಮತ್ತು 7.30 ಗಂಟೆಗೆ ಮೂರು ಪ್ರದರ್ಶನಗಳಿವೆ. ಈ ಪತ್ರಿಕೆಯ ಕಟ್ಟಿಂಗ್ ತಂದವರಿಗೆ 2 ಟಿಕೆಟ್ ತೆಗೆದುಕೊಂಡರೆ 1 ಟಿಕೆಟ್ ಉಚಿತವಾಗಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9241981972 ಸಂಪರ್ಕಿಸಬಹುದು.

ಇಂದು ಕಾವೇರಿ ಸಮೂಹ ಸಂಸ್ಥೆಗಳ ವತಿಯಿಂದ ವಿವಿಧ ಪದವಿ ಪ್ರದಾನ

ಮೈಸೂರು, ಜೂ.12– ಮೈಸೂರಿನ ಡಾ.ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಸಮೂಹ ವಿದ್ಯಾಸಂಸ್ಥೆ ಹಾಗೂ ಸುರಕ್ಷಾ ಎಜುಕೇಷನ್ ಟ್ರಸ್ಟ್‌ನ ಆಲ್ಫೋನ್ಸಾ ಕಾಲೇಜುಗಳ ಸಹಯೋಗದಲ್ಲಿ ವಿವಿಧ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕರಾಮುವಿ)ದ ಘಟಿಕೋತ್ಸವ ಭವನದಲ್ಲಿ ಶನಿವಾರ(ಜೂ.13) ಮಧ್ಯಾಹ್ನ 12.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ, ಜಯದೇವ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕರಾಮುವಿ ವಿಶ್ರಾಂತ ಕುಲಪತಿ ಪ್ರೊ.ಕೆ. ಎಸ್.ರಂಗಪ್ಪ ಭಾಗವಹಿಸಲಿದ್ದಾರೆ. ಡಾ.ಚಂದ್ರಶೇಖರ್ ಫೌಂಡೇಷನ್ ಹಾಗೂ ಕಾವೇರಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸುರಕ್ಷಾ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ..ಸರಳಾ ಚಂದ್ರಶೇಖರ್ ಮತ್ತಿತರ ಗಣ್ಯರು ಉಪಸ್ಥಿತರಿರಲಿದ್ದಾರೆ. ಸಮಾರಂಭದಲ್ಲಿ ಒಟ್ಟು 468 ವಿದ್ಯಾರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುವುದು ಎಂದು ಕಾವೇರಿ ಸಮೂಹ ಸಂಸ್ಥೆಗಳ ಡೀನ್ ಪ್ರೊ.ಎಸ್.ಶ್ರೀಕಂಠಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ




ರಾಜ್ಯಸಭೆ ಸದಸ್ಯರಾಗಿ ಎರಡನೇ ಬಾರಿಗೆ ಪುನರಾಯ್ಕೆಯಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರಿನಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರು ಅಭಿನಂದಿಸಿದರು. ಈ ವೇಳೆ ಕೊಳ್ಳೇಗಾಲದ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಬಹು ಅಂತಸ್ತಿನ ವಸತಿ ಕಟ್ಟಡದಲ್ಲಿ ಅಗ್ನಿ ಅವಘಡ: ಮೂವರು ಸಾವು

ನವದೆಹಲಿ: ಐದು ಅಂತಸ್ತಿನ ವಸತಿ ಕಟ್ಟಡದಲ್ಲಿ ಅಗ್ನಿ ಅವಘಡ ಸಂಭವಿಸಿದ ಪರಿಣಾಮ ಮೂವರು ಸಾವನ್ನಪ್ಪಿ, ಹಲವರು ಗಾಯಗೊಂಡಿರುವ ಘಟನೆ ದೆಹಲಿಯ ತುಘಲಕಾಬಾದ್ ಪ್ರದೇಶದ ಶುಕ್ರವಾರ ಮುಂಜಾನೆ ನಡೆದಿದೆ.




ಅಗ್ನಿ ಅವಘಡದ ಬಗ್ಗೆ ಮಾಹಿತಿ ತಿಳಿದ ಕೂಡಲೇ ಮೂರು ಅಗ್ನಿಶಾಮಕ ವಾಹನಗಳು, ಎರಡು ನೀರಿನ ಬೌಸರ್‌ಗಳು, ಒಂದು ಉಸಿರಾಟದ ಬೆಂಬಲ ಘಟಕ ಮತ್ತು ಒಂದು ತ್ವರಿತ ಪ್ರತಿಕ್ರಿಯೆ ವಾಹನ (ಕ್ಯೂಆರ್‌ವಿ)ದೊಂದಿಗೆ ಧಾವಿಸಿದ ಸಿಬ್ಬಂದಿ, ಕಾರ್ಯಾಚರಣೆ ಆರಂಭಿಸಿದರು. ಕಿರಿದಾದ ಲೇನ್‌ನಲ್ಲಿರುವ ಕಟ್ಟಡದಿಂದ ಜನರನ್ನು ರಕ್ಷಿಸಿ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿದರು. ಏಮ್ಸ್ ಟ್ರಾಮಾ ಸೆಂಟರ್‌ನ ಬರ್ನ್ಸ್ ಮತ್ತು ಪ್ಲಾಸ್ಟಿಕ್ ಸರ್ಜರಿ ವಾರ್ಡ್‌ನಲ್ಲಿ ಒಬ್ಬರು, ಸಫ್ದರ್ಜಂಗ್ ಆಸ್ಪತ್ರೆಯ ಬರ್ನ್ಸ್ ವಾರ್ಡ್‌ನಲ್ಲಿ ಇಬ್ಬರು ಮಹಿಳೆಯರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಇನ್ನೂ ಮೂವರು ಮಹಿಳೆಯರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಟ್ಟಡದೊಳಗೆ ನಿಲ್ಲಿಸಿದ್ದ ವಾಹನಗಳಿಂದ ಬೆಂಕಿ ಸಂಭವಿಸಿ, ಕ್ಷಣಾರ್ಧದಲ್ಲಿ ದಟ್ಟಹೊಗೆ ಇಡೀ ಕಟ್ಟಡವನ್ನು ಆವರಿಸಿ, ಈ ಅವಘಡ ಸಂಭವಿಸಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ನೆಲ ಮಹಡಿ, ಮೊದಲ ಮಹಡಿ ಮತ್ತು ಎರಡನೇ ಮಹಡಿ ಬೆಂಕಿಯಿಂದ ತೀವ್ರವಾಗಿ ಹಾನಿಗೊಳಗಾಗಿವೆ.

ಕೇರಳದ ಮಾಡೆಲ್ ಬಂಧನ; 11 ಕೋಟಿ ಹೈಡ್ರೋಪೋನಿಕ್ಸ್ ಗಾಂಜಾ ವಶ

ಮುಂಬೈ: ಬ್ಯಾಂಕಾಕ್‌ನಿಂದ ಭಾರತಕ್ಕೆ ಕೋಟ್ಯಾಂತರ ಮೌಲ್ಯದ ಮಾದಕ ವಸ್ತು ಸಾಗಿಸುತ್ತಿದ್ದ ಆರೋಪದ ಮೇಲೆ ಮಿಸೆಸ್ ಕೇರಳ ಸೌಂದರ್ಯ ಸ್ಪರ್ಧೆಯ ಮಾಜಿ ಸ್ಪರ್ಧಿಯೊಬ್ಬರನ್ನು ಕಸ್ಟಮ್ಸ್ ಅಧಿಕಾರಿಗಳು ಮುಂಬೈನಲ್ಲಿ ಬಂಧಿಸಿದ್ದಾರೆ.



ಕಳೆದ ವರ್ಷ ಮಿಸೆಸ್ ಕೇರಳ ಸೌಂದರ್ಯ ಸ್ಪರ್ಧೆಯಲ್ಲಿ ಸ್ಪರ್ಧಿಯಾಗಿದ್ದ ಮಾಡೆಲ್ ಹರ್ಷ ಸನ್ನಿ(28)ಯನ್ನು ಮುಂಬೈನ ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು 11.82 ಕೋಟಿ ಮೌಲ್ಯದ ಹೈಡ್ರೋಪೋನಿಕ್ಸ್ ಗಾಂಜಾ ಸಮೇತ ಬಂಧಿಸಲಾಗಿದೆ.

ಏರ್ ಇಂಟೆಲಿಜೆನ್ಸ್ ಯೂನಿಟ್ ಪ್ರಕಾರ, ಮಾಡೆಲ್ ಹರ್ಷ ಸನ್ನಿ, ಜೂನ್ 11ರ ರಾತ್ರಿ ಬ್ಯಾಂಕಾಕ್‌ನಿಂದ ಏರ್ ಇಂಡಿಯಾ ವಿಮಾನದ ಮೂಲಕ ಮುಂಬೈನ ಶಿವಾಜಿ ಏರ್‌ಪೋರ್ಟ್‌ಗೆ ಬಂದಿಳಿದಿದ್ದರು. ಅನುಮಾನದ ಮೇಲೆ ಆಕೆಯನ್ನ ತಡೆಹಿಡಿದು ವಿಚಾರಣೆಗೆ ಒಳಪಡಿಸಲಾಯಿತು. ಆಕೆಯ ಲಗೇಜ್ ಬ್ಯಾಗ್‌ಗಳನ್ನ ಶೋಧಿಸುವ ವೇಳೆ ಸುಮಾರು 12 ಪ್ಯಾಕೆಟ್ ಕವರ್‌ಗಳನ್ನ ವಶಪಡಿಸಿಕೊಳ್ಳಲಾಯಿತು. ಆ ಪ್ಯಾಕೆಟ್‌ಗಳನ್ನ ತೆರೆದಾಗ ಅದರಲ್ಲಿ ಪತ್ತೆಯಾದ ಹಸಿರು ಬಣ್ಣದ ವಸ್ತುಗಳನ್ನು ಪರಿಶೀಲಿಸಿದ ನಂತರ ಅದು ಹೈಡ್ರೋಪೋನಿಕ್ಸ್ ಗಾಂಜಾ ಎಂಬುದು ಸ್ಪಷ್ಟವಾಯಿತು. ಬಳಿಕ ಎನ್‌ಡಿಪಿಎಸ್ ಆಕ್ಟ್ ಅಡಿಯಲ್ಲಿ ಆರೋಪಿಯನ್ನು ಬಂಧಿಸಿ, ಕೋರ್ಟ್‌ಗೆ ಹಾಜರುಪಡಿಸಿದ ಬಳಿಕ ಅವರನ್ನ ಎಸ್ಪ್ಲನೇಡ್(ಕಿಲ್ಲಾ) ನ್ಯಾಯಾಲಯವು ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಲಕ್ನೋದಿಂದ ದೆಹಲಿಗೆ ಹೊರಟಿದ್ದ ವಿಮಾನಕ್ಕೆ ಬಾಂಬ್ ಬೆದರಿಕೆ ಸಂದೇಶ!

ಲಕ್ನೋ: ಲಕ್ನೋದ ಚೌಧರಿ ಚರಣ್ ಸಿಂಗ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಗೆ ಪ್ರಯಾಣ ಬೆಳೆಸಬೇಕಿದ್ದ ಇಂಡಿಗೋ ಏರ್‌ಲೈನ್ಸ್ ಸಂಸ್ಥೆಯ ವಿಮಾನವು, ಬಾಂಬ್ ಬೆದರಿಕೆ ಸಂದೇಶ ಹಿನ್ನೆಲೆಯಲ್ಲಿ ಹಾರಾಟ ಸ್ಥಗಿತಗೊಳಿಸಿದ ಘಟನೆ ಇಂದು ನಡೆದಿದೆ.

ಇಂಡಿಗೋ ವಿಮಾನವು ರನ್‌ವೇ ಕಡೆಗೆ ಚಲಿಸಲು ಸಜ್ಜಾಗುತ್ತಿದ್ದಾಗ, ವಿಮಾನ ನಿಲ್ದಾಣದ ಏರ್‌ಲೈನ್ಸ್ ಕಂಟ್ರೋಲ್ ರೂಮ್‌ಗೆ ಈ ವಿಮಾನದಲ್ಲಿ ಬಾಂಬ್ ಇಡಲಾಗಿದೆ ಎಂಬ ಅನಾಮಧೇಯ ಬೆದರಿಕೆ ಸಂದೇಶ ಬಂದಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ ಪೈಲಟ್ ಮತ್ತು ಎಟಿಎಸ್ ಅಧಿಕಾರಿಗಳು ಹಾರಾಟವನ್ನು ತುರ್ತಾಗಿ ಸ್ಥಗಿತಗೊಳಿಸಿ, ವಿಮಾನ ನಿಲ್ದಾಣದಲ್ಲಿ ಹೈ ಅಲರ್ಟ್ ಘೋಷಿಸಿದರು. ವಿಮಾನವನ್ನು ತಕ್ಷಣವೇ ರನ್‌ವೇಯಿಂದ ದೂರವಿರುವ ಸುರಕ್ಷಿತ ಐಸೊಲೇಶನ್ ಬೇಗೆ ಕೊಂಡೊಯ್ದು, ಎಲ್ಲಾ ಪ್ರಯಾಣಿಕರು ಹಾಗೂ ಸಿಬ್ಬಂದಿಯನ್ನು ತುರ್ತು ನಿರ್ಗಮನ ದ್ವಾರಗಳ ಮೂಲಕ ಸುರಕ್ಷಿತವಾಗಿ ಕೆಳಗೆ ಇಳಿಸಲಾಯಿತು.

ಕೇಂದ್ರ ಕೈಗಾರಿಕಾ ಭದ್ರತಾ ಪಡೆ, ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಮತ್ತು ಬಾಂಬ್ ಪತ್ತೆ ಹಾಗೂ ನಿಷ್ಕ್ರಿಯ ದಳವು ಶ್ವಾನದಳದೊಂದಿಗೆ ವಿಮಾನದ ಒಳಭಾಗ, ಇಂಜಿನ್ ಹಾಗೂ ಪ್ರಯಾಣಿಕರ ಎಲ್ಲಾ ಲಗೇಜ್‌ಗಳನ್ನು ಸಂಪೂರ್ಣವಾಗಿ ಪರಿಶೀಲಿಸಿದರು. ಆದರೆ, ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿಲ್ಲ.

ಅಮೆರಿಕದಲ್ಲಿ ದೈತ್ಯ ಹಲ್ಲಿ 'ತೇಗು' ಆಕ್ರಮಣ; ಜೀವಸಂಕುಲಕ್ಕೆ ಭೀಕರ ಹಾನಿ

ಅಮೆರಿಕ: ನಾಲ್ಕು ಅಡಿ ಉದ್ದ, ಬರೋಬ್ಬರಿ 5 ಕೆಜಿ ತೂಕದ ನೋಡಲು ದೈತ್ಯ ಹಲ್ಲಿಯಂತೆ ಕಾಣುವ ಕ್ರೂರ ಜೀವಿ 'ಅರ್ಜೆಂಟೈನ್ ಬ್ಲ್ಯಾಕ್ ಅಂಡ್ ವೈಟ್ ತೇಗು' ಅಮೆರಿಕದ ವನ್ಯಜೀವಿ ಸಂರಕ್ಷಣಾ ಇಲಾಖೆಯ ನಿದ್ದೆಗೆಡಿಸಿದೆ.




ಈ ಹೆಮ್ಮಾರಿ ಜೀವಿಗಳ ಆಕ್ರಮಣದ ಬಗ್ಗೆ ಅಧಿಕಾರಿಗಳು ಜನರಿಗೆ ತೀವ್ರ ಎಚ್ಚರಿಕೆ ನೀಡಿದ್ದು, ಪ್ರಕೃತಿ ಮತ್ತು ಜೀವಸಂಕುಲಕ್ಕೆ ಭೀಕರ ಹಾನಿ ಉಂಟು ಮಾಡುವ ಈ ಅಪಾಯಕಾರಿ ದೈತ್ಯ ಹಲ್ಲಿ ಕಾಣಿಸಿದರೆ ತಕ್ಷಣವೇ ಮಾಹಿತಿ ನೀಡುವಂತೆ ಸೂಚನೆ ನೀಡಿದ್ದಾರೆ.

ಈ 'ತೇಗು' ಇತರ ಅಪರೂಪದ ಪ್ರಾಣಿ–ಪಕ್ಷಿ ಸಂಕುಲವನ್ನು ಸಂಪೂರ್ಣವಾಗಿ ನಾಶಪಡಿಸುವ ಹಾಗೂ ಇಡೀ ಪರಿಸರ ವ್ಯವಸ್ಥೆಯ ಸಮತೋಲನವನ್ನೇ ಏರುಪೇರು ಮಾಡುವ ಭೀಕರ ಸಾಮರ್ಥ್ಯ ಹೊಂದಿದೆ ಎನ್ನಲಾಗಿದೆ. ಈ ಭಯಾನಕ ಜೀವಿಗಳನ್ನು ಸಾಕುವ ಹುಚ್ಚುತವಿರುವ ಕೆಲವರು ಇವುಗಳನ್ನು ಬೇರೆ ದೇಶಗಳಿಂದ ಅಮೆರಿಕದ ಫ್ಲೋರಿಡಾ ಮತ್ತು ಜಾರ್ಜಿಯಾದಂತಹ ನಗರಗಳಿಗೆ ತಂದು ಬಿಟ್ಟಿದ್ದೇ ಇಂದಿನ ಈ ಭೀಕರ ಆಕ್ರಮಣಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ. ಈ ಪ್ರಾಣಿ ಮನುಷ್ಯರ ಮೇಲೆ ನೇರ ದಾಳಿ ಮಾಡದಿದ್ದರೂ, ಕೃಷಿ ಫಾರ್ಮ್‌ಗಳಲ್ಲಿ ನುಗ್ಗಿ ತೀವ್ರ ಹಾನಿ ಉಂಟುಮಾಡುತ್ತಿವೆ.

ಪಾಕಿಸ್ತಾನದಲ್ಲಿ ಕೇವಲ ಆರು ವರ್ಷಗಳಲ್ಲಿ ಬಡತನ ಪ್ರಮಾಣ ತೀವ್ರ ಹೆಚ್ಚಳ

ಪಾಕಿಸ್ತಾನ: ನಿರಂತರ ಆರ್ಥಿಕ ಆಘಾತಕ್ಕೆ ಗುರಿಯಾಗಿರುವ ಪಾಕಿಸ್ತಾನ ಸರ್ಕಾರ ಇತ್ತೀಚೆಗೆ ಬಿಡುಗಡೆ ಮಾಡಿರುವ ಆರ್ಥಿಕ ಸಮೀಕ್ಷೆ 2025–26ರ ವರದಿಯ ಪ್ರಕಾರ, ಕಳೆದ ಆರು ವರ್ಷಗಳಲ್ಲಿ ದೇಶದ ಬಡತನದ ಪ್ರಮಾಣವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಸುಮಾರು 2.70 ಕೋಟಿಗೂ ಹೆಚ್ಚು ಜನ ಹೊಸದಾಗಿ ಬಡತನ ರೇಖೆಗಿಂತ ಕೆಳಗೆ ತಳ್ಳಲ್ಪಟ್ಟಿದ್ದಾರೆ.



ಇದರೊಂದಿಗೆ ದೇಶದ ಒಟ್ಟು ಬಡವರ ಸಂಖ್ಯೆ ಈಗ ಅಂದಾಜು 7 ಕೋಟಿಗೆ ತಲುಪಿದೆ. 2018–19ರಲ್ಲಿ ಪಾಕಿಸ್ತಾನದಲ್ಲಿ ಬಡತನದ ಪ್ರಮಾಣ ಶೇ.21.9 ರಷ್ಟಿತ್ತು. 2025–26ರ ವೇಳೆಗೆ ಇದು ಶೇ.28.9ಕ್ಕೆ ಏರಿಕೆಯಾಗಿದೆ. ಅಂದರೆ ಕೇವಲ 6 ವರ್ಷಗಳಲ್ಲಿ ಬಡತನದ ಪ್ರಮಾಣದಲ್ಲಿ ಶೇ.7 ರಷ್ಟು ಜಿಗಿತ ಕಂಡುಬಂದಿದೆ. ಹಳ್ಳಿಗಳಲ್ಲಿ ಬಡತನದ ಪ್ರಮಾಣವು ಶೇಕಡಾ 28.2 ರಿಂದ 36.2ಕ್ಕೆ ಹಾಗೂ ನಗರ ಪ್ರದೇಶಗಳಲ್ಲಿ ಶೇ.11 ರಿಂದ 17.4ಕ್ಕೆ ಏರಿಕೆಯಾಗಿದೆ. ಪಾಕಿಸ್ತಾನದ ಪ್ರಾಂತ್ಯಗಳಲ್ಲೇ ಬಲೂಚಿಸ್ತಾನ್‌ನಲ್ಲಿ ಬಡತನದ ಪ್ರಮಾಣವು ಶೇ.41.8 ರಿಂದ ಶೇ.47ಕ್ಕೆ ಏರಿಕೆಯಾಗಿದೆ. ಸಿಂಧ್, ಖೈಬರ್ ಪಖ್ತುಂಖ್ವಾ ಹಾಗೂ ಪಂಜಾಬ್ ಪ್ರಾಂತ್ಯದಲ್ಲೂ ಬಡತನ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದೆ ಎಂದು ವರದಿಯಾಗಿದೆ.

ಬಾರದ ಮುಂಗಾರು ಮಳೆ: ಹಾರಂಗಿ ಜಲಾಶಯಕ್ಕೆ ನೀರಿನ ಕೊರತೆ

ಕುಶಾಲನಗರ, ಜೂ.12 (ಆರ್‌ಹೆಚ್)– ಜಿಲ್ಲೆಗೆ ಮುಂಗಾರು ಕಾಲಿಟ್ಟಿದ್ದರೂ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬೀಳದೆ ಇರುವುದರಿಂದ ಕಾವೇರಿ ಕಣಿವೆಯ ಪ್ರಮುಖ ಜಲಾಶಯಗಳಲ್ಲಿ ಒಂದಾಗಿರುವ ಹಾರಂಗಿ ಜಲಾಶಯ ನೀರಿನ ಕೊರತೆ ಎದುರಿಸುತ್ತಿದೆ.

ಪ್ರಸಕ್ತ ವರ್ಷ ಜೂನ್ ಎರಡನೇ ವಾರ ಮುಗಿದರೂ ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡು ಬಂದಿಲ್ಲ. ವಾಡಿಕೆಯಂತೆ ಜೂನ್‌ನಲ್ಲಿ ಸುರಿಯ ಬೇಕಿದ್ದ ಮಳೆ ಪ್ರಮಾಣ ಕಡಿಮೆಯಾಗಿದ್ದು, ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಕಡಿಮೆ ಆಗಿದೆ. ಕಳೆದ ವರ್ಷ ಮೇ 15 ರಿಂದಲೇ ಮಳೆ ಆರಂಭಗೊಂಡು ಜೂನ್‌ನಲ್ಲಿ ಜಲಾಶಯ ಬಹುತೇಕ ಭರ್ತಿಯಾಗಿ ನದಿಗೆ ನೀರನ್ನು ಹರಿಸಲಾಗಿತ್ತು.

ಮಳೆಯಾಶ್ರಿತ ಪ್ರದೇಶವಾದ ಕುಶಾಲನಗರ, ಸೋಮವಾರಪೇಟೆ, ಶನಿವಾರಸಂತೆ ವ್ಯಾಪ್ತಿಯಲ್ಲಿ ರೈತರು ಭೂಮಿಯನ್ನು ಹದ ಮಾಡಿಕೊಂಡು ಬಿತ್ತನೆ ಕಾರ್ಯಕ್ಕಾಗಿ ಆಕಾಶದತ್ತ ಮುಖ ಮಾಡಿದ್ದಾರೆ. ಮುಂದಿನ ವಾರದೊಳಗೆ ವಾಡಿಕೆಯಂತೆ ಮಳೆ ಬಾರದಿದ್ದರೆ ಕೃಷಿ ಚಟುವಟಿಕೆಗೆ ಹಿನ್ನಡೆ ಉಂಟಾಗುವ ಸಾಧ್ಯತೆ ಇದೆ ಎಂದು ಅಪ್ಪಶೆಟ್ಟಳ್ಳಿ ರೈತ ಸುನೀಲ್ ಪೊನ್ನಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.



ಜಲಾಶಯದ ಗರಿಷ್ಠಮಟ್ಟ 2,859 ಅಡಿ ಇದ್ದು, ಜಲಾಶಯದ ನೀರಿನಮಟ್ಟ ಶುಕ್ರವಾರ ಬೆಳಿಗ್ಗೆ 6 ಗಂಟೆ ವೇಳೆಗೆ 2824.13 ಅಡಿ ಇದೆ. ಜಲಾಶಯಕ್ಕೆ 489 ಕ್ಯುಸೆಕ್ ಒಳಹರಿವು ಇದ್ದು, ನದಿಗೆ 200 ಕ್ಯುಸೆಕ್ಸ್ ನೀರು ಹರಿಸಲಾಗುತ್ತಿದೆ. 8.5 ಟಿಎಂಸಿ ಸಾಮರ್ಥ್ಯದ ಹಾರಂಗಿ ಜಲಾಶಯದಲ್ಲಿ ಇದೀಗ 3.038 ಟಿಎಂಸಿಗಳಷ್ಟು ಮಾತ್ರ ನೀರು ಶೇಖರಣೆಯಾಗಿದೆ.

ಹಾರಂಗಿ ಅಚ್ಚುಕಟ್ಟು ಪ್ರದೇಶದಲ್ಲಿ ಹಾಗೂ ಮಳೆಯಾಶ್ರಿತ ಪ್ರದೇಶಗಳಲ್ಲಿ ರೈತರು ಕೈಗೊಂಡಿರುವ ಕೃಷಿ ಚಟುವಟಿಕೆಗೆ ಅಗತ್ಯ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವಿಲ್ಲದೆ ಹಾರಂಗಿ ಜಲಾಶಯವನ್ನು ಸಂಪೂರ್ಣವಾಗಿ ಆಶ್ರಯಿಸಿರುವ ರೈತಾಪಿ ವರ್ಗ ವರುಣ ದೇವನ ಕೃಪೆಯಿಂದ ಯಾವಾಗ ಭರ್ತಿಯಾಗುವುದೊ ಜಲಾಶಯ ಎಂದು ಜಾತಕ ಪಕ್ಷಿಗಳಂತೆ ಕಾದು ಕುಳಿತಿದ್ದಾರೆ. ಮುಂದಿನ ಎರಡು ವಾರಗಳಲ್ಲಿ ವಾಡಿಕೆಯಂತೆ ಮುಂಗಾರು ಮಳೆ ಬೀಳದೆ ಹೋದರೆ ಕೃಷಿ ಚಟುವಟಿಕೆಗೆ ತೀವ್ರ ಹಿನ್ನಡೆ ಉಂಟಾಗುವ ಸಾಧ್ಯತೆ ಇದೆ ಎಂದು ರೈತರು ಆತಂಕಗೊಂಡಿದ್ದಾರೆ.

ಹಾರಂಗಿ ಜಲಾಶಯದಿಂದ ಕೊಡಗು ಜಿಲ್ಲೆ ಸೇರಿದಂತೆ ನೆರೆಯ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು ಮತ್ತು ಕೆ.ಆರ್. ನಗರ ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕು ಸೇರಿದಂತೆ 1,34,895 ಎಕರೆ ಪ್ರದೇಶಕ್ಕೆ ನೀರು ಪೂರೈಸಲಾಗುತ್ತಿದೆ. ಹಾರಂಗಿ ಜಲಾಶಯದಿಂದ ಹರಿಯುವ ನೀರು ಕೂಡಿಗೆ ಬಳಿ ಹಾರಂಗಿ ನದಿ ಮೂಲಕ ಕಾವೇರಿ ನದಿ ಸೇರಿ ನಂತರ ಕೃಷ್ಣರಾಜ ಸಾಗರವನ್ನು ಸೇರಲಿದೆ.

ಕೊಡಗಿನಲ್ಲಿ ಇನ್ನೂ ಚುರುಕು ಪಡೆಯದ ಮಾನ್ಸೂನ್

ಮಡಿಕೇರಿ, ಜೂ.12 (ಪ್ರಸಾದ್ ಸಂಪಿಗೆಕಟ್ಟೆ)–ಜಿಲ್ಲೆಗೆ ಮಾನ್ಸೂನ್ ಮಾರುತ ಪ್ರವೇಶಿಸಿದ್ದು, ಜಿಲ್ಲೆಯ ವಿವಿಧ ಭಾಗಗಳಲ್ಲಿ ತುಂತುರು ಸಹಿತ ಸಾಧಾರಣ ಮಳೆಯಾಗುತ್ತಿದೆ. ಜಿಲ್ಲೆಯ ವಿವಿಧ ಪ್ರದೇಶ ಗಳಲ್ಲಿ ದಟ್ಟ ಮೋಡ, ಅಲ್ಲಲ್ಲಿ ಮಳೆ ಮತ್ತು ಸಂಜೆ ವೇಳೆ ಮಂಜುಮುಸುಕಿದ ವಾತಾವರಣ ಕಂಡು ಬರುತ್ತಿದೆ. 'ಎಲ್ ನೀನೋ' ಪರಿಣಾಮ ಮುಂಗಾರು ಪ್ರಾರಂಭದಲ್ಲೇ ದುರ್ಬಲವಾದಂತಿದ್ದು, ಇನ್ನಷ್ಟೇ ಮಳೆ ಚುರುಕು ಪಡೆಯಬೇಕಿದೆ.



ಹಿಂದೆ ಇದ್ದ ಸುಡು ಬಿಸಿಲಿನ ಹವಾಮಾನ ಬದಲಾಗಿದ್ದು, ಇದೀಗ ತಂಪಿನ ವಾತಾವರಣ ಕಂಡು ಬರುತ್ತಿದೆ. ಜೂನ್ ಆರಂಭದಲ್ಲೇ ಮಳೆ ಪ್ರಾರಂಭವಾದ ಹಿನ್ನೆಲೆಯಲ್ಲಿ ಹಲವು ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಸೃಷ್ಟಿಯಾಗಿಲ್ಲ. ಇನ್ನು ನದಿ, ತೊರೆಗಳಲ್ಲಿಯೂ ಅಲ್ಪ ಪ್ರಮಾಣದ ನೀರಿನ ಏರಿಕೆ ಕಂಡು ಬಂದಿದ್ದು, ಜಲಚರಗಳಿಗೂ ನೆಮ್ಮದಿ ಮೂಡಿಸಿದೆ. ಒಣಗಿ ನಿಂತಿದ್ದ ಮರಗಿಡಗಳಲ್ಲಿ ಹಸಿರು ಚಿಗುರೊಡೆಯುತ್ತಿದೆ.

ಮಳೆ ಮತ್ತಷ್ಟು ಚುರುಕು ಪಡೆದಲ್ಲಿ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಕೃಷಿ ಚಟುವಟಿಕೆ ಆರಂಭ ಕಾಣಲಿದೆ. ಈಗಾಗಲೇ ಸುರಿದ ಮಳೆಯಿಂದ ಭತ್ತ ಬೆಳೆಯುವ ರೈತರು ಗದ್ದೆಗಳಲ್ಲಿ ತೇವಾಂಶ ಕಾಪಾಡಲು ಒಂದು ಬಾರಿ ಉಳುಮೆ ಮಾಡಿರುವುದು ಕಂಡು ಬಂದಿದೆ. ಕಾಫಿ ತೋಟಗಳಲ್ಲಿ ಕೂಡ ಮಳೆಯಿಂದ ತೇವಾಂಶ ಇರುವ ಕಾರಣ ಬೆಳೆಗಾರರು ರಸಗೊಬ್ಬರ ಹಾಕುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಜಿಲ್ಲೆಯ ಕೆಲವು ಕಡೆಗಳಲ್ಲಿ ಕೃಷಿ ಬೆಳೆಗಳಿಗೆ ಪೋಷ ಕಾಂಶ ನೀಡುವ ಕಾರ್ಯ ಈಗಾಗಲೇ ಮುಕ್ತಾಯವಾಗಿದೆ. ಆದರೆ ರಸ ಗೊಬ್ಬರಗಳ ಮೇಲಿನ ದರ ಏರಿಕೆ ರೈತರು ಮತ್ತು ಬೆಳೆಗಾರರಿಗೆ ದೊಡ್ಡ ಹೊಡೆತ ನೀಡಿದೆ. ಕೃಷಿ ಚಟುವಟಿಕೆ, ತೋಟಗಳ ನಿರ್ವಹಣೆ ವೆಚ್ಚ, ಕಾರ್ಮಿಕರ ಕೂಲಿ ದರ ಕೂಡ ಏರಿಕೆ ಕಂಡಿದ್ದು, ಬೆಳೆಗಾರರು ಮತ್ತು ರೈತಾಪಿ ವರ್ಗವನ್ನು ಕಂಗಾಲಾಗಿಸಿದೆ.

ಅತಿ ಹೆಚ್ಚು ಮಳೆಯಾಗುವ ಗ್ರಾಮೀಣ ಪ್ರದೇಶಗಳ ನಿವಾಸಿಗಳು ಮೇ ತಿಂಗಳಲ್ಲೇ ಮಳೆಗಾಲಕ್ಕೆ ಬೇಕಾದ ಸಿದ್ಧತೆ ಮಾಡಿಕೊಂಡಿದ್ದಾರೆ. ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಭಾಗಗಳಲ್ಲಿ ಗ್ಯಾಸ್ ಸಿಲಿಂಡರ್ ಬಳಕೆ ಕಡಿಮೆ. ಗ್ರಾಮಸ್ಥರು ಮಳೆಗಾಲಕ್ಕಾಗಿ ಸೌದೆ, ಸಂಬಾರ ಪದಾರ್ಥಗಳ ಶೇಖರಣೆಗಳನ್ನು ಮಾಡಿಕೊಂಡಿದ್ದು, ಮಳೆಗಾಲಕ್ಕೆ ಸಜ್ಜಾಗಿದ್ದಾರೆ.

ಮರ ಬಿದ್ದು ಆಟೋ ಚಾಲಕನಿಗೆ ತೀವ್ರ ಗಾಯ

ಮಡಿಕೇರಿ, ಜೂ.12–ಚಲಿಸುತ್ತಿದ್ದ ಆಟೋರಿಕ್ಷಾದ ಮೇಲೆ ಮರ ಉರುಳಿ ಬಿದ್ದ ಪರಿಣಾಮ ಚಾಲಕ ಗಂಭೀರ ಗಾಯಗೊಂಡು ಆಸ್ಪತ್ರೆ ಸೇರಿರುವ ಘಟನೆ ನಾಪೋಕ್ಲು ಬಳಿಯ ಕಕ್ಕಬ್ಬೆ ನೆಲಜಿ ರಸ್ತೆಯಲ್ಲಿ ಗುರುವಾರ ರಾತ್ರಿ ನಡೆದಿದೆ.



ಜಖಂಗೊಂಡಿರುವ ಆಟೋ

ಕಕ್ಕಬ್ಬೆ ಕುಂಜಿಲ ಗ್ರಾಮದ ನಿವಾಸಿ ಆಟೋ ಚಾಲಕ ಪಿ.ಎ.ಮಹಮೂದ್ ಎಂಬವರು ನಿನ್ನೆ ರಾತ್ರಿ ಆಟೋದಲ್ಲಿ ನೆಲಜಿ ಕಡೆಯಿಂದ ಕಕ್ಕಬ್ಬೆ ಕಡೆಗೆ ಪ್ರಯಾಣಿಕರನ್ನು ಹತ್ತಿಸಿಕೊಂಡು ಬರುತ್ತಿದ್ದಾಗ ರಸ್ತೆ ಬದಿ ತೋಟದಲ್ಲಿದ್ದ ಮರ ರಿಕ್ಷಾದ ಮೇಲೆ ಉರುಳಿ ಬಿದ್ದಿದೆ. ಅವಘಡದಿಂದ ಚಾಲಕ ಮಹಮೂದ್ ಅವರ ತಲೆಯ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತ್ತಾದರೂ ವೈದ್ಯರ ಶಿಫಾರಸಿನ ಮೇರೆಗೆ ಮಂಗಳೂರಿನ ಆಸ್ಪತ್ರೆಗೆಕರೆದೊಯ್ಯಲಾಗಿದೆ

ಆಟೋದಲ್ಲಿದ್ದ ಇಬ್ಬರು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆಟೋ ಮೇಲಿದ್ದ ಮರವನ್ನು ತೆರವುಗೊಳಿಸಿದ ಸ್ಥಳೀಯರು ಗಾಯಾಳುಗಳನ್ನು ರಕ್ಷಣೆ ಮಾಡಿ ಆಸ್ಪತ್ರೆಗೆ ದಾಖಲಿಸಿದರು. ಮರ ಬಿದ್ದ ಪರಿಣಾಮ ಆಟೋ ರಿಕ್ಷಾ ಸಂಪೂರ್ಣ ಜಖಂಗೊಂಡಿದ್ದು ವಿದ್ಯುತ್ ಕಂಬಕ್ಕೂ ಹಾನಿಯಾಗಿದೆ. ಸ್ಥಳಕ್ಕೆ ನಾಪೋಕ್ಲು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಂಗನವಾಡಿಗೆ ಖಾಯಂ ಶಿಕ್ಷಕರ ನೇಮಕಕ್ಕೆ ಆಗ್ರಹಿಸಿ ಪ್ರತಿಭಟನೆ

ಮಡಿಕೇರಿ: ಕುಶಾಲನಗರ ಬಳಿಯ ಮಾದಾಪಟ್ಟಣ ಅಂಗನವಾಡಿ ಕೇಂದ್ರಕ್ಕೆ ಖಾಯಂ ಶಿಕ್ಷಕರನ್ನು ನೇಮಿಸದೆ ಅಂಗನವಾಡಿ ಮುಚ್ಚಿರುವುದರಿಂದ ಮಕ್ಕಳಿಗೆ ತೀವ್ರ ಅನಾನುಕೂಲವಾಗಿದೆ ಎಂದು ಆರೋಪಿಸಿ ಇಲಾಖೆಯ ಅವ್ಯವಸ್ಥೆ ಖಂಡಿಸಿ ಪೋಷಕರು ಪ್ರತಿಭಟಿಸಿದರು.

ಸಮಸ್ಯೆಗೆ ಸೂಕ್ತ ಪರಿಹಾರ ಕಲ್ಪಿಸಬೇಕಾದ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ತಾತ್ಸಾರ ತೋರುತ್ತಿದ್ದಾರೆ ಎಂದು ಪ್ರತಿಭಟನಾ ಮಹಿಳೆಯರು ಆರೋಪಿಸಿದರು. 12 ವರ್ಷಗಳಿಂದ ಈ ಕೇಂದ್ರಕ್ಕೆ ಖಾಯಂ ಶಿಕ್ಷಕರಿಲ್ಲ. ತಾತ್ಕಾಲಿಕವಾಗಿ ಬರುವ ಶಿಕ್ಷಕರು ಅಲ್ಪ ಅವಧಿಯಲ್ಲಿಯೇ ಕೇಂದ್ರವನ್ನು ಬಿಟ್ಟು ಹೋಗುತ್ತಾರೆ. ಎರಡು ವರ್ಷಗಳಿಂದ ಕೇಂದ್ರವು ನಿರಂತರವಾಗಿ ಬೀಗ ಜಡಿದ ಸ್ಥಿತಿಯಲ್ಲಿಯೇ ಇದೆ. ಗ್ರಾಪಂ ಮೂಲಕ ಅಂಗನವಾಡಿಯ ಕಟ್ಟಡ ಅಭಿವೃದ್ಧಿ ಕಾಮಗಾರಿಗೆ ಅಗತ್ಯ ಅನುದಾನ ಒದಗಿಸುವ ಭರವಸೆ ಕೂಡ ದೊರೆತಿದೆ. ಆದರೆ ಶಿಕ್ಷಕರೇ ಇಲ್ಲದ ಕಾರಣ ಅಂಗನವಾಡಿಗೆ ಬೀಗ ಜಡಿಯುವ ಪರಿಸ್ಥಿತಿ ಎದುರಾಗಿದೆ. ಈ ಬಗ್ಗೆ ಶಾಸಕರಾದಿಯಾಗಿ ಎಲ್ಲರಿಗೂ ಮನವಿ ಸಲ್ಲಿಸಲಾಗಿದೆ. ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯಾವುದೇ ಅಗತ್ಯ ಕ್ರಮಕೈಗೊಳ್ಳದೆ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಸ್ಥಳೀಯ ದಲಿತ ಸಂಘರ್ಷ ಸಮಿತಿ ಮುಖಂಡ ಹೆಚ್.ಜೆ.ದಾಮೋದರ ಆರೋಪಿಸಿದರು.



ಅಂಗನವಾಡಿ ಇಲಾಖೆಯ ಅವ್ಯವಸ್ಥೆ ಖಂಡಿಸಿ ಪೋಷಕರು ಪ್ರತಿಭಟಿಸಿದರು.

ಸ್ಥಳೀಯ ಮುಖಂಡರ ಶ್ರಮದಿಂದ ಎರಡು ತಿಂಗಳ ಹಿಂದೆ ಅಂಗನವಾಡಿ ತೆರೆದು ಮಕ್ಕಳಿಗೆ ಅನುಕೂಲ ಒದಗಿಸಲಾಗಿತ್ತು. ಒಂದೇ ತಿಂಗಳಿಗೆ ಮತ್ತೆ ಬೀಗ ಜಡಿಯುವ ಪರಿಸ್ಥಿತಿ ಬಂದೊದಗಿದೆ. ಇದರಿಂದಾಗಿ ಅಂಗನವಾಡಿ ವ್ಯಾಪ್ತಿಯಲ್ಲಿ 20ಕ್ಕೂ ಅಧಿಕ ಮಕ್ಕಳು ಮನೆಯಲ್ಲಿಯೇ ಉಳಿದುಕೊಂಡಿದ್ದಾರೆ. ಸಮಸ್ಯೆ ಬಗೆಹರಿಸಲು ಅಧಿಕಾರಿಯನ್ನು ಸಂಪರ್ಕಿಸಿದರೆ ಉಡಾಫೆಯಿಂದ ಪ್ರತಿಕ್ರಿಯಿಸುತ್ತಾರೆ ಎಂದು ಶಶಿಕಲಾ ಆರೋಪಿಸಿದರು. ಪೋಷಕರಾದ ಸಾಕಮ್ಮ, ಮೀನಾ, ಭಾಗ್ಯ, ಖೈರುನ್ನಿಸಾ, ಕಾವ್ಯ, ರೀತಾ, ಗೌರಿ, ಅಮೀನಾ, ದೇವರಾಜ್, ಚಂದ್ರ ನಾಗಮ್ಮ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೊಯನಾಡು ಕಾರ್ಯಕ್ಷೇತ್ರದಲ್ಲಿ ಬೀದಿ ನಾಟಕ

ನಾಪೋಕ್ಲು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸಂಪಾಜೆ ವಲಯದ ಕೊಯನಾಡು ಕಾರ್ಯಕ್ಷೇತ್ರದ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಬೀದಿ ನಾಟಕವನ್ನು ನಡೆಸಲಾಯಿತು.

ಗ್ರಾಪಂ ಮಾಜಿ ಅಧ್ಯಕ್ಷ ರಮಾದೇವಿ ಕಳಗಿ ಉದ್ಘಾಟಿಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಪುರುಷೋತ್ತಮ್ ಸಂಸ್ಥೆಯ ಸೌಲಭ್ಯ ಹಾಗೂ ಯೋಜನೆಗಳ ಬಗ್ಗೆ ತಿಳಿಸಿಕೊಟ್ಟರು.

ಕಾಡಾನೆಗಳನ್ನು ಕಾಡಿಗೆ ಅಟ್ಟುವ ಕಾರ್ಯಾಚರಣೆ ಯಶಸ್ವಿ

ಮಡಿಕೇರಿ: ಸಿದ್ದಾಪುರ ವ್ಯಾಪ್ತಿಯ ಕಾಫಿ ತೊಟಗಳ ಒಳಗೆ ಬೀಡು ಬಿಟ್ಟಿದ್ದ ಕಾಡಾನೆಗಳನ್ನು ಕಾಡಿಗೆ ಅಟ್ಟುವ ಕಾರ್ಯಾಚರಣೆ ಕೊನೆಗೊಂಡಿದೆ. ಸಿದ್ದಾಪುರ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಕಾರ್ಯಾಚರಣೆ ವೇಳೆ ಗುಹ್ಯ ವ್ಯಾಪ್ತಿಗೆ ಹಿಂದಿರುಗಿದ್ದ ಸುಮಾರು 15ಕ್ಕೂ ಅಧಿಕ ಕಾಡಾನೆಗಳನ್ನು ಕಾರ್ಯಾಚರಣೆ ನಡೆಸಿ ಇಂಜಲಗೆರೆ ಮಂಡ್ಯ ಪಂಡ ತೋಟದ ಮುಖಾಂತರ ಬೀಟಿಕಾಡು ಬಳಿಯ ಆಲಿತೋಪು ಎಸ್ಟೇಟ್‌ವರೆಗೂ ಆನೆಗಳನ್ನು ಅಟ್ಟಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ.



ಇದೀಗ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದು ಬಜಗೊಳ್ಳಿ, ಮಠ, ಹುಂಡಿ ಮುಖಾಂತರ ಮಾಲ್ದಾರೆ ಮೀಸಲು ಅರಣ್ಯಕ್ಕೆ ಅಟ್ಟುವ ಕಾರ್ಯಾಚರಣೆ ಮುಂದುವರೆಸುವ ಸಾಧ್ಯತೆ ಯಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಮಾರ್ಗದರ್ಶನದಲ್ಲಿ ವಿರಾಜಪೇಟೆ ಉಪ ವಲಯ ಅರಣ್ಯಾಧಿಕಾರಿ ಶಿವರಾಂ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ತಿತಿ ಮತಿ ವಲಯ ಅರಣ್ಯಾಧಿಕಾರಿ ದೇವರಾಜ್, ವಿರಾಜಪೇಟೆ ವಲಯದ ಪ್ರಸನ್ನ, ಅಮ್ಮತ್ತಿ ವಿಭಾಗದ ಮನೋಜ್, ಆರ್.ಆರ್.ಟಿ ಸಿಬ್ಬಂದಿಗಳು, ತಿತಿಮತಿ ವಲಯ ಇಟಿಎಫ್ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಮದುವೆ ಮಾಡುವಂತೆ ಕುಡಿದು ಬಂದು ಜಗಳ ಮಾಡುತ್ತಿದ್ದ ಮಗನನ್ನು ಕೊಂದ ತಂದೆ

ತೆರಕಣಾಂಬಿ ಬಳಿ ದುರಂತ, ತಂದೆಯ ಬಂಧನ

ಚಾಮರಾಜನಗರ: ಬೇಗನೇ ಮದುವೆ ಮಾಡು, ಆಸ್ತಿಯಲ್ಲಿ ಭಾಗ ಕೊಡು ಎಂದು ಪ್ರತಿನಿತ್ಯ ಕುಡಿದು ಬಂದು ಜಗಳವಾಡುತ್ತಿದ್ದ ಮಗನನ್ನು ತಂದೆಯೇ ಸಿಮೆಂಟ್ ಇಟ್ಟಿಗೆಯಿಂದ ಹಲ್ಲೆ ಮಾಡಿ ಕೊಲೆಗೈದಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಪೊಲೀಸ್ ಠಾಣಾ ವ್ಯಾಪ್ತಿಯ ಯರಗನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಸಿದ್ದರಾಜು(32) ಕೊಲೆಯಾದ ವ್ಯಕ್ತಿ. ಈತನ ತಂದೆ ಸಿದ್ದೇಗೌಡ ಕೊಲೆ ಮಾಡಿದ ವ್ಯಕ್ತಿಯಾಗಿದ್ದು, ಪೊಲೀಸರು ಬಂಧಿಸಿದ್ದಾರೆ.

ಘಟನೆಯ ವಿವರ: ಗ್ರಾಮದ ಕುರುಬ ಜನಾಂಗದ ಸಿದ್ದರಾಜು ಗಾರೆ ಕೆಲಸ ಮಾಡುತ್ತಿದ್ದ. ಈತ ಪ್ರತಿದಿನ ಕುಡಿದು ಬಂದು ತಂದೆ ಸಿದ್ದೇಗೌಡ, ತಾಯಿ ಮಹದೇವಮ್ಮ ಅವರೊಂದಿಗೆ ನನಗೆ ಬೇಗ ಮದುವೆ ಮಾಡು, ಆಸ್ತಿಯನ್ನು ನೀಡಬೇಕೆಂದು ಜಗಳವಾಡುತ್ತಿದ್ದ. ಗುರುವಾರ ರಾತ್ರಿ ಕುಡಿದು ಬಂದು ಮತ್ತೆ ಮದುವೆ ಹಾಗೂ ಆಸ್ತಿಯ ವಿಚಾರವಾಗಿ ಗಲಾಟೆ ಮಾಡಿದ್ದಾನೆ.



ಸಿದ್ದರಾಜು



ಸಿದ್ದೇಗೌಡ

ಈ ವೇಳೆ ತಂದೆ–ಮಗನ ನಡುವೆ ವಾಗ್ವಾದ ನಡೆದು ಕೋಪಗೊಂಡ ತಂದೆ ಸಿದ್ದೇಗೌಡ ತನ್ನ ಮಗ ಸಿದ್ದರಾಜುವನ್ನು ತಳ್ಳಿ, ಕೆಳಕ್ಕೆ ಬೀಳಿಸಿ, ಸಿಮೆಂಟ್ ಇಟ್ಟಿಗೆಯಿಂದ ಆತನಿಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾನೆ. ಇದರಿಂದ ಸಿದ್ದರಾಜುವಿಗೆ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ವಿಷಯ ತಿಳಿದು ಸ್ಥಳಕ್ಕೆ ತೆರಕಣಾಂಬಿ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಕೆ.ಎಂ. ಮಹೇಶ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಶವವನ್ನು ಸಿಮ್ಸ್ ಆಸ್ಪತ್ರೆಗೆ ಶವ ಪರೀಕ್ಷೆಗಾಗಿ ರವಾನಿಸಿದ್ದಾರೆ. ನಂತರ ಮೃತನ ತಂದೆಯಾದ ಆರೋಪಿ ಸಿದ್ದೇಗೌಡನನ್ನು ಬಂಧಿಸಿದ್ದಾರೆ.


ಈ ಸಂಬಂಧ ಮೃತನ ತಾಯಿ ಮಹದೇವಮ್ಮ ತೆರಕಣಾಂಬಿ ಪೊಲೀಸ್ ಠಾಣೆಗೆ ದೂರು ನೀಡಿ, ಪೊಲೀಸರು ದೂರು ಸ್ವೀಕರಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕಟಾವಿಗೆ ಬಂದಿದ್ದ ಬಾಳೆಗಿಡ ಕತ್ತರಿಸಿದ ದುಷ್ಕರ್ಮಿಗಳು

ಚಾಮರಾಜನಗರ: ಕಟಾವಿಗೆ ಬಂದಿದ್ದ ಬಾಳೆ ಗಿಡಗಳನ್ನು ದುಷ್ಕರ್ಮಿಗಳು ರಾತ್ರೋರಾತ್ರಿ ಕೊಚ್ಚಿ ನಾಶಪಡಿಸಿರುವ ಘಟನೆ ತಾಲೂಕಿನ ಸಪ್ಪಯ್ಯನಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಎಸ್.ಎಂ.ಸುರೇಶ್ ಎಂಬುವರಿಗೆ ಸೇರಿದ ಸ.ನಂ.44/1ರಲ್ಲಿ 2.19 ಎಕರೆ ಜಮೀನಿನಲ್ಲಿ ಬಾಳೆ ಬೆಳೆದಿದ್ದರು. ಉತ್ತಮ ಗೊನೆ ಬಿಟ್ಟಿದ್ದ ಬಾಳೆ ಗಿಡಗಳನ್ನು ರಾತ್ರೋ ರಾತ್ರಿ ಕಿಡಿಗೇಡಿಗಳು ಕತ್ತರಿಸಿ ಹೋಗಿದ್ದಾರೆ. ಸುರೇಶ್ ಅವರು ಬೆಳಗ್ಗೆ ಜಮೀನಿಗೆ ಹೋಗಿ ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. 200ಕ್ಕೂ ಹೆಚ್ಚು ಬಾಳೆ ಗಿಡಗಳನ್ನು ಕತ್ತರಿಸಲಾಗಿದ್ದು ಇದರಿಂದ ಸುರೇಶ್ ಅವರಿಗೆ ಲಕ್ಷಾಂತರ ರೂ. ನಷ್ಟವಾಗಿದೆ. ಕಟಾವಿನ ಹಂತದಲ್ಲಿ ಕಿಡಿಗೇಡಿಗಳು ಈ ರೀತಿಯ ದುಷ್ಕೃತ್ಯ ಎಸಗಿದ್ದು ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ. ಒಂದು ತಿಂಗಳಲ್ಲಿಯೇ ಕಟಾವು ಮಾಡಬೇಕಿತ್ತು. ಆದರೆ, ಯಾರೋ ಕಿಡಿಗೇಡಿಗಳು ಈ ರೀತಿ ಗೊನೆಗಳನ್ನು ಕತ್ತರಿಸಿ ಹೋಗಿದ್ದಾರೆ ಎಂದು ಸುರೇಶ್ ಅಳಲು ತೋಡಿಕೊಂಡರು.

ಈ ಸಂಬಂಧ ಸುರೇಶ್ ಅವರು ಸಂತೇಮರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಸ್ಥಳಕ್ಕೆ ಪೊಲೀಸರು ಆಗಮಿಸಿ ಪರಿಶೀಲಿಸಿದ್ದು ಮುಂದಿನ ಕ್ರಮಕೈಗೊಂಡಿದ್ದಾರೆ.



ಅಕ್ಷಯಶ್ರೀ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಚಾಮರಾಜನಗರ: ಚಾಮರಾಜನಗರದ ಅಕ್ಷಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಕೆ.ವೀರಭದ್ರಸ್ವಾಮಿ, ಉಪಾಧ್ಯಕ್ಷರಾಗಿ ಲಿಂಗಪ್ಪಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ಅಧಿಕಾರ ಸ್ವೀಕರಿಸಿದ ಅಧ್ಯಕ್ಷ ಕೆ. ವೀರಭದ್ರಸ್ವಾಮಿ ಮಾತನಾಡಿ 2015ರಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಉತ್ತಮ ಮಟ್ಟದಲ್ಲಿ ನಡೆಯಲು ಎಲ್ಲಾ ನಿರ್ದೇಶಕರು ಹಾಗೂ ಸದಸ್ಯರ ಸಹಕಾರ ಮುಖ್ಯವಾಗಿದೆ. ದೇಶದ ಅಭಿವೃದ್ಧಿಗೆ ಸಹಕಾರ ಸಂಸ್ಥೆಗಳೆ ಮೂಲ. ನಮ್ಮ ಸಹಕಾರ ಸಂಘವು ಬಡವರಿಗೆ ಸಹಕಾರಿಯಾಗಿದೆ. ಕೆಲವು ಖಾಸಗಿಯವರು ಬಡ್ಡಿ ಜೊತೆಗೆ ಮೀಟರ್ ಬಡ್ಡಿಯನ್ನು ಹಾಕುತ್ತಾರೆ. ಅದರೆ ನಮ್ಮ ಸಂಸ್ಥೆಯಲ್ಲಿ ನಿಯಮಾನುಸಾರವಾಗಿ ನಡೆದುಕೊಳ್ಳಲಾಗುತ್ತಿದೆ. ಎಂದು ಹೇಳಿದರು.



ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸನ್ಮಾನಿಸಲಾಯಿತು.

ಉಪಾಧ್ಯಕ್ಷರಾದ ಲಿಂಗಪ್ಪಸ್ವಾಮಿ ಮರಿಯಾಲ ಅವರು ಮಾತನಾಡಿದರು. ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ಎಂ.ಪಿ.ಪದ್ಮನಾಭ ಅವರು ಮಾತನಾಡಿ ಯಾವುದೇ ಸಹಕಾರಿಯಾಗಲಿ ಸಂಘಗಳು ಅಭಿವೃದ್ಧಿಗಿಂತ ಅದರಿಂದ ಸಹಾಯ ಪಡೆದು ಅಭಿವೃದ್ಧಿಯಾಗಿ ಬೆಳೆಯುವುದು ಮುಖ್ಯ. ಹಲವಾರು ರೀತಿಯ ಸಹಕಾರಿಗಳು ಇದೆ. ಸಹಕಾರಿಯ ಸದಸ್ಯರೆಲ್ಲರೂ ಬಾಂಧವ್ಯದಿಂದ ಇರಬೇಕು ಎಂದು ತಿಳಿಸಿದರು.

ನಿರ್ದೇಶಕರಾದ ಎಸ್.ಎಂ.ನಂದೀಶ್, ಎಂ.ನಂಜುಂಡಸ್ವಾಮಿ, ಪಿ.ಕುಮಾರಸ್ವಾಮಿ, ವೈ.ಎಸ್.ಶ್ರೀನಿವಾಸ್, ಪ್ರಭುಸ್ವಾಮಿ, ಎಸ್. ಮಹದೇವಪ್ಪ, ದೇವರಾಜು, ನಾಗಶೆಟ್ಟಿ, ಮಧುನಾಗಮಲ್ಲಪ್ಪ, ಕೆ.ಎಸ್.ನಾಗಮಲ್ಲೇಶ್, ಸಿ.ಜಿ.ಮಾನಸ, ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಗೀತಾ.ಸಿ, ಕಚೇರಿ ಸಹಾಯಕ ಬಸವರಾಜು ಉಪಸ್ಥಿತರಿದ್ದರು.

ಗುಂಡ್ಲುಪೇಟೆಯಲ್ಲಿ ಫುಡ್‌ಕೋರ್ಟ್ ನಿರ್ಮಾಣ



ಫುಡ್ ಕೋರ್ಟ್ ನಿರ್ಮಾಣ ಕಾಮಗಾರಿಗೆ ಶಾಸಕ ಗಣೇಶ್ ಪ್ರಸಾದ್ ಚಾಲನೆ ನೀಡಿದರು

ಗುಂಡ್ಲುಪೇಟೆ, ಜೂ.12– ಪಟ್ಟಣದ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ಜತೆಗೆ ಎಲ್ಲಾ ಬೀದಿಬದಿಯ ವ್ಯಾಪಾರಿಗಳ ಅನುಕೂಲಕ್ಕೆ ಫುಡ್ ಕೋರ್ಟ್ ನಿರ್ಮಿಸಲಾಗುವುದು ಎಂದು ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಹೇಳಿದರು.

ಪಟ್ಟಣದ ಸೆಸ್ಕ್ ಕಚೇರಿ ಸಮೀಪ 5 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಈ ಹಿಂದೆಯೇ ಪುರಸಭೆಯು ಸೆಸ್ಕ್ ಸಮೀಪ ಫುಡ್ ಕೋರ್ಟ್ ನಿರ್ಮಿಸಿದ್ದರೂ ರಸ್ತೆ, ಮೂಲಭೂತ ಸೌಕರ್ಯಗಳ ಕೊರತೆಯಿಂದ ನಿರುಪಯುಕ್ತವಾಗಿತ್ತು. ಸಮೀಪದಲ್ಲಿಯೇ ಶೌಚಾಲಯ ಇರುವುದರಿಂದ ಶುಚಿತ್ವದ ಕೊರತೆಯಿಂದ ಸಾರ್ವಜನಿಕರು ಫುಡ್ ಕೋರ್ಟ್ ಬಳಕೆಗೆ ಹಿಂಜರಿಯುತ್ತಿದ್ದರು. ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಮಡಹಳ್ಳಿ ರಸ್ತೆಗೆ ಸ್ಥಳಾಂತರಿಸಲಾಗಿತ್ತು. ಮುಖ್ಯಮಂತ್ರಿಗಳ 5 ಕೋಟಿ ಅನುದಾನದಲ್ಲಿ ರಸ್ತೆಗಳ ನಿರ್ಮಾಣ ಮಾಡುವ ಜತೆಗೆ ಸುಸಜ್ಜಿತ ಫುಡ್‌ಕೋರ್ಟ್ ಆರಂಭಿಸಲಾಗುವುದು. ಅಲ್ಲದೆ ಹೆಚ್ಚುತ್ತಿರುವ ವಾಹನ ದಟ್ಟಣೆ ನಿಯಂತ್ರಿಸಲು ಪಟ್ಟಣದಲ್ಲಿ ಹೊಸ ಸಂಚಾರಿ ಪೊಲೀಸ್ ಠಾಣೆ ತೆರೆಯಲಾಗುತ್ತಿದೆ. ಪಟ್ಟಣದ ಸ್ವಚ್ಛತೆ ಹಾಗೂ ಸುಗಮ ಸಂಚಾರಕ್ಕೆ ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡ ಪ್ರಸಾದ್, ಪುರಸಭೆ ಮುಖ್ಯಾಧಿಕಾರಿ ಶರವಣ, ಮಾಜಿ ಅಧ್ಯಕ್ಷರಾದ ಮಧುಸೂಧನ್, ಶಶಿಧರ, ವೆಂಕಟಾಚಲ, ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಎನ್. ಬಸವರಾಜು, ಹಿರಿಯ ಮುಖಂಡರಾದ ಟಿ.ಪಿ. ನಾಗರಾಜು, ಗೋಪಾಲ್ ಪುರ ಲೋಕೇಶ, ವೀರನಪುರ ಚಂದ್ರು, ರಾಜೇಶ್ ರಾಸ, ವಿಶ್ವಾಸ್, ಸೇರಿದಂತೆ ಹಲವರು ಇದ್ದರು.

ಸೆನ್ ಠಾಣೆಯಲ್ಲಿ ಶೇಖರ್ ಬುದ್ದ ವಿರುದ್ಧ ದೂರು

ಚಾಮರಾಜನಗರ: ತಮ್ಮ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅಸಭ್ಯ, ಅವಾಚ್ಯ ಪದ ಬಳಸಿ ನನ್ನ ಗೌರವಕ್ಕೆ ಕುಂದುಂಟಾಗುವಂತೆ ಅವಹೇಳನಕಾರಿ ಪೋಸ್ಟ್ ಮಾಡಿರುವ ಶೇಖರ್ ಅಲಿಯಾಸ್ ಶೇಖರ್ ಬುದ್ಧ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಜಿ.ಪಂ. ಮಾಜಿ ಸದಸ್ಯ ಕಮಲ್ ಎಲ್.ನಾಗರಾಜ್ ನಗರದ ಜಿಲ್ಲಾ ಸೆನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಕೊಳ್ಳೇಗಾಲ ಪಟ್ಟಣದ ಶಂಕನಪುರದ ಶೇಖರ್ ಅಲಿಯಾಸ್ ಶೇಖರ್ ಬುದ್ಧ ಎಂಬುವವನು ತನ್ನ ಫೇಸ್ ಬುಕ್ ಪೇಜ್‌ನಲ್ಲಿ ತನ್ನ ಬಗ್ಗೆ ತೀರ ಕಳಮಟ್ಟದ ಬಾಷೆಯಲ್ಲಿ ನಿಂದಿಸಿ ಅಪಮಾನ ಮಾಡಿದ್ದಾರೆ ಎಂದು ಜಿಪಂ ಸದಸ್ಯ ಕಮಲ್ ಎಲ್. ನಾಗರಾಜ್ ದೂರು ನೀಡಿದ್ದಾರೆ. ನನ್ನನ್ನು ತೇಜೋವಧೆ ಮಾಡಿರುವ ಶೇಖರ್ ಬುದ್ದ ವಿರುದ್ದ ಕ್ರಮ ಜರುಗಿಸುವಂತೆ ಅವರು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಮುಖಂಡರಾದ ಬಸವರಾಜು, ಚೇತನ್, ಚಾಮರಾಜು ಸಿದ್ದಯ್ಯನಪುರ, ಲಿಂಗಣ್ಣ ಉತ್ತಂಬಳ್ಳಿ, ಶಿವರಾಜ್ ಸಿದ್ದಯ್ಯನಪುರ ಇತರರು.

ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

ಚಾಮರಾಜನಗರ: ಗ್ರಾಮೀಣ ರಸ್ತೆಗಳು ಗ್ರಾಮೀಣಾಭಿವೃದ್ಧಿಯ ಪ್ರತೀಕವಾಗಿದ್ದು, ಗ್ರಾಮ ಸಂಪರ್ಕ ರಸ್ತೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇನೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.ಚಾಮರಾಜನಗರ ವಿಧಾನಸಭೆ ಕ್ಷೇತ್ರದ ಕೂಡ್ಲೂರು, ಆಲೂರು, ಸರಗೂರು ಮೋಳೆ ಗ್ರಾಮದ ಉಪ್ಪಾರ ಬಡಾವಣೆಗಳಲ್ಲಿ ಮಳೆಹಾನಿ ಪರಿಹಾರ ಯೋಜನೆ ಅನುದಾನ 1.80ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕೂಡ್ಲೂರು ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ 80 ಲಕ್ಷ, ಆಲೂರು ಗ್ರಾಮದ ಉಪ್ಪಾರ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿಗೆ 50ಲಕ್ಷ, ಸರಗೂರುಮೋಳೆ ಗ್ರಾಮಕ್ಕೆ 50ಲಕ್ಷ ರೂ ಸೇರಿದಂತೆ 1.80 ಕೋಟಿ ರೂ.ವೆಚ್ಚದಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಮಾಡಲಾಗುವುದು ಎಂದರು.

ಇದೇ ವೇಳೆ ನಗರದ ರೇಷ್ಮೆಗೂಡು ಮಾರುಕಟ್ಟೆಯಿಂದ ಚನ್ನೀಪುರಮೋಳೆ, ಜಾಲಹಳ್ಳಿ ಹುಂಡಿಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಶಾಸಕರು ಪರಿಶೀಲಿಸಿದರು.

ನಾಳೆ ಕವಿಗೋಷ್ಠಿ, ಕವನ ಸಂಕಲನ ಬಿಡುಗಡೆ

ಚಾಮರಾಜನಗರ ಅನುಪಮ ಸೇವಾ ಟ್ರಸ್ಟ್ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ನಗರದಲ್ಲಿ ಜೂ.14 ರಾಷ್ಟ್ರೀಯ ಮಟ್ಟದ ಸಾಹಿತ್ಯ ಸಮ್ಮೇಳನ ಹಾಗೂ ರಾಷ್ಟ್ರೀಯ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮ, ಕವನ ಸಂಕಲನ ಬಿಡುಗಡೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ರಾಷ್ಟ್ರ ಮಟ್ಟದ ಸನ್ಮಾನ ಮತ್ತು ಅಭಿನಂದನಾ ಕಾರ್ಯಕ್ರಮವನ್ನು ನಗರದ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅನುಪಮ ಸೇವಾ ಟ್ರಸ್ಟ್ ಅಧ್ಯಕ್ಷೆ, ಲೇಖಕಿ ಡಾ.ಪಿ.ಪ್ರೇಮಾ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 9.30ಕ್ಕೆ ನಡೆಯುವ ಕವಿಗೋಷ್ಠಿ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಯಳಂದೂರು ತಾಲೂಕು ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶ್ರೀಧರ್ ಉದ್ಘಾಟಿಸುವರು. ಕೊಳ್ಳೇಗಾಲ ತಾಲೂಕು ಅಕ್ಷರದಾಸೋಹ ಸಹಾಯಕ ನಿರ್ದೇಶಕ ಆರ್.ನಂಜುಂಡಯ್ಯ ಅಧ್ಯಕ್ಷತೆ ವಹಿಸುವರು. ಲೇಖಕಿ ಡಾ.ಪಿ.ಪ್ರೇಮಾ ಆಶಯ ನುಡಿಗಳನ್ನಾಡುವರು.

ಕವಿಗೋಷ್ಠಿಯಲ್ಲಿ 20 ಮಂದಿ ಕವಿಗಳು ಭಾಗವಹಿಸುವರು. ಗೋಷ್ಠಿಯಲ್ಲಿ ಅನುಪಮ ಸೇವಾ ಟ್ರಸ್ಟ್ ಸದಸ್ಯರಾದ ಶಿವಣ್ಣ, ಪುಷ್ಪ, ಯೋಗೇಶ್, ಕುಂಚಕಲಾವಿದ ಮಹಮದ್ ಗೌಸ್ ಇದ್ದರು.

ಇಂದಿನಿಂದ ಭಾರತ–ಅಫ್ಘನ್ ನಡುವಣ ಏಕದಿನ ಸರಣಿ



ಮೈಸೂರು, ಜೂ.12(ವಿವಿಹೆಚ್)– ಭಾರತ ಮತ್ತು ಅಫ್ಘಾನಿಸ್ತಾನ ನಡುವಿನ ಬಹುನಿರೀಕ್ಷಿತ ಏಕದಿನ ಸರಣಿ ನಾಳೆಯಿಂದ(ಜೂ.13) ಆರಂಭವಾಗಲಿದೆ.

3 ಏಕದಿನ ಪಂದ್ಯಗಳನ್ನೊಳಗೊಂಡ ಏಕದಿನ ಸರಣಿಯಲ್ಲಿ ಮಾಜಿ ನಾಯಕ ರೋಹಿತ್ ಶರ್ಮಾ ಮಾತ್ರ ಕಾಣಿಸಿಕೊಂಡಿದ್ದು, ವಿರಾಟ್ ಕೊಹ್ಲಿ ಹಾಗೂ ಹಾರ್ದಿಕ್ ಪಾಂಡ್ಯ ಗಾಯದ ಸಮಸ್ಯೆಯಿಂದಾಗಿ ಟೂರ್ನಿಯಿಂದ ಹೊರಬಿದ್ದಿದ್ದಾರೆ.

2027ರ ಏಕದಿನ ವಿಶ್ವಕಪ್ ದೃಷ್ಟಿಯಿಂದ ಈ ಸರಣಿ ಉಭಯ ತಂಡಗಳಿಗೂ ನಿರ್ಣಾಯಕವಾಗಿದ್ದು, ಮೊದಲ ಏಕದಿನ ಪಂದ್ಯ ಜೂನ್ 13 ರಂದು ಧರ್ಮಶಾಲಾದಲ್ಲಿ ನಡೆಯಲಿದೆ.

ಎರಡನೇ ಏಕದಿನ ಜೂ.17 ರಂದು ಲಕ್ನೋನ ಏಕನಾ ಕ್ರೀಡಾಂಗಣದಲ್ಲಿ ನಡೆದರೆ, ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯ ಜೂ.20 ರಂದು ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿದೆ.

ಏಕದಿನ ಮಾದರಿಗೆ ಶುಭ್‌ಮನ್ ಗಿಲ್ ನಾಯಕತ್ವದ ಹೊಣೆ ಹೊತ್ತಿದ್ದು, ಟಿ20 ನಾಯಕ ಶ್ರೇಯಸ್ ಅಯ್ಯರ್ ಉಪನಾಯಕರಾಗಿ ತಂಡಕ್ಕೆ ಮತಷ್ಟು ಬಲ ತಂದಿದ್ದಾರೆ. ಉಳಿದಂತೆ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ಆಟಗಾರರಿಗೆ ಬಹುತೇಕ ಮಣೆ ಹಾಕಿದ್ದು, ಆಟಗಾರರ ನೈಜ ಆಟವನ್ನು ಇನ್ನಷ್ಟೆ ಕಾಣಬೇಕಿದೆ.

ಮೂರು ಪಂದ್ಯಗಳು ಮಧ್ಯಾಹ್ನ 1.30 ಗಂಟೆಗೆ ಆರಂಭವಾಗಲಿದ್ದು, ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಹಾಗೂ ಜಿಯೋಸ್ಟಾರ್‌ನಲ್ಲಿ ಲೈವ್ ಸ್ಟ್ರೀಮಿಂಗ್ ಮಾಡಬಹುದಾಗಿದೆ.

ಏಕದಿನ ಸರಣಿಗೆ ಭಾರತ ತಂಡ: ಶುಭಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ಶ್ರೇಯಸ್ ಅಯ್ಯರ್ (ಉಪನಾಯಕ), ಕೆಎಲ್ ರಾಹುಲ್, ಇಶಾನ್ ಕಿಶನ್, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧ್ ಕೃಷ್ಣ, ಪ್ರಿನ್ಸ್ ಯಾದವ್, ಗುರ್ನೂರ್ ಬ್ರಾರ್, ಹರ್ಷ್ ದುಬೆ.

ನಾಳೆ ಚಿತ್ರಕಲಾ ಸ್ಪರ್ಧೆ

ಮೈಸೂರು,ಜೂ.12–ವಿಶ್ವ ಪರಿಸರ ಮಾಸಾಚರಣೆ ಅಂಗವಾಗಿ ಮೈಸೂರಿನ ಬಿಲ್ಡರ್ಸ್ ಅಸೋಸೊಯೇಷನ್ ಆಫ್ ಇಂಡಿಯಾ, ಸ್ಫೂರ್ತಿ ಸಂಸ್ಥೆ ಸಹಯೋಗದಲ್ಲಿ ಜೂನ್ 14 ರಂದು ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ವಿಶ್ವೇಶ್ವರನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನ ಕಟ್ಟಡದಲ್ಲಿ ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಯು ಮೂರು ಥೀಮ್‌ಗಳಲ್ಲಿ ನಡೆಯಲಿದೆ. 3,4ನೇ ತರಗತಿಯ ಮಕ್ಕಳಿಗೆ ನನ್ನ ಸ್ವಚ್ಛ ಮತ್ತು ಹಸಿರು ನಗರ, 5,6, 7ನೇ ತರಗತಿಯ ಮಕ್ಕಳಿಗೆ ಪ್ಲಾಸ್ಟಿಕ್ ಬೇಡ ಎಂದು ಹೇಳಿ, 8, 9, 10ನೇ ತರಗತಿಯ ಮಕ್ಕಳಿಗೆ ಸುಸ್ಥಿರ ನಗರಗಳು ಎಂಬ ಥೀಮ್‌ನಡಿಯಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಮೊ: ರಾಜೇಶ್ ದರಿರಾಬಿ 9036019604, ಗುರುರಾಜ್ 9845122100, ವಿನೋದ್ ಕುಮಾರ್ 9481438359 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಕರಿಗೆ ಸನ್ಮಾನ



ಮೈಸೂರು ತಾಲೂಕು, ಜಯಪುರ ಗ್ರಾಮದ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯಲ್ಲಿ 24 ವರ್ಷ ಸುದೀರ್ಘ ಸೇವೆ ಸಲ್ಲಿಸಿ, ವರ್ಗಾವಣೆಗೊಂಡ ಶಿಕ್ಷಕಿ ಹಸೀನಾ ಬೇಗಂ ಅವರನ್ನು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಮಾಲೇಗೌಡ ಅಭಿನಂದಿಸಿದರು. ಈ ವೇಳೆ ಸಂಘದ ಸಂಘಟನಾ ಕಾರ್ಯದರ್ಶಿ ಬಿ.ಜೆ.ಪ್ರಕಾಶ್, ಶಿಕ್ಷಣ ಸಂಯೋಜಕರಾದ ಕೆ.ಎಸ್.ಮಂಜುನಾಥ್, ಶಿಕ್ಷಕರಾದ ಅಶೋಕ್, ಲಲಿತಾ, ಭಾಗ್ಯಮ್ಮ, ಜಯಭಾರತಿ, ಕುಸುಮಾ, ಆನಂದ, ಸವಿತಾ, ಕೃಷ್ಣ ಸವಿತಾ, ಕಿರಣ್ ಕುಮಾರ್, ಪ್ರಸನ್ನ, ಹರೀಶ್ ಕುಮಾರ್ ಮತ್ತು ಸಿದ್ದಲಿಂಗಯ್ಯ ಮತ್ತಿತರರಿದ್ದರು.

ಮೈಸೂರು ಮಿತ್ರ ಓದುಗರ ಗಮನಕ್ಕೆ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಶನಿವಾರ 13 ಜೂನ್ 2026

ವಿದ್ಯುತ್ ಸ್ಪರ್ಶದಿಂದ ವಾಟರ್‌ಮನ್ ಸ್ಥಳದಲ್ಲೇ ಸಾವು

ಸೂಕ್ತ ಪರಿಹಾರಕ್ಕೆ ಒತ್ತಾಯಿಸಿ ಜಿನ್ನಹಳ್ಳಿ ಗ್ರಾಮಸ್ಥರು, ಪೋಷಕರಿಂದ ಪ್ರತಿಭಟನೆ



ಅಜಯ್

ಹೆಚ್.ಡಿ.ಕೋಟೆ, ಜೂ.12– ವಿದ್ಯುತ್ ಸ್ಪರ್ಶದಿಂದ ವಾಟರ್‌ಮನ್ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಜಿನ್ನಹಳ್ಳಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ತಾಲೂಕಿನ ಜಿನ್ನಹಳ್ಳಿ ಗ್ರಾಮದ ನಿವಾಸಿ ಮಹದೇವಪ್ಪ ಹಾಗೂ ನಂಜಮಣಿ ದಂಪತಿ ಪುತ್ರ, ಹಂಪಾಪುರ ಗ್ರಾಪಂ ವಾಟರ್‌ಮನ್ ಅಜಯ್(24) ಸಾವನ್ನಪ್ಪಿದವರು.

ವಿವರ: ತಾಲೂಕಿನ ಹಂಪಾಪುರ ಗ್ರಾಪಂ ವ್ಯಾಪ್ತಿಯ ಜಿನ್ನಹಳ್ಳಿಯಲ್ಲಿ ಕುಡಿಯುವ ನೀರಿನ ಬೋರ್‌ವೆಲ್ ಕೆಟ್ಟು ಹೋದ ಹಿನ್ನೆಲೆಯಲ್ಲಿ ಗ್ರಾಪಂ ಪಿಡಿಓ ಬೋರ್‌ವೆಲ್ ದುರಸ್ತಿ ಮಾಡಿಸುವಂತೆ ಗುತ್ತಿಗೆದಾರ ಪುರುಷೋತ್ತಮ್ ಅವರಿಗೆ ತಿಳಿಸಿದ್ದರು. ಅದರಂತೆ ವಾಟರ್‌ಮನ್ ಅಜಯ್ ಹಾಗೂ ಮತ್ತಿತರರು ಬೋರ್‌ವೆಲ್ ದುರಸ್ತಿ ಮಾಡುತ್ತಿದ್ದಾಗ ಕಂಬದ ಮೇಲೆ ಹಾದು ಹೋಗಿದ್ದ ವಿದ್ಯುತ್ ತಂತಿಗೆ ಬೋರ್‌ವೆಲ್ ಪೈಪ್ ತಗುಲಿದ ಪರಿಣಾಮ ವಿದ್ಯುತ್ ಸ್ಪರ್ಶಗೊಂಡು ಅಜಯ್ ಸ್ಥಳದಲ್ಲೇ ಸಾವನ್ನಪ್ಪಿದರೇ, ಉಳಿದ ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಿಡಿಓ ಸೌಮ್ಯ ಪರಿಶೀಲಿಸಿ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲಿಸಿ ಅಜಯ್ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು.



ಸೂಕ್ತ ಪರಿಹಾರಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ: ವಾಟರ್‌ಮನ್ ಅಜಯ್ ಸಾವನ್ನಪ್ಪಿರುವ ವಿಷಯ ತಿಳಿಯುತ್ತಿದ್ದಂತೆಯೇ ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆ ಶವಾಗಾರದ ಎದುರು ಜಮಾಯಿಸಿದ ಪೋಷಕರು, ಜಿನ್ನಹಳ್ಳಿ ಗ್ರಾಮಸ್ಥರು ಹಾಗೂ ರೈತ ಸಂಘ ಸೇರಿದಂತೆ ಎಲ್ಲಾ ಸಮುದಾಯದ ಮುಖಂಡರು ಮೃತರ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡುವಂತೆ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಗ್ರಾಮದ ಜನತೆಯ ಅನುಕೂಲಕ್ಕಾಗಿ ಗ್ರಾಮದಲ್ಲಿ ವಾಟರ್ ಟ್ಯಾಂಕ್ ನಿರ್ಮಿಸಲು ಅಜಯ್ ಅವರ ಕುಟುಂಬ ಗ್ರಾಪಂಗೆ ಉಚಿತವಾಗಿ ನಿವೇಶನ ನೀಡಿ ಮುಂದಿನ ದಿನಗಳಲ್ಲಿ ನಮ್ಮ ಮಕ್ಕಳಿಗೆ ಗ್ರಾಪಂನಲ್ಲಿ ಕೆಲಸ ನೀಡುವಂತೆ ಮನವಿ ಮಾಡಿದ್ದರು. ಅದರಂತೆ ಅಜಯ್‌ಗೆ ಗುತ್ತಿಗೆ ಆಧಾರದ ಮೇಲೆ ವಾಟರ್‌ಮನ್ ಕೆಲಸ ನೀಡಲಾಗಿತ್ತು. ಇದೀಗ ಆತ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದ್ದಾನೆ. ಹೀಗಾಗಿ ಮೃತನ ಕುಟುಂಬಕ್ಕೆ ಅನ್ಯಾಯವಾಗದಂತೆ ಸೂಕ್ತ ಪರಿಹಾರ ನೀಡಿ, ಅವರ ಕುಟುಂಬದ ಸದಸ್ಯರೊಬ್ಬರಿಗೆ ಕೆಲಸ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಸ್ಥಳಕ್ಕಾಗಮಿಸಿದ್ದ ಅಧಿಕಾರಿಗಳು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಅಂತಿಮವಾಗಿ ಅಧಿಕಾರಿಗಳು ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದ ಹಿನ್ನಲೆಯಲ್ಲಿ ಪ್ರತಿಭಟನೆಯನ್ನು ಹಿಂಪಡೆದರು. ಬಳಿಕ ಅಜಯ್ ಶವದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ವೇಳೆ ತಾಪಂ ಅಧಿಕಾರಿಗಳು, ರೈತ ಮುಖಂಡರು ಸೇರಿದಂತೆ ಪೊಲೀಸರು ಇತರರಿದ್ದರು.

ಮಕ್ಕಳಿಗೆ ಶಿಕ್ಷಣ ಕೊಡಿಸಿ, ದೇಶದ ಅಭಿವೃದ್ಧಿಗೆ ಸಹಕರಿಸಿ

ಪೋಷಕರಿಗೆ ಪ್ರಧಾನ ಸಿವಿಲ್ ನ್ಯಾಯಾಧೀಶ ಎಸ್.ಚಂದನ್

ಕೆ.ಆರ್.ನಗರ, ಜೂ. 12– ಉತ್ತಮ ಶಿಕ್ಷಣ, ಆರೋಗ್ಯ ಹಾಗೂ ಆರ್ಥಿಕ ಪ್ರಗತಿ ದೇಶದ ಅಭಿವೃದ್ಧಿಗೆ ಸಹಾಯಕವಾಗಲಿದೆ. ಹೀಗಾಗಿ ಪೋಷಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ಮೂಲಕ ಉತ್ತಮ ಪ್ರಜೆಗಳನ್ನಾಗಿ ರೂಪಿಸಿ ದೇಶದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಎಸ್.ಚಂದನ್ ತಿಳಿಸಿದರು.

ಪಟ್ಟಣದ ಬಿ.ಎಸ್.ಮಾದಪ್ಪ ವಿದ್ಯಾಸಂಸ್ಥೆಯಲ್ಲಿ ನಡೆದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಪ್ರಗತಿಯನ್ನು ಶ್ರಮದಿಂದ ಅಳೆಯಲು ಸಾಧ್ಯವಿಲ್ಲ. ಒಂದು ದೇಶ ಪ್ರಗತಿ ಹೊಂದಬೇಕಿದ್ದರೆ ಶೈಕ್ಷಣಿಕ ಪ್ರಗತಿ ಸಾಧಿಸಬೇಕು. ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಪ್ರಾಪಂಚಿಕ ಜ್ಞಾನ ತಿಳಿಸುತ್ತಾ ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಹೊಣೆಗಾರಿಕೆ ಪ್ರತಿ ನಾಗರಿಕರದ್ದಾಗಿದೆ. ಹೀಗಾಗಿ ಮಕ್ಕಳನ್ನು ಬಾಲ್ಯಾವಸ್ಥೆಯಲ್ಲಿ ಕೆಲಸಕ್ಕೆ ದೂಡದೆ, ಅವರ ಬಾಲ್ಯ ಜೀವನ ಕಸಿದುಕೊಳ್ಳದೆ, ಉತ್ತಮ ವಿದ್ಯೆ ನೀಡುವ ಮೂಲಕ ದೇಶದ ಪ್ರಗತಿಗೆ ಶ್ರಮಿಸುವ ಹೊಣೆಗಾರಿಕೆ ಪ್ರತಿಯೊಬ್ಬರದಾಗಿದೆ ಎಂದರು.



ವಿದ್ಯಾರ್ಥಿಗಳಿಂದ ಬಾಲ ಕಾರ್ಮಿಕ ಪದ್ಧತಿ ವಿರೋಧಿ ಜಾಥ ನಡೆಸಲಾಯಿತು.

ತಹಶೀಲ್ದಾರ್ ಜಿ.ಸುರೇಂದ್ರ ಮೂರ್ತಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಎಐ ಅಂದರೆ ಕೃತಕ ಬುದ್ಧಿಮತ್ತೆಗೆ ಮಕ್ಕಳು ಮಾರು ಹೋಗುತ್ತಿದ್ದಾರೆ. ಅಲ್ಲಿನ ಆಕರ್ಷಣೆ ಮಕ್ಕಳನ್ನು ದಾರಿ ತಪ್ಪುವಂತೆ ಮಾಡುತ್ತಿದೆ. ಹೀಗಾಗಿ ವಿದ್ಯಾರ್ಥಿಗಳು ಆದಷ್ಟು ಸಾಮಾಜಿಕ ಜಾಲತಾಣಗಳಿಂದ ದೂರವಿರಬೇಕು. ಎಲ್ಲಾದರೂ ಬಾಲ ಕಾರ್ಮಿಕರು ಕಂಡು ಬಂದರೆ ಸಹಾಯವಾಣಿಗೆ ಕರೆ ಮಾಡುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕು ಎಂದು ಕರೆ ನೀಡಿದರು.

ಹೆಣ್ಣು ಮಕ್ಕಳ ರಕ್ಷಣೆಗಾಗಿ ಇರುವ ಪೋಕ್ಸೋ ಕಾಯ್ದೆ ಬಗ್ಗೆ ಪ್ರತಿ ಹೆಣ್ಣು ಮಗು ತಿಳಿದಿರಬೇಕು. ಅಲ್ಲದೇ ಬಾಲ್ಯ ವಿವಾಹ ಕಂಡು ಬಂದರೆ ಅದನ್ನು ವಿರೋಧಿಸಿ ಸಂಬಂಧಪಟ್ಟವರಿಗೆ ದೂರು ನೀಡಬೇಕು ಎಂದರು.

ಇದೇ ವೇಳೆ ಬಾಲ ಕಾರ್ಮಿಕ ಪದ್ಧತಿ ವಿರೋಧಿಸಿ ದೇಶಕ್ಕೆ ಉತ್ತಮ ಪ್ರಜೆಗಳನ್ನು ರೂಪಿಸುವ ಭರವಸೆಯ ಪ್ರಮಾಣ ವಚನವನ್ನು ಭೋಧಿಸಿದರು. ಮುಖ್ಯ ಅತಿಥಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ಅಸ್ರೀನಾ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನಾ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ನಗರದ ಮುಖ್ಯ ರಸ್ತೆಗಳಲ್ಲಿ ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ನಡೆಸಲಾಯಿತು.

ಈ ವೇಳೆ ವಕೀಲೆ ಕೆ.ಪ್ರಭಾವತಿ ಉಪನ್ಯಾಸ ನೀಡಿದರು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಣ್ಣಯ್ಯ, ಕಾರ್ಮಿಕ ನಿರೀಕ್ಷಕರಾದ ಹೆಚ್.ಕೆ.ಗೋವಿಂದರಾಜು, ಎನ್.ಮಂಜುನಾಥ, ದೈಹಿಕ ಶಿಕ್ಷಣ ಪರಿವೀಕ್ಷಕ ಸ್ವಾಮಿಗೌಡ, ಮಾದಪ್ಪ ಶಾಲೆ ಮುಖ್ಯ ಶಿಕ್ಷಕ ಗಣೇಶ್ ಪ್ರಸಾದ್ ಭಾಗವಹಿಸಿದ್ದರು.

ಹೊಸೂರು ಗ್ರಾಮದಲ್ಲಿ ಟೊಮೆಟೊ ಸಸಿ ನಾಶ





ಟೊಮೆಟೊ ಗಿಡಗಳನ್ನು ಕಿತ್ತು ಹಾಕಿರುವುದು.

ಚುಂಚನಕಟ್ಟೆ, ಜೂ.12– ಹೂ ಬಿಡುವ ಹಂತಕ್ಕೆ ಬಂದಿದ್ದ ಟೊಮೆಟೊ ಸಸಿಗಳನ್ನು ಕಿಡಿಗೇಡಿಗಳು ಕಿತ್ತು ಬಿಸಾಡಿರುವ ಘಟನೆ ಸಾಲಿಗ್ರಾಮ ತಾಲೂಕಿನ ಹೊಸೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಂಜುನಾಥ್ ಅವರು ತಮ್ಮ ಜಮೀನಿನಲ್ಲಿ ಟೊಮೆಟೊ, ಬೀನ್ಸ್, ಬೆಂಡೆಕಾಯಿ ಸೇರಿದಂತೆ ತರಕಾರಿ ನಾಟಿ ಮಾಡಿದ್ದರು. ಗುರುವಾರ ರಾತ್ರಿ ಜಮೀನಿಗೆ ನುಗ್ಗಿರುವ ಕಿಡಿಗೇಡಿಗಳು ಹೂ ಬಿಡುವ ಹಂತಕ್ಕೆ ಬಂದಿದ್ದ ಟಮೊಟೊ ಸಸಿಗಳನ್ನು ಕಿತ್ತು ಹಾಕಿ ಪಕ್ಕದ ಚಾಮರಾಜ ನಾಲೆ ಏರಿ ಮೇಲೆ ಹಾಕಿ ಹೋಗಿದ್ದಾರೆ. ಈ ಹಿಂದೆ ಇದೇ ಜಾಗದಲ್ಲಿ ಗ್ರಾಮದ ರೈತ ರಾಮಕೃಷ್ಣ ಅವರಿಗೆ ಸೇರಿದ ಭತ್ತದ ಪೈರಿಗೆ ನಾಟಿ ಮುನ್ನಾ ದಿನ ಕಳೆನಾಶಕ ಸಿಂಪಡಿಸಿದ್ದರು. ಇದರಿಂದ 2 ಎಕರೆ ಭತ್ತದ ಪೈರು ನಾಶವಾಗಿತ್ತು.

ಹೊಸೂರು ಡೈರಿ ಮಾಜಿ ಅಧ್ಯಕ್ಷ ಸ್ವಾಮಿ ಮಾತನಾಡಿ, ಯಾವುದೇ ರೈತ ಬೆಳೆದ ಬೆಳೆಯನ್ನು ನಾಶ ಮಾಡುವಷ್ಟು ವೈರತ್ವ ಯಾರಿಗೂ ಇರಬಾರದು. ಇಂತಹ ಘಟನೆಗಳು ಗ್ರಾಮದಲ್ಲಿ ಪದೇ ಪದೇ ನಡೆಯುತ್ತಿದ್ದು ಪೊಲೀಸರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ಸಂಬಂಧ ಚುಂಚನಕಟ್ಟೆ ಉಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಾವುದೇ ಸಮಸ್ಯೆ ಇದ್ದರೂ ರೈತರು ಚರ್ಚಿಸಿ

ತಿ.ನರಸೀಪುರ, ಜೂ.12– ರೈತರು ಯಾವುದೇ ಸಮಸ್ಯೆ ಇದ್ದರೂ ಪ್ರತಿ ತಿಂಗಳು ನಡೆಯುವ ಸಭೆಯಲ್ಲಿ ಚರ್ಚಿಸಬೇಕು ಎಂದು ರೈತ ಸಂಘದ ಜಿಲ್ಲಾ ಜಿಲ್ಲಾ ಗೌರವಾಧ್ಯಕ್ಷ ಕಳ್ಳಿಪುರ ಮಹದೇವಸ್ವಾಮಿ ಮನವಿ ಮಾಡಿದರು.

ಪಟ್ಟಣದ ಕರ್ನಾಟಕ ರಾಜ್ಯ ರೈತ ಸಂಘ–ಹಸಿರು ಸೇನೆ ಸಂಘಟನೆ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಂಘಕ್ಕೆ ಮಹಿಳೆಯರನ್ನು ಸೇರ್ಪಡೆ ಮಾಡಿಕೊಂಡು ಮಾತನಾಡಿದ ಅವರು, ತಾಲೂಕಿನಲ್ಲಿ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಹಿನ್ನೆಲೆಯಲ್ಲಿ ಮಹಿಳೆಯರು ರೈತ ಸಂಘಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಆದರೆ ಯಾವುದೇ ಸಮಸ್ಯೆಗಳಿದ್ದಲ್ಲಿ ರೈತರು ನೇರವಾಗಿ ಸಂಘದ ಸಭೆಯಲ್ಲಿ ಚರ್ಚಿಸಬೇಕು ಎಂದು ತಿಳಿಸಿದರು.

ಸಂಘವು ಕೃಷಿ ಇಲಾಖೆಯಿಂದ ದೊರೆಯುವ ಸವಲತ್ತುಗಳನ್ನು ತಲುಪಿಸಲು ಹಾಗೂ ರೈತರ ಇನ್ನಿತರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿದರೆ ನಾಗರಿಕರು ಸಂಘಕ್ಕೆ ಬರಲು ಆರಂಭಿಸುತ್ತಾರೆ. ಆ ರೀತಿ ಸಂಘ ಕಾರ್ಯ ನಿರ್ವಹಿಸಬೇಕೆಂದು ಸಲಹೆ ನೀಡಿದರು.



ಸಭೆಯಲ್ಲಿ ರೈತ ಸಂಘಕ್ಕೆ ಮಹಿಳೆಯರು ಸೇರ್ಪಡೆಗೊಂಡರು.

ರೈತರ ಸಮಸ್ಯೆಗಳನ್ನು ಅರಿತು ಅವರ ನೆರವಿಗೆ ನಿಂತಾಗ ಮಾತ್ರ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಸಂಘಟನೆಗೆ ಉತ್ತಮ ಸ್ಪಂದನೆ ದೊರೆಯುತ್ತದೆ. ಆ ನಿಟ್ಟಿನಲ್ಲಿ ಸಂಘದ ಎಲ್ಲಾ ಸದಸ್ಯರು ಕಾರ್ಯ ನಿರ್ವಹಿಸಬೇಕೆಂದು ಸಲಹೆ ನೀಡಿದರು.

ತಾಲೂಕಿನ ಬಸವನಹಳ್ಳಿ ಗ್ರಾಮದ ಬೇಬಿ ಎಂಬಾಕೆಯನ್ನು ತಾಲೂಕು ಮಹಿಳಾ ಘಟಕದ ಅಧ್ಯಕ್ಷರಾಗಿ ನೇಮಿಸಲಾಯಿತು. ನಂತರ ಮಹಿಳಾ ಘಟಕಕ್ಕೆ ಮಹದೇವಮ್ಮ, ಸುನಂದಮ್ಮ, ರೂಪ, ಗಾಯಿತ್ರಮ್ಮ, ಜಯಲಕ್ಷ್ಮಮ್ಮ, ಲಕ್ಷ್ಮಮ್ಮ, ದೊಡ್ಡತಾಯಮ್ಮ, ಶಶಿಕಲಾ ಅವರನ್ನು ಸದಸ್ಯರನ್ನಾಗಿ ನೇಮಿಸಲಾಯಿತು.

ಹಿರಿಯ ಮುಖಂಡ ಕೆ.ಜಿ.ಶಿವಪ್ರಸಾದ್, ತಾಲೂಕು ಅಧ್ಯಕ್ಷ ಆಲಗೂಡು ಮಹದೇವು, ಮುಡುಕನಪುರ ಮಹಾದೇವಸ್ವಾಮಿ, ತಾಲೂಕು ಪ್ರಧಾನ ಕಾರ್ಯದರ್ಶಿ ಅತ್ತಹಳ್ಳಿ ಶಿವನಂಜು, ಜಿಲ್ಲಾ ಸಹ ಕಾರ್ಯದರ್ಶಿ ರಾಮಕೃಷ್ಣ, ಬನ್ನೂರು ಹೋಬಳಿ ಅಧ್ಯಕ್ಷ ಜಗದೀಶ್, ತಾಲೂಕು ಉಪಾಧ್ಯಕ್ಷರು ಹಾಗೂ ಎಲ್ಲಾ ಹೋಬಳಿ ಗಳ ಅಧ್ಯಕ್ಷರು, ಮುಖಂಡರು ಉಪಸ್ಥಿತರಿದ್ದರು.

ಮಂಟಿಕೊಪ್ಪಲಿನಲ್ಲಿ ನೂತನ ಡೇರಿ ಉದ್ಘಾಟನೆ



ನೂತನ ಡೇರಿಯನ್ನು ಶಾಸಕ ಕೆ.ವೆಂಕಟೇಶ್ ಉದ್ಘಾಟಿಸಿದರು.

ಬೆಟ್ಟದಪುರ, ಜೂ.12– ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿರುವ ಹೈನುಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡುವ ಮೂಲಕ ರೈತರ ಆದಾಯ ಹೆಚ್ಚಿಸಲು ಸಹಕಾರ ಸಂಘಗಳು ಪರಿಣಾಮ ಕಾರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಶಾಸಕ ಕೆ.ವೆಂಕಟೇಶ್ ತಿಳಿಸಿದರು.

ಇಲ್ಲಿಗೆ ಸಮೀಪದ ಎಂ.ಮಂಟಿಕೊಪ್ಪಲು ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆ ಗ್ರಾಮೀಣ ಕುಟುಂಬಗಳ ಜೀವನೋಪಾಯದ ಪ್ರಮುಖ ಆಧಾರವಾಗಿದ್ದು, ರೈತರು ಉತ್ಪಾದಿಸುವ ಹಾಲಿಗೆ ಸೂಕ್ತ ಮಾರುಕಟ್ಟೆ ಹಾಗೂ ನ್ಯಾಯಯುತ ಬೆಲೆ ದೊರಕುವಲ್ಲಿ ಸಹಕಾರ ಸಂಘಗಳ ಪಾತ್ರ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ಸಂಘದ ಆಡಳಿತ ಮಂಡಳಿಯು ರೈತರ ಹಿತಾಸಕ್ತಿಗೆ ಆದ್ಯತೆ ನೀಡಿ ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಸಂಘವು ಹಾಲು ಉತ್ಪಾದಕರಿಗೆ ಅಗತ್ಯ ಸೌಲಭ್ಯ ಒದಗಿಸುವುದರೊಂದಿಗೆ, ಹೈನುಗಾರಿಕೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಪ್ರೋತ್ಸಾಹಕಾರಿ ಕಾರ್ಯಕ್ರಮ ರೂಪಿಸಬೇಕು. ಹಾಲು ಉತ್ಪಾದಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಸದಸ್ಯ ರೈತರಿಗೆ ಅನುಕೂಲವಾಗುವ ರೀತಿ ಪಾರದರ್ಶಕ ಆಡಳಿತ ನಡೆಸುವ ಮೂಲಕ ಸಂಘವನ್ನು ಮಾದರಿ ಸಂಸ್ಥೆಯನ್ನಾಗಿ ಬೆಳೆಸಬೇಕು ಎಂದು ಕರೆ ನೀಡಿದರು.

ಈ ವೇಳೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಸಂಘದ ಅಧ್ಯಕ್ಷ ಕುಳ್ಳೇಗೌಡ, ಉಪಾಧ್ಯಕ್ಷೆ ಮಹದೇವಮ್ಮ, ಕಾರ್ಯದರ್ಶಿ ಎಂ.ಕೆ.ಮಾದೇಗೌಡ, ವಿಸ್ತರಣಾಧಿಕಾರಿ ನಿಶ್ಚಿತ್ ಇದ್ದರು.

ಸರ್ಕಾರಿ ಶಾಲೆಯಲ್ಲೂ ಆಂಗ್ಲ ಮಾಧ್ಯಮ ಆರಂಭ

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎನ್.ರಾಜು

ಸರಗೂರು, ಜೂ.12– ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ರಾಜ್ಯ ಸರ್ಕಾರ ಸಾವಿರಾರು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮವನ್ನು ಆರಂಭಿಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎನ್.ರಾಜು ತಿಳಿಸಿದರು.

ತಾಲೂಕಿನ ಆಗತ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ನೂತನವಾಗಿ ಆರಂಭಿಸಿರುವ ಎಲ್‌ಕೆಜಿ ಹಾಗೂ ಆಂಗ್ಲ ಮಾಧ್ಯಮದ 1 ರಿಂದ 5ನೇ ತರಗತಿಗೆ ಚಾಲನೆ ನೀಡಿ ಮಾತನಾಡಿದ ಅವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ಇಸಿಸಿಇ ಕಾರ್ಯಕ್ರಮದಡಿ ಆಗತ್ತೂರು ಜಿಹೆಚ್‌ಪಿಎಸ್‌ನಲ್ಲಿ ಆಂಗ್ಲ ಮಾಧ್ಯಮ ಆರಂಭಿಸಿರುವುದು ಉತ್ತಮ ಬೆಳವಣಿಗೆ. ಇದರಿಂದ ಗ್ರಾಮೀಣ ಮಕ್ಕಳ ವಿದ್ಯಾರ್ಜನೆಗೆ ಸಹಕಾರಿಯಾಗಲಿದೆ. ಖಾಸಗಿ ಶಾಲೆಗೆ ನಿಮ್ಮ ಮಕ್ಕಳನ್ನು ಸೇರಿಸಿ ಹಣದುಂದು ವೆಚ್ಚ ಮಾಡುವ ಬದಲು ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸಿ ಶಾಲೆಯಲ್ಲಿ ಸಿಗುವ ಉಚಿತ ಬಿಸಿಯೂಟ, ಸಮವಸ್ತ್ರ, ಶೂ, ಸಾಕ್ಸ್, ಪಠ್ಯ ಪುಸ್ತಕ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.



ಕಾರ್ಯಕ್ರಮವನ್ನು ಬಿಇಓ ರಾಜು ಉದ್ಘಾಟಿಸಿದರು.

ಈ ವೇಳೆ ಮುಖ್ಯ ಶಿಕ್ಷಕ ಸಿದ್ದರಾಜು, ಎಸ್‌ಡಿಎಂಸಿ ಅಧ್ಯಕ್ಷ ಎಸ್.ಎನ್.ರಾಜೇಶ್, ಸದಸ್ಯರಾದ ಮಹದೇವ ನಾಯಕ, ಮಾದೇಶ್, ಮಹೇಶ್, ಪೂರ್ಣಿಮ, ದೇವಿ, ಗೌರಿ, ಶ್ರುತಿ, ಮಂಗಳಮ್ಮ, ಪುಟ್ಟಮ್ಮ, ದೈಹಿಕ ಶಿಕ್ಷಕ ಬಂಗಾರಯ್ಯ, ಶಿಕ್ಷಕರಾದ ರಾಮೇಗೌಡ್ರು, ಆರ್.ಜಯರಾಮ್, ಎಸ್.ಜೆ.ಲಕ್ಷ್ಮಿ, ಶಿಲ್ಪಮೇರಿ, ರೇಖಾ, ಸಣ್ಣತಿಮ್ಮನಾಯಕ, ಸರಸ್ವತಿ ಇನ್ನಿತರರಿದ್ದರು.

ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ತಿ.ನರಸೀಪುರ, ಜೂ.12– ಯುವ ರಾಜಕಾರಣಿ, ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಅವರ ಪುತ್ರ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ದಸಂಸ ತಾಲೂಕು ಸಂಚಾಲಕ ಕುಕ್ಕೂರು ರಾಜು ಆಗ್ರಹಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ರಾಜಕಾರಣದಲ್ಲಿ ಹೊಸ ಪೀಳಿಗೆ ನಾಯಕರಿಗೆ ಅವಕಾಶ ಕಲ್ಪಿಸುವುದು ಕಾಲದ ಅಗತ್ಯವಾಗಿದೆ. ಕಾಂಗ್ರೆಸ್ ಪಕ್ಷ ಯುವ ನಾಯಕರನ್ನು ಗುರುತಿಸಿ ಅವರಿಗೆ ಜವಾಬ್ದಾರಿಯುತ ಸ್ಥಾನಮಾನ ನೀಡುವ ಮೂಲಕ ಭವಿಷ್ಯದ ನಾಯಕತ್ವ ರೂಪಿಸಬೇಕಿದೆ.



ಸುದ್ದಿಗೋಷ್ಠಿಯಲ್ಲಿ ದಸಂಸ ಸಂಚಾಲಕ ಕುಕ್ಕೂರು ರಾಜು ಮಾತನಾಡಿದರು.

ಆ ನಿಟ್ಟಿನಲ್ಲಿ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ದರ್ಶನ್ ಅವರಿಗೆ ರಾಜಕೀಯ ಅನುಭವದ ಕೊರತೆ ಇದೆ ಎಂಬ ವಾದ ತಳ್ಳಿ ಹಾಕಿದ ಅವರು, ಯಾರೇ ಆದರೂ ಹುಟ್ಟಿನಿಂದಲೇ ಅನುಭವಿಗಳಾಗಿ ಬರುವುದಿಲ್ಲ. ಅವಕಾಶ ದೊರೆತಾಗಲೇ ನಾಯಕತ್ವ ಬೆಳೆಯುತ್ತದೆ. ಈ ಭಾಗದಿಂದ 40 ವರ್ಷ ರಾಜಕೀಯ ಅಧಿಕಾರ ಅನುಭವಿಸಿರುವ ವ್ಯಕ್ತಿಗೆ ಮೊದಲ ಬಾರಿಗೆ ಸಚಿವರಾಗಿದ್ದಾಗ ಅವರಿಗೆ ಎಷ್ಟು ಅನುಭವ ಇತ್ತು ಎಂಬುದನ್ನು ವಿಮರ್ಶಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅನುಭವ ಎನ್ನುವುದು ಹುದ್ದೆಗಳನ್ನು ನಿರ್ವಹಿಸುವ ಮೂಲಕವೇ ಬರುತ್ತದೆ. ದರ್ಶನ್ ಅವರಿಗೆ ಸಮುದಾಯದ ಬೆಂಬಲವಿದ್ದು, ಜನರೊಂದಿಗೆ ಬೆರೆತು ಕೆಲಸ ಮಾಡುವ ಸಾಮರ್ಥ್ಯವಿದೆ ಎಂದು ಹೇಳಿದರು.

ದಿವಂಗತ ಧ್ರುವನಾರಾಯಣ್ ಅವರು ತಮ್ಮ ಸರಳತೆ, ಜನಪರ ಕಾಳಜಿ ಮತ್ತು ಪಕ್ಷ ನಿಷ್ಠೆಯ ಮೂಲಕ ರಾಜ್ಯಾದ್ಯಂತ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದರು. ಅವರ ರಾಜಕೀಯ ಪರಂಪರೆ ಮುಂದುವರಿಸಿಕೊಂಡು ಹೋಗುವ ಸಾಮರ್ಥ್ಯ ದರ್ಶನ್ ಅವರಿಗಿದೆ. ಹೀಗಾಗಿ ಪಕ್ಷ ಅವರ ನಾಯಕತ್ವ ಬಳಸಿಕೊಳ್ಳಬೇಕಾಗಿದೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಚಿವ ಸಂಪುಟ ವಿಸ್ತರಣೆ ವೇಳೆ ಎಲ್ಲಾ ಅಂಶಗಳನ್ನು ಪರಿಗಣಿಸಿ ದರ್ಶನ್ ಧ್ರುವನಾರಾಯಣ್ ಅವರಿಗೆ ಅವಕಾಶ ಕಲ್ಪಿಸಬೇಕು. ಒಂದು ವೇಳೆ ಯುವ ನಾಯಕರನ್ನು ಕಡೆಗಣಿಸಿ ಹಳೆಯ ಮುಖಗಳಿಗೆ ಮಾತ್ರ ಆದ್ಯತೆ ನೀಡಿದರೆ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಹಿನ್ನಡೆ ಉಂಟಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಈ ವೇಳೆ ದಸಂಸ ಸಂಚಾಲಕ ಮಹೇಶ್ ಕುರುಬೂರು, ಮುಖಂಡರಾದ ನಂಜನಗೂಡು ಮಹದೇವಸ್ವಾಮಿ, ಹಿರಿಯೂರು ನಾಗರಾಜು, ಬನ್ನಹಳ್ಳಿ ಚಂದ್ರಶೇಖರ್, ಗಂಗಾಧರ್, ಅಕ್ಕೂರು ರಾಜೇಶ್, ಮೂಗೂರು ಶೇಷಣ್ಣ, ಚೇತನ್, ರಂಜನ್, ಪ್ರಜ್ವಲ್, ಸುದೀಪ, ಬಸವಣ್ಣ, ನಂದನ್, ಮಹೇಂದ್ರ, ಶಿವು, ರಂಗಸ್ವಾಮಿ ಉಪಸ್ಥಿತರಿದ್ದರು.

ಮಾಜಿ ಶಾಸಕರಿಗೆ ಸನ್ಮಾನ



ಹುಣಸೂರು ತಾಲೂಕಿನ ಭೋವಿ ಸಮಾಜಕ್ಕೆ ನಿವೇಶನ ಮಂಜೂರು ಮಾಡಿಸಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಭೋವಿ ಸಮಾಜದ ಮುಖಂಡರು ಸನ್ಮಾನಿಸಿದರು. ಈ ವೇಳೆ ತಾಲೂಕು ಭೋವಿ ಸಮಾಜದ ಅಧ್ಯಕ್ಷ ತಿಮ್ಮರಸ ಭೋವಿ, ತಾಪಂ ಮಾಜಿ ಸದಸ್ಯರಾದ ಚಿನ್ನವೀರಯ್ಯ, ಅಭಿಯಂತರ ವಿ.ವೈ.ಭೋಜರಾಜ್, ಮುಖಂಡರಾದ ಆರ್.ರಾಮಯ್ಯ, ತಿಮ್ಮರಾಜಣ್ಣ. ಕೆ ಗಣೇಶ್, ಜಗದೀಶ್, ತಿಮ್ಮಣ್ಣ, ಗಣೇಶ್ ಭೋವಿ, ರವಿಕುಮಾರ್ ನಾಗರಾಜ್, ಕೊಂಡಯ್ಯ, ಕೃಷ್ಣ, ರಾಮು ಇತರರಿದ್ದರು.

ಹರಿಹರದಲ್ಲಿ ಶ್ರೀರಾಮನ ವಿರುದ್ಧ ಅವಹೇಳನಕಾರಿ ಹೇಳಿಕೆ

ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ನಂ.ಗೂಡಲ್ಲಿ ದೂರು



ಕೆ.ಎಸ್.ಭಗವಾನ್

ನಂಜನಗೂಡು, ಜೂ.12– ದಾವಣಗೆರೆ ಜಿಲ್ಲೆ ಹರಿಹರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀರಾಮನ ವಿರುದ್ಧ ಅವಹೇಳನಕಾರಿ ಹಾಗೂ ಪ್ರಚೋದನಾಕಾರಿ ಹೇಳಿಕೆ ನೀಡಿರುವ ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ನಗರದ ಪೊಲೀಸ್ ಠಾಣೆಗೆ ಯುವ ಬ್ರಿಗೇಡ್ ಸಂಘಟನೆ ಶುಕ್ರವಾರ ದೂರು ನೀಡಿದ್ದಾರೆ.

ಪ್ರೊ.ಕೆ.ಎಸ್.ಭಗವಾನ್ ಅವರು ಸಾರ್ವಜನಿಕ ವೇದಿಕೆಯಲ್ಲಿ ಹಿಂದೂ ಧರ್ಮೀಯರ ಧರ್ಮಪ್ರಭು ಶ್ರೀರಾಮಚಂದ್ರ ಹಾಗೂ ಹಿಂದೂ ಧರ್ಮ ಗ್ರಂಥಗಳ ಕುರಿತು ಅವಹೇಳನಕಾರಿ, ಪ್ರಚೋದನಾಕಾರಿ ಹಾಗೂ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುವ ರೀತಿಯಲ್ಲಿ ಹೇಳಿಕೆ ನೀಡಿದ್ದು, ತಮ್ಮ ಭಾಷಣದಲ್ಲಿ ಪ್ರಭು ಶ್ರೀರಾಮನು ತಂದೆ ದಶರಥನಿಗೆ ಹುಟ್ಟಿಲ್ಲ. ಪುತ್ರಕಾಮೇಷ್ಠಿ ಯಾಗದಲ್ಲಿ ರಾಣಿಯರು ಪುರೋಹಿತರ ಜೊತೆ ಮಲಗಬೇಕಿತ್ತು. ಶ್ರೀರಾಮನು ಪುರೋಹಿತರಿಗೆ ಹುಟ್ಟಿದವನು ಎಂದು ಅತ್ಯಂತ ಅಶ್ಲೀಲ ಹೇಳಿಕೆ ನೀಡಿ ಹಿಂದೂಗಳ ಧಾರ್ಮಿಕ ಭಾವನೆಗೆ ನೋವುಂಟು ಮಾಡಿದ್ದಾರೆ. ವಾಲ್ಮೀಕಿ ರಾಮಾಯಣದ ಬಗ್ಗೆ ತಪ್ಪು ಮಾಹಿತಿ ನೀಡಿ ಹಿಂದೂ ಧರ್ಮ ಗ್ರಂಥವನ್ನು ಅಪಮಾನ ಮಾಡಿದ್ದಾರೆ. ಆದ್ದರಿಂದ ಅವರ ವಿರುದ್ಧ ಕಾನೂನುಕ್ರಮ ಕೈಗೊಳ್ಳುವಂತೆ ಯುವ ಬ್ರಿಗೇಡ್ ಸಂಚಾಲಕ ಚಂದ್ರಶೇಖರ್ ದೂರಿನಲ್ಲಿ ಮನವಿ ಮಾಡಿದ್ದಾರೆ.

ಕೆಲವರಿಂದ ಕಾಂಗ್ರೆಸ್ ದಲಿತ ವಿರೋಧಿ ಎಂದು ಬಿಂಬಿಸಲು ಷಡ್ಯಂತ್ರ

ಪಕ್ಷ ದೇಶ, ರಾಜ್ಯದಲ್ಲಿ ದಲಿತರಿಗೆ ಉನ್ನತ ಸ್ಥಾನ ನೀಡಿದೆ: ಮಾಜಿ ಎಂಎಲ್‌ಸಿ ಆರ್.ಧರ್ಮಸೇನಾ

ತಿ.ನರಸೀಪುರ, ಜೂ.12– ಕಾಂಗ್ರೆಸ್ ದಲಿತ ವಿರೋಧಿ ಎಂದು ಬಿಂಬಿಸಲು ಕೆಲವರು ನಡೆಸುತ್ತಿರುವ ಷಡ್ಯಂತ್ರ ರಾಜಕೀಯ ಪ್ರೇರಿತವಾಗಿದ್ದು, ಅದರಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಮಾಜಿ ವಿಧಾನ ಪರಿಷತ್ ಸದಸ್ಯರೂ ಆದ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ ತಿಳಿಸಿದರು.

ಪಟ್ಟಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ದೇಶ ಹಾಗೂ ರಾಜ್ಯ ಮಟ್ಟದಲ್ಲಿ ಅನೇಕ ದಲಿತ ನಾಯಕರಿಗೆ ಸಚಿವ ಸ್ಥಾನ ಸೇರಿದಂತೆ ಉನ್ನತ ಹುದ್ದೆ ಮತ್ತು ಜವಾಬ್ದಾರಿ ನೀಡಿ ಗೌರವಯುತ ಸ್ಥಾನಮಾನ ಕಲ್ಪಿಸಿದೆ. ಹೀಗಾಗಿ ಕೆಲವರು ವೈಯಕ್ತಿಕ ಕಾರಣಗಳಿಗಾಗಿ ಕಾಂಗ್ರೆಸ್ ಅನ್ನು ದಲಿತ ವಿರೋಧಿ ಎಂದು ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ ಎಂದು ಆರೋಪಿಸಿದರು.

ಯಾರಿಗಾದರೂ ಸಚಿವ ಸ್ಥಾನ ದೊರೆಯದಿದ್ದರೇ ಅದಕ್ಕೆ ಪಕ್ಷವನ್ನು ದೂರುವುದು ಸರಿಯಲ್ಲ. ಅದಕ್ಕೆ ಹಲವಾರು ರಾಜಕೀಯ, ಸಂಘಟನಾ ಹಾಗೂ ಆಡಳಿತಾತ್ಮಕ ಕಾರಣಗಳಿರಬಹುದು. ಕೆಲವೊಮ್ಮೆ ನಾಯಕರ ರಾಜಕೀಯ ನಡೆ–ನುಡಿಗಳು, ಪಕ್ಷದ ಬಗ್ಗೆ ಅವರ ನಿಲುವು ಹಾಗೂ ಪಕ್ಷದ ಶಿಸ್ತಿನ ವಿಚಾರಗಳನ್ನು ಪರಿಗಣಿಸಿ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಆದ್ದರಿಂದ ಸಚಿವ ಸ್ಥಾನ ಸಿಗಲಿಲ್ಲ ಎಂಬ ಕಾರಣಕ್ಕೆ ಪಕ್ಷದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವುದು ಸೂಕ್ತವಲ್ಲ ಎಂದರು.



ಕಾಂಗ್ರೆಸ್ ಸಾಮಾಜಿಕ ನ್ಯಾಯದ ಪರ

ಡಾ.ಜಿ.ಪರಮೇಶ್ವರ್ ಅವರಿಗೆ ಉಪ ಮುಖ್ಯಮಂತ್ರಿ, ಪ್ರಿಯಾಂಕ್ ಖರ್ಗೆ ಅವರಿಗೆ ಪ್ರಭಾವಿ ಖಾತೆ ನೀಡಲಾಗಿದೆ. ಕೆ.ಎಚ್.ಮುನಿಯಪ್ಪ ಸಚಿವರಾಗಿದ್ದಾರೆ. ರುದ್ರಪ್ಪ ಲಮಾಣಿ ಅವರಿಗೆ ಉಪ ಸಭಾಪತಿ ಸ್ಥಾನಕ್ಕೆ ಆಹ್ವಾನ ನೀಡುವ ಮೂಲಕ ಗೌರವಿಸಲಾಗಿದೆ. ರಾಜ್ಯದ ಹಲವು ಪ್ರಮುಖ ಇಲಾಖೆಗಳ ಜವಾಬ್ದಾರಿಗಳನ್ನು ಪ.ಜಾತಿ ಸಮುದಾಯದ ನಾಯಕರಿಗೆ ನೀಡಲಾಗಿದೆ. ಇದರಿಂದ ಕಾಂಗ್ರೆಸ್ ಸಾಮಾಜಿಕ ನ್ಯಾಯದ ಪರವಾಗಿ ಕಾರ್ಯ ನಿರ್ವಹಿಸುತ್ತಿದೆ. – ಧರ್ಮಸೇನಾ, ಕೆಪಿಸಿಸಿ ಪ.ಜಾತಿ ವಿಭಾಗದ ರಾಜ್ಯಾಧ್ಯಕ್ಷ.

ಈಗಾಗಲೇ ಸಾಕಷ್ಟು ಅವಕಾಶ ಪಡೆದಿರುವ ನಾಯಕರ ಬದಲಾಗಿ ಹೊಸ ಮುಖಗಳಿಗೆ ಅವಕಾಶ ಕಲ್ಪಿಸುವ ಉದ್ದೇಶ ಹೈಕಮಾಂಡ್‌ಗೆ ಇರುತ್ತದೆ. ಹೀಗಾಗಿ ಪಕ್ಷದ ಬೆಳವಣಿಗೆಗಾಗಿ ದುಡಿಯುವ ಹೊಸ ನಾಯಕರಿಗೆ ಅವಕಾಶ ನೀಡುವುದು ಪ್ರಜಾಪ್ರಭುತ್ವದ ವ್ಯವಸ್ಥೆಯ ಭಾಗವಾಗಿದೆ ಎಂದರು.


ಶಿಸ್ತು ಉಲ್ಲಂಘನೆ ಹೈಕಮಾಂಡ್ ಸಹಿಸದು: 2018ರಲ್ಲಿ ಸಮ್ಮಿಶ್ರ ಸರ್ಕಾರ ರಚನೆ ಸಂದರ್ಭ ನಡೆದ ರಾಜಕೀಯ ಬೆಳವಣಿಗೆ ಉಲ್ಲೇಖಿಸಿದ ಅವರು, ಪಕ್ಷದ ಎಲ್ಲಾ ಬೆಳವಣಿಗೆಗಳ ಬಗ್ಗೆ ಹೈಕಮಾಂಡ್‌ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾಯಕರು ಕೈಗೊಳ್ಳುವ ಪ್ರತಿಯೊಂದು ರಾಜಕೀಯ ನಿರ್ಧಾರ ಹಾಗೂ ಪಕ್ಷದ ಹಿತಾಸಕ್ತಿಗೆ ಸಂಬಂಧಿಸಿದ ನಡೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತದೆ. ಪಕ್ಷದಲ್ಲಿ ಯಾರೂ ದೊಡ್ಡವರಲ್ಲ. ಯಾರೇ ಆಗಿದ್ದರೂ, ಪಕ್ಷದ ಶಿಸ್ತು ಉಲ್ಲಂಘಿಸಿದರೆ ಅಥವಾ ಪಕ್ಷದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡರೆ ಹೈಕಮಾಂಡ್ ಅದನ್ನು ಸಹಿಸುವುದಿಲ್ಲ ಎಂದರು.

ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಕೆಲಸ ಮಾಡಿದರೆ ಪಕ್ಷ ಖಂಡಿತವಾಗಿಯೂ ಅವರನ್ನು ಗುರುತಿಸಿ ಜವಾಬ್ದಾರಿ ನೀಡುತ್ತದೆ. ಆದರೆ ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವವರಿಗೆ ಪ್ರೋತ್ಸಾಹ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಚಿವ ಸ್ಥಾನ ಇದ್ದರೆ ಮಾತ್ರ ಕೆಲಸ ಮಾಡಬಹುದು ಎಂಬುದು ತಪ್ಪು ಕಲ್ಪನೆ. ಯಾವುದೇ ಹುದ್ದೆ ಇಲ್ಲದಿದ್ದರೂ ಪಕ್ಷದ ಸಂಘಟನೆ ಬಲಪಡಿಸುವುದು ಮತ್ತು ಜನಸೇವೆ ಮಾಡುವ ಅವಕಾಶ ಎಲ್ಲರಿಗೂ ಇದೆ ಎಂದು ಹೇಳಿದರು.

ಪಕ್ಷದ ನಾಯಕರ ವಿರುದ್ಧ ಕೆಲಸ ಮಾಡುವವರಿಗೆ ಸಚಿವ ಸ್ಥಾನ ಬೇಕೆ: ಇತ್ತೀಚೆಗೆ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಕೆಲವು ಸಚಿವರು ತಮ್ಮ ವಿರುದ್ಧ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವುದನ್ನು ಉಲ್ಲೇಖಿಸಿದ ಧರ್ಮಸೇನಾ, ಪಕ್ಷದ ನಾಯಕರ ವಿರುದ್ಧವೇ ಕೆಲಸ ಮಾಡುವವರು ಸಚಿವ ಸ್ಥಾನದ ಆಕಾಂಕ್ಷಿಗಳಾಗುವುದು ಎಷ್ಟು ಸರಿ ಎಂಬ ಪ್ರಶ್ನೆ ಎತ್ತಿದರು. ಇಂತಹ ಎಲ್ಲಾ ಬೆಳವಣಿಗೆಗಳನ್ನು ಪಕ್ಷದ ಹೈಕಮಾಂಡ್ ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಧಾರ ಕೈಗೊಳ್ಳುತ್ತದೆ ಎಂದರು.


ಸಾಮರ್ಥ್ಯ ಪರಿಗಣಿಸಿ ಯತೀಂದ್ರಗೆ ಸ್ಥಾನ: ಡಾ.ಯತೀಂದ್ರ ಸಿದ್ದರಾಮಯ್ಯಗೆ ಸಚಿವ ಸ್ಥಾನ ನೀಡಿರುವ ಸಂಬಂಧ ಪ್ರತಿಕ್ರಿಯಿಸಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಪುತ್ರನಿಗೆ ಸಚಿವ ಸ್ಥಾನ ಕೊಡಿಸಲು ದಲಿತ ಮಾಜಿ ಸಚಿವರ ತಲೆದಂಡ ಮಾಡಲಾಗಿದೆ ಎಂಬ ಆರೋಪದಲ್ಲಿ ಯಾವುದೇ ಸತ್ಯಾಂಶವಿಲ್ಲ. ಸಿದ್ದರಾಮಯ್ಯ ಅವರು ತಮ್ಮ ಆಡಳಿತಾವಧಿಯಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಆಡಳಿತ ನಡೆಸಿ, ಪಕ್ಷದ ನಿರ್ಧಾರಗಳಿಗೆ ಗೌರವ ನೀಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಪಕ್ಷಕ್ಕೆ ಅವರು ಸಲ್ಲಿಸಿದ ಸೇವೆ ಪರಿಗಣಿಸಿ ಹಾಗೂ ಡಾ.ಯತೀಂದ್ರ ಅವರ ರಾಜಕೀಯ ಸಾಮರ್ಥ್ಯ ಗಮನಿಸಿ ಜವಾಬ್ದಾರಿ ನೀಡಲಾಗಿದೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವುದು ಸರಿಯಲ್ಲ ಎಂದು ಸ್ಪಷ್ಟಪಡಿಸಿದರು.

ನಂಜುಂಡೇಗೌಡ ನಿಧನ



ತಿ.ನರಸೀಪುರ, ಜೂ.12– ತಾಲೂಕಿನ ಗರ್ಗೇಶ್ವರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ನಂಜುಂಡೇಗೌಡ (84) ಶುಕ್ರವಾರ ಮಧ್ಯಾಹ್ನ ನಿಧನರಾದರು. ಇವರು ಜಿಪಂ ಮಾಜಿ ಸದಸ್ಯೆ ರತ್ನಮ್ಮ ಗೋಪಾಲ್ ರಾಜ್ ಅವರ ಮಾವ. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೀರೇಗೌಡ



ಭೇರ್ಯ, ಜೂ.12– ಕಾವಲ್ ಹೊಸೂರು ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡ ಬೀರೇಗೌಡ(78) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಿಂಗಾಂಬುದಿ ಕೆರೆ ಒಡಲಿಗೆ ಒಳಚರಂಡಿ ನೀರು: ಜಲಚರಗಳಿಗೆ ಜೀವ ಕಂಟಕ

ತೇಲುವ ಸತ್ತ ಮೀನುಗಳ ಕಂಡು ಪರಿಸರ ಪ್ರೇಮಿಗಳ ಆಕ್ರೋಶ; ತುರ್ತು ಕ್ರಮಕ್ಕೆ ಆಗ್ರಹ

ಮೈಸೂರು, ಜೂ.12(ಎಂಟಿವೈ)– ಮೈಸೂರಿನ ಲಿಂಗಾಂಬುದಿ ಕೆರೆಗೆ ಒಳಚರಂಡಿ ನೀರು ಸೇರುತ್ತಿರುವುದರಿಂದ ಇಲ್ಲಿನ ಜಲಚರಗಳಿಗೆ ಸಂಚಕಾರ ಬಂದೊದಗಿದೆ ಎಂದು ಪರಿಸರವಾದಿಗಳು ದೂರಿದ್ದಾರೆ.

ನಗರದ ಅಸಮರ್ಪಕ ಒಳಚರಂಡಿ ವ್ಯವಸ್ಥೆಯಿಂದಾಗಿ ಜಲಚರಗಳು ಬಲಿಯಾಗುತ್ತಿದ್ದರೂ ಸಂಬಂಧಪಟ್ಟವರು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು ಭಾಗದಲ್ಲಿ ಕಳೆದ ಮೂರ್‍ನಾಲ್ಕು ದಿನಗಳಿಂದ ಮಳೆಯಾಗುತ್ತಿದ್ದು, ಮಳೆ ನೀರು ಒಳಚರಂಡಿ ಸೇರಿ ಒತ್ತಡದಿಂದ ಉಕ್ಕಿ ಹರಿಯುತ್ತಿದೆ. ಈ ಕಲುಷಿತ ನೀರು ರಾಜಕಾಲುವೆಗಳಿಗೆ ಸೇರುವ ಮೂಲಕ ಲಿಂಗಾಂಬುದಿ ಕೆರೆಯ ಒಡಲು ಸೇರುತ್ತಿದೆ. ಹೀಗೆ ದಟ್ಟಗಳ್ಳಿ, ರಾಮಕೃಷ್ಣನಗರ, ಜನತಾನಗರ, ಶಾರದಾದೇವಿನಗರ ಸುತ್ತಮುತ್ತಲಿನ ಒಳಚರಂಡಿ ನೀರು ವ್ಯಾಪಕವಾಗಿ ಕೆರೆಗೆ ಹರಿದುಬರುತ್ತಿದೆ. ಪರಿಣಾಮ ಕೆರೆ ನೀರು ಕಲುಷಿತಗೊಂಡು ಮೀನುಗಳು ಸೇರಿದಂತೆ ಎಲ್ಲಾ ಜಲಚರಗಳಿಗೂ ಸಂಚಕಾರ ಬಂದೊದಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ದಿನದಿಂದ ಲಿಂಗಾಂಬುದಿ ಕೆರೆಯಲ್ಲಿ ಹತ್ತಾರು ಸತ್ತ ಮೀನುಗಳು ತೇಲುತ್ತಿರುವುದೇ ನೀರು ಕಲುಷಿತಗೊಂಡಿರುವುದಕ್ಕೆ ಸಾಕ್ಷಿ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಕೆರೆಯಲ್ಲಿರುವ ಅಪಾರ ಸಂಖ್ಯೆಯ ಜಲಚರಗಳ ಬಲಿಯಾಗುವುದು ನಿಶ್ಚಿತ. ಅಲ್ಲದೆ, ಕೆರೆ ನೀರು ಸೇವಿಸುವ ಪಕ್ಷಿಗಳು, ಸಣ್ಣಪುಟ್ಟ ಪ್ರಾಣಿಗಳಿಗೂ ಆಪತ್ತು ಎದುರಾಗುತ್ತದೆ. ಸತ್ತ ಮೀನುಗಳನ್ನು ಸಿಬ್ಬಂದಿ ತೆರವು ಮಾಡಿದ್ದಾರೆ. ಆದರೆ, ಮೂಲ ಸಮಸ್ಯೆ ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಲೆಕೆಡಿಸಿಕೊಂಡಿಲ್ಲ. ಕೆರೆಗೆ ಕಲುಷಿತ ನೀರು ಸೇರದಂತೆ ಯಾವುದೇ ಕ್ರಮ ವಹಿಸದಿರುವುದು ಆತಂಕಕಾರಿ ಸಂಗತಿ ಎಂದು ಪರಿಸರವಾದಿಗಳು ಬೇಸರಿಸಿದ್ದಾರೆ.



ಲಿಂಗಾಂಬುದಿ ಕೆರೆಯಲ್ಲಿ ಮೀನುಗಳು ಸತ್ತು ತೇಲುತ್ತಿರುವುದು.

> ಲಿಂಗಾಬುದಿ ಕೆರೆಗೆ ಕೊಳಚೆ ನೀರು ಸೇರುತ್ತಿದ್ದು, ಇದನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಬೇಕು. ಲಿಂಗಾಂಬುದಿ ಕೆರೆಯನ್ನು ರಕ್ಷಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು. ಪರಿಸರಕ್ಕೆ ದೊಡ್ಡ ಕೊಡುಗೆಯಂತಿರುವ ಈ ಕೆರೆಯನ್ನು ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇಚ್ಛಾಸಕ್ತಿ ತೋರಬೇಕು.
> - ವಡ್ನಾಳ್ ಜಗದೀಶ್, ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ

ಎಂಡಿಎ, ಪಾಲಿಕೆ ನಿರ್ಲಕ್ಷ್ಯ: ಲಿಂಗಾಂಬುದಿ ಕೆರೆ ಅರಣ್ಯ ಇಲಾಖೆಯ ಸುಪರ್ದಿಯಲ್ಲಿದೆ. ನೈಸರ್ಗಿಕ ಪರಿಸರ ದಲ್ಲಿರುವ ಈ ಕೆರೆಯನ್ನು ವಿವಿಧ ಪ್ರಭೇದದ ಪಕ್ಷಿ, ಜಲಚರ, ಸಸ್ಯಸಂಕುಲ ಅವಲಂಭಿಸಿವೆ. ಕೆರೆ ಏರಿಯುದ್ದಕ್ಕೂ ಇರುವ ವೈವಿಧ್ಯಮಯ ಗಿಡ–ಮರಗಳ ತೋಪು, ಪಕ್ಷಿ ಸಂಕುಲಕ್ಕೆ ಆಸರೆ ಯಾಗಿದೆ. ಆದರೆ, ಈ ಕೆರೆಗೆ ಕಳೆದ ಹಲವು ವರ್ಷಗಳಿಂದ ಒಳಚರಂಡಿ ನೀರು ಹರಿದುಬರುತ್ತಲೇ ಇದೆ. ಇದನ್ನು ತಡೆಗಟ್ಟುವ ಸಣ್ಣ ಪ್ರಯತ್ನವನ್ನೂ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಹಾಗೂ ಮೈಸೂರು ಮಹಾನಗರ ಪಾಲಿಕೆ ಮಾಡಿಲ್ಲ. ಈ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳು ಅನೇಕ ಬಾರಿ ಪತ್ರ ಬರೆದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಯಾರೂ ಕೂಡ ಕಲುಷಿತ ನೀರು ತಡೆಗೆ ಕ್ರಮ ವಹಿಸಿಲ್ಲ. ಸ್ಥಳೀಯ ಸಂಸ್ಥೆಗಳ ಸಮನ್ವಯ, ಅಧಿಕಾರಿಗಳ ಇಚ್ಛಾಸಕ್ತಿ ಕೊರತೆಯಿಂದಾಗಿ ಲಿಂಗಾಂಬುದಿ ಕೆರೆ ಕೊಳಚೆ ಗುಂಡಿಯಾಗುವ ಹಂತ ತಲುಪುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಲಸೆ ಪಕ್ಷಿಗಳು ಕ್ಷೀಣ: ಲಿಂಗಾಂಬುದಿ ಕೆರೆಗೆ ಈ ಹಿಂದೆ ವಿವಿಧೆಡೆಯಿಂದ ಅಪಾರ ಸಂಖ್ಯೆಯ ಪಕ್ಷಿಗಳು ವಲಸೆ ಬರುತ್ತಿದ್ದವು. ತಿಂಗಳುಗಳ ಕಾಲ ಇಲ್ಲಿಯೇ ಉಳಿದು, ಸಂತಾನೋತ್ಪತ್ತಿ ಬಳಿಕ ಮರಿಗಳೊಂದಿಗೆ ಸ್ವಸ್ಥಾನಕ್ಕೆ ಮರಳುತ್ತಿದ್ದವು. ಪಕ್ಷಿಗಳ ಕಲರವದಿಂದ ಲಿಂಗಾಂಬುದಿ ಕೆರೆಯ ಜೀವಕಳೆ ಹೆಚ್ಚುತ್ತಿತ್ತು. ಆದರೆ, ಹಿಂದಿನ ಸುಂದರ ವಾತಾವರಣ ಕಣ್ಮರೆಯಾಗಿದೆ. ನೀರು ಕಲುಷಿತಗೊಳ್ಳುತ್ತಿರುವುದರಿಂದ ವಲಸೆ ಪಕ್ಷಿಗಳ ಸಂಖ್ಯೆಯೂ ಗಣನೀಯವಾಗಿ ಕ್ಷೀಣಿಸಿದೆ. ಅಲ್ಲದೆ, ಸ್ಥಳೀಯ ಪಕ್ಷಿ ಸಂಕುಲವೂ ಆಪತ್ತಿನಲ್ಲಿದೆ. ಅಪರೂಪದ ಸಸ್ಯಗಳೂ ನಾಶವಾಗುತ್ತಿವೆ.

> ವಾಯುವಿಹಾರಕ್ಕೆ ಹೋದಾಗ ಲಿಂಗಾಂಬುದಿ ಕೆರೆಯಲ್ಲಿ ಐದಾರು ಮೀನುಗಳು ಸತ್ತು ತೇಲುತ್ತಿದ್ದವು. ಕೆರೆ ನೀರು ಕಲುಷಿತಗೊಂಡಿರುವುದಕ್ಕೆ ಇದೇ ಸಾಕ್ಷಿ. ಕೆರೆಯಲ್ಲಿನ ಇನ್ನಿತರ ಜಲಚರಗಳ ಸಂರಕ್ಷಣೆಗಾಗಿ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಅಲ್ಲದೆ, ಕೆರೆಗೆ ಒಳಚರಂಡಿ ನೀರು ಸೇರದಂತೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು.
> - ಟಿ.ಎಲ್.ಶ್ರೀನಿವಾಸ್, ಶ್ರೀರಾಂಪುರದ ನಿವಾಸಿ

ಘೋಷಣೆಯಾಗಿ ಉಳಿದ ಟ್ರೀಟ್ಮೆಂಟ್ ಪ್ಲಾಂಟ್: ಕೆರೆಗಳಿಗೆ ಚರಂಡಿ ನೀರು ಸೇರದಂತೆ ತಡೆದು ಅದನ್ನು ಸ್ವಚ್ಛಗೊಳಿಸಿದ ಬಳಿಕ ಕೆರೆಗೆ ಹರಿಬಿಡುವ ಯೋಜನೆ ನೀರಲ್ಲೇ ಮುಳುಗಿದೆ. ಟ್ರೀಟ್‌ಮೆಂಟ್ ಪ್ಲಾಂಟ್ (ಸಂಸ್ಕರಣಾ ಘಟಕ) ನಿರ್ಮಿಸುವ ಪ್ರಸ್ತಾಪ ಮಾಡಿ ಸಾಕಷ್ಟು ವರ್ಷಗಳೇ ಕಳೆದಿವೆ. ಆದರೆ ಈವರೆಗೂ ಯೋಜನೆ ಸಂಬಂಧಿತ ಯಾವುದೇ ಪ್ರಕ್ರಿಯೆ ಆರಂಭವಾಗಿಲ್ಲ. ಕೆರೆಗೆ ಕಲುಷಿತ ನೀರು ತಡೆಯುವ ಮಹತ್ವದ ಯೋಜನೆ ಬರೀ ಘೋಷಣೆಯಾಗಿಯೇ ಉಳಿದಿದೆ.

ಪ್ರತ್ಯೇಕ ಮಾರ್ಗ ಅಳವಡಿಸಿ: ಲಿಂಗಾಂಬುದಿ ಕೆರೆ ರಕ್ಷಣೆಗಾಗಿ ದಟ್ಟಗಳ್ಳಿ ಭಾಗದಿಂದ ಹರಿದು ಬರುವ ಒಳಚರಂಡಿ ನೀರು ಕೆರೆಗೆ ಸೇರದಂತೆ ಸುತ್ತಲೂ ಪ್ರತ್ಯೇಕ ಒಳ ಚರಂಡಿ ಮಾರ್ಗ ನಿರ್ಮಿಸಿ, ಆ ನೀರನ್ನು ದಳವಾಯಿ ಕೆರೆ ಕಡೆಗೆ ಹರಿಯುವಂತೆ ಮಾಡಬೇಕು ಎಂದು ಪರಿಸರವಾದಿಗಳು ಆಗ್ರಹಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಪರಿಮಳ & ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಪೊಲೀಸ್ ಕಂಪ್ಲೆಂಟ್ (ಕ) + ಮ್ಯಾಂಗೋ ಪಚ್ಚ (ಕ)	2+2 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಮಾವಿನ ಹಣ್ಣು ಸೇವಿಸಿದ ಬಳಿಕ ಅಸ್ವಸ್ಥ; ಸಹೋದರಿಯರು ಅನುಮಾನಾಸ್ಪದ ಸಾವು

ಬೀದರ್, ಜೂ.12– ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಶೆಂಬೆಳ್ಳಿ ಗ್ರಾಮದಲ್ಲಿ ಆಘಾತಕಾರಿ ಘಟನೆ ನಡೆದಿದ್ದು, ಮಾವಿನ ಹಣ್ಣು ಸೇವಿಸಿದ ಬಳಿಕ ಅಸ್ವಸ್ಥಗೊಂಡ ಇಬ್ಬರು ಸಹೋದರಿಯರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾರೆ.

ಮೃತ ಸಹೋದರಿಯರನ್ನು 17 ವರ್ಷದ ಭವಾನಿ ವೈಜಿನಾಥ ಮೇತ್ರೆ ಮತ್ತು 14 ವರ್ಷದ ಸಂಧ್ಯಾರಾಣಿ ಮೇತ್ರೆ ಎಂದು ಗುರುತಿಸಲಾಗಿದೆ.

ಮೃತ ಯುವತಿಯರು ಸೇರಿದಂತೆ ಕುಟುಂಬದ ಹಲವು ಸದಸ್ಯರು ಜೂನ್ 9ರಂದು ಮನೆಯಲ್ಲಿ ಊಟ ಮಾಡಿದ ಬಳಿಕ ಮಾವಿನ ಹಣ್ಣು ಸೇವಿಸಿದ್ದಾರೆ. ಬಳಿಕ ಹಲವರ ಆರೋಗ್ಯದಲ್ಲಿ ಏರುಪೇರಾಗಿದೆ. ತಾಯಿ ಇಂದುಮತಿ ಹಾಗೂ ಐವರು ಪುತ್ರಿಯರು ಮಾವಿನ ಹಣ್ಣು ಸೇವಿಸಿದ ಬಳಿಕ ವಾಂತಿ ಮತ್ತು ಭೇದಿಯಿಂದ ಅಸ್ವಸ್ಥಗೊಂಡಿದ್ದಾರೆ.

ತಕ್ಷಣ ಕುಟುಂಬದ ಎಲ್ಲಾ ಸದಸ್ಯರನ್ನು



ಹೈದರಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿ. ಆದರೆ ಚಿಕಿತ್ಸೆ ಫಲ ಕಾರಿಯಾಗದೆ ಭವಾನಿ ಮತ್ತು ಸಂಧ್ಯಾ ರಾಣಿ ಮೃತಪಟ್ಟಿದ್ದಾರೆ. ಇನ್ನೊಬ್ಬ ಸಹೋದರಿ ವಿಜಯಶ್ರೀ (19) ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ತಾಯಿ ಹಾಗೂ ಮತ್ತೊಬ್ಬ ಸಹೋದರಿ ಚೇತರಿಸಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಸಾವಿಗೆ ನಿಖರ ಕಾರಣ ಏನು ಎಂಬುದು ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕವೇ ತಿಳಿಯಲಿದೆ. ಈ ಸಂಬಂಧ ಹೈದರಾಬಾದ್‌ನ ನಾರಾಯಣಗುಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಮುಂದಿನ 7 ದಿನ ರಾಜ್ಯಾದ್ಯಂತ ಭಾರೀ ಮಳೆ

ಕರಾವಳಿಯಲ್ಲಿ ಜೂನ್ 15ರವರೆಗೆ ವರುಣನ ಆರ್ಭಟ; ಈ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

ಬೆಂಗಳೂರು, ಜೂ.12– ನೈರುತ್ಯ ಮುಂಗಾರು ಕರ್ನಾಟಕದಾದ್ಯಂತ ಚುರುಕುಗೊಂಡಿದ್ದು, ಮುಂದಿನ 7 ದಿನಗಳ ಕಾಲ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹಾಗೂ ಜೋರಾದ ಗಾಳಿ ಸಹಿತ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಈ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆಯು ರಾಜ್ಯದ ಹಲವು ಭಾಗಗಳಿಗೆ ಮಹತ್ವದ ಮುನ್ನೆಚ್ಚರಿಕೆಗಳನ್ನು ರವಾನಿಸಿದೆ. ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮುಂಗಾರು ಮಳೆ ತೀವ್ರ ಸ್ವರೂಪ ಪಡೆದುಕೊಳ್ಳಲಿದೆ. ಜೂನ್ 12ರಂದು (ಇಂದು) ಕರಾವಳಿಯ ಕೆಲವೆಡೆ ಭಾರಿಯಿಂದ ಅತಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ತದನಂತರ ಜೂನ್ 13ರಿಂದ ಜೂನ್ 15 ರವರೆಗೆ ಕರಾವಳಿಯಾದ್ಯಂತ ಸತತವಾಗಿ ಭಾರಿ ಮಳೆಯಾಗಲಿದ್ದು, ಗಂಟೆಗೆ 30ರಿಂದ 40 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸಲಿದೆ. ಕರಾವಳಿ ತೀರದ ಜನರಿಗೆ ಹಾಗೂ ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಮುನ್ನೆಚ್ಚರಿಕೆ ನೀಡಲಾಗಿದೆ.

ಉತ್ತರ ಒಳನಾಡುಗಳಾದ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಜೂನ್ 13ರವರೆಗೆ ಅಲ್ಲಲ್ಲಿ ಗುಡುಗು, ಮಿಂಚು ಮತ್ತು ಬಲವಾದ ಬಿರುಗಾಳಿ (ಗಂಟೆಗೆ 30–40 ಕಿ.ಮೀ.) ಸಹಿತ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಹೆಚ್ಚಿದೆ. ಇನ್ನು ದಕ್ಷಿಣ ಒಳನಾಡು ಮೈಸೂರು, ಮಂಡ್ಯ, ಕೊಡಗು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಮತ್ತು ರಾಮನಗರ ಜಿಲ್ಲೆಗಳಲ್ಲಿ ಜೂನ್ 13ರವರೆಗೆ ಮೋಡ ಕವಿದ ವಾತಾವರಣವಿರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗಲಿದೆ.

ರಾಜಧಾನಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಮುಂದಿನ ಕೆಲವು ದಿನಗಳ ಕಾಲ ಬೆಳಗ್ಗಿನ ಅವಧಿಯಲ್ಲಿ ಮೋಡ ಕವಿದ ವಾತಾವರಣವಿರಲಿದೆ. ಸಂಜೆ ಅಥವಾ ರಾತ್ರಿಯ ವೇಳೆಗೆ ನಗರದ ಹಲವು ಭಾಗಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದ್ದು, ತಾಪಮಾನದಲ್ಲಿ ಸ್ವಲ್ಪ ಮಟ್ಟಿಗೆ ಇಳಿಕೆ ಕಂಡುಬರಲಿದೆ. ಹವಾಮಾನ ಇಲಾಖೆಯು ಇಡೀ ರಾಜ್ಯಕ್ಕೆ ಒಟ್ಟಾರೆಯಾಗಿ ಹಳದಿ ಅಲರ್ಟ್ ಘೋಷಿಸಿದ್ದು, ಸಾರ್ವಜನಿಕರು ಸಿಡಿಲು ಮತ್ತು ಬಿರುಗಾಳಿಯ ಸಮಯದಲ್ಲಿ ಮರಗಳ ಕೆಳಗೆ ಅಥವಾ ವಿದ್ಯುತ್ ಕಂಬಗಳ ಬಳಿ ನಿಲ್ಲದೆ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆಯುವಂತೆ ಸೂಚಿಸಿದೆ.

ಬ್ರಾಹ್ಮಣ ಸಮುದಾಯವನ್ನು ಸಾಮಾಜಿಕವಾಗಿ ಬಲಿಷ್ಠಗೊಳಿಸಲು ನೂತನ ಸಮಿತಿ ರಚನೆ

ಮೈಸೂರು ನಗರ, ಜಿಲ್ಲಾ ಬ್ರಾಹ್ಮಣ ಸಂಘದ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾಹಿತಿ



ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ನೂತನ ಪದಾಧಿಕಾರಿಗಳಿಗೆ ಅಧ್ಯಕ್ಷ ಡಿ.ಟಿ.ಪ್ರಕಾಶ್ ನೇಮಕಾತಿ ಪತ್ರ ವಿತರಿಸಿದರು.

ಮೈಸೂರು, ಜೂ.12– ಮೈಸೂರಿನಲ್ಲಿ ಬ್ರಾಹ್ಮಣ ಸಮುದಾಯವನ್ನು ಸಾಮಾಜಿಕವಾಗಿ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ನೂತನ ಸಮಿತಿಯನ್ನ ರಚಿಸಲಾಗಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹೇಳಿದರು.

ನಗರದ ಸರಸ್ವತಿಪುರಂನಲ್ಲಿರುವ ಸಂಘದ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಸಂಘದ ವಿವಿಧ ಜವಾಬ್ದಾರಿ ಹೊಂದಿರುವ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಅವರು ಮಾತನಾಡಿದರು.

ಮೈಸೂರಿನಲ್ಲಿ ಬ್ರಾಹ್ಮಣ ಸಮುದಾಯವನ್ನ ಸಾಮಾಜಿಕವಾಗಿ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ನೂತನ ಸಮಿತಿಯನ್ನ ರಚಿಸಲಾಗಿದೆ. ಶಿಕ್ಷಣ, ಆರೋಗ್ಯ, ಉದ್ಯೋಗ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯ, ಸಹಕಾರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಪ್ರ ಸಮುದಾಯವರಿಗೆ ಬೆನ್ನುಲುಬಾಗಿ ನಿಲ್ಲುವುದರ ಜೊತೆಗೆ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗೆ ನೆರವಾಗಲು ವಿವಿಧ ಕಾರ್ಯಕ್ರಮಗಳನ್ನ ರೂಪಿಸಲಾಗುತ್ತಿದೆ. ಈ ಸಂಬಂಧ ಮೈಸೂರು ಜಿಲ್ಲಾ ವ್ಯಾಪ್ತಿಯ ಬ್ರಾಹ್ಮಣ ಸಂಘ ಸಂಸ್ಥೆಗಳು 9945266832ಕ್ಕೆ ಕರೆ ಮಾಡಿ, ಮಾಹಿತಿ ಪಡೆಯಬಹುದು ಎಂದು ತಿಳಿಸಿದರು.

ನೂತನ ಪದಾಧಿಕಾರಿಗಳು: ಕಾರ್ಯಕ್ರಮದಲ್ಲಿ 2026–27 ಸಾಲಿನ ಸಂಘದ ನೂತನ ಉಪಾಧ್ಯಕ್ಷರಾದ ಗೋಪಾಲ್ ರಾವ್, ಕೆ.ಆರ್.ಸತ್ಯನಾರಾಯಣ್, ಎಂ.ಆರ್.ಬಾಲಕೃಷ್ಣ, ಡಾ.ಲಕ್ಷ್ಮೀದೇವಿ, ರಾಜಗೋಪಾಲ್, ಕಡಕೋಳ ಜಗದೀಶ್, ರವಿ ಶಾಸ್ತ್ರಿ, ಪ್ರಧಾನ ಕಾರ್ಯದರ್ಶಿ ವಿ.ಹರೀಶ್, ಸಂಘಟನಾ ಕಾರ್ಯದರ್ಶಿಗಳಾದ ಸೌಭಾಗ್ಯ ಮೂರ್ತಿ, ಎಸ್.ರಂಗನಾಥ, ಸುರೇಶ್, ಕೆ.ಎಂ.ನಿಶಾಂತ್, ಅಜಯ್ ಶಾಸ್ತ್ರಿ, ಕಲ್ಕೆರೆ ನಾಗರಾಜ್, ಖಜಾಂಚಿಗಳಾದ ಎಂ.ಎ.ಸುಮ, ಮಂಜುನಾಥ, ಜಂಟಿ ಕಾರ್ಯದರ್ಶಿಗಳಾದ ಜ್ಯೋತಿ, ಲತಾ ಬಾಲಕೃಷ್ಣ ಟಿ.ಎಸ್. ಅರುಣ್ ಹಾಗೂ ಮಾಧ್ಯಮ ಸಂಚಾಲಕ ವಿಕ್ರಮ್ ಅಯ್ಯಂಗಾರ್ ಅವರಿಗೆ ನೇಮಕಾತಿ ಪತ್ರ ವಿತರಿಸಿ, ಅಭಿನಂದಿಸಲಾಯಿತು.

ಜೂ.19 ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ

ಮೈಸೂರು, ಜೂ.12(ಜಿಎ)– ಮೈಸೂರಿನ ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಮತ್ತು ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾ ವಿದ್ಯಾಲಯದ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗಾಗಿ ಜೂ.19ರಂದು ಕಲಾನಿಕೇತನ ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಲೆಯನ್ಸ್ ಕ್ಲಬ್‌ನ ಜಿಲ್ಲಾ ರಾಜ್ಯಪಾಲ ಮಹಾಬಲೇಶ್ವರ ಭೈರಿ ಈ ವಿಷಯ ತಿಳಿಸಿ, ಅಂದು 9ರಿಂದ 15 ವರ್ಷದ ಮಕ್ಕಳಿಗೆ ಸ್ಪರ್ಧೆಯನ್ನು ಆಯೋಜಿಸಿದ್ದು, 'ಇನ್‌ಸ್ಪ್ರೈಡ್ ಬೈ ನೇಚರ್ ಫಾರ್ ಕ್ಲೈಮೇಟ್ ಫಾರ್ ಅವರ್ ಫ್ಯೂಚರ್' ವಿಷಯ ಕುರಿತು ಪರಿಸರದ ಬಗ್ಗೆ ಚಿತ್ರಿಸಬೇಕು. ಅಗತ್ಯ ಪರಿಕರಗಳನ್ನು ನೀಡಲಾಗುವುದು. ವಿಜೇತರಿಗೆ ನಗದು ಬಹುಮಾನ ನೀಡಲಾಗುತ್ತದೆ ಎಂದರು.

ಈ ಸ್ಪರ್ಧೆಯಲ್ಲಿ ವಿಜೇತರಾದ ಪ್ರಥಮ, ದ್ವಿತೀಯ, ತೃತೀಯ ಹಾಗೂ ನಾಲ್ಕು ಸಮಾಧಾನಕರ ಬಹುಮಾನ ಪಡೆದ ಮಕ್ಕಳನ್ನು ಮುಂದಿನ ದಿನಗಳಲ್ಲಿ ನಡೆಯುವ ಅಂತರರಾಷ್ಟ್ರೀಯ ಮಟ್ಟದ ಚಿತ್ರಕಲಾ ಸ್ಪರ್ಧೆಗೆ ಕಳುಹಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 9743777471 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿ.ಚಿಕ್ಕಣ್ಣ, ಶ್ವೇತಾ ದಿನೇಶ್, ಗಂಗಾಧರಪ್ಪ ಉಪಸ್ಥಿತರಿದ್ದರು.

ಹಿರಿಯ ನಾಗರಿಕರಿಗೆ ವಿವಿಧ ಸ್ಪರ್ಧೆ

ಮೈಸೂರು, ಜೂ.12–ಸ್ವರಾಂಜಲಿ ತಂಡದ ವತಿಯಿಂದ ಹಿರಿಯ ನಾಗರಿಕರಿಗಾಗಿ ಜೂ.14 (ಭಾನುವಾರ)ರಂದು ಕರಕುಶಲ ಸ್ಪರ್ಧೆ, ಜೂನ್ 28ಕ್ಕೆ ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸಲಾಗಿದೆ. ಮಾಹಿತಿಗಾಗಿ ಜೀವನ್ ಕುಮಾರ್: 9986230050, ಮಧುಸೂದನ್: 8105367458 ಸಂಪರ್ಕಿಸುವಂತೆ ಕೋರಲಾಗಿದೆ.

ಪರಿಸರ ಸಂರಕ್ಷಣೆಗೆ ಈಗ ಎಲ್ಲರೂ ಪಣ ತೊಡಬೇಕು

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಸಲಹೆ



ಮೈಸೂರು ಮಹಾರಾಜ ಕಾಲೇಜು ಆವರಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಆಯೋಜಿಸಿದ್ದ ಗಿಡನೆಡುವ ಕಾರ್ಯಕ್ರಮಕ್ಕೆ ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು.

ಮೈಸೂರು,ಜೂ.12(ಎಂಟಿವೈ)– ಆಮ್ಲಜನಕ ಪೂರೈಸುವ ಗಿಡ–ಮರಗಳ ಸಂರಕ್ಷಣೆ ಅನಿವಾರ್ಯವಾಗಿದ್ದು, ಎಲ್ಲರೂ ಪರಿಸರ ಸಂರಕ್ಷಣೆಗೆ ಪಣ ತೊಡಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಆವರಣದಲ್ಲಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ವತಿಯಿಂದ ಪತ್ರಿಕೋದ್ಯಮಿ ರಾಜಶೇಖರ ಕೋಟಿ ಅವರ ಸ್ಮರಣೆ ಹಾಗೂ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರ ಸಮತೋಲನ ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆ ಈಗ ಹೆಚ್ಚಾಗಿದೆ. ಪರಿಸರ ಹಾನಿಯಿಂದಾಗಿ ವಾತಾವರಣದಲ್ಲಿ ಏರುಪೇರಾಗುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಹವಾಮಾನ ವೈಪರಿತ್ಯ ತಡೆಗೆ ಪರಿಸರ ಸಂರಕ್ಷಣೆಯೊಂದಿಗೆ ಗಿಡ–ಮರಗಳ ಸಂರಕ್ಷಣೆಯೂ ಅನಿವಾರ್ಯವಾಗಿದೆ. ಎಲ್ಲರಲ್ಲೂ ಪರಿಸರದ ಮೇಲಿನ ಕಾಳಜಿ ಹೆಚ್ಚಾಗಬೇಕು. ಪರಿಸರ ದಿನಾಚರಣೆ ಅಂಗವಾಗಿ ನಾವು ಎಷ್ಟು ಗಿಡನೆಟ್ಟಿದ್ದೇವೆ ಎಂದು ಹೇಳಿಕೊಳ್ಳುವುದಕ್ಕಿಂತ ನೆಟ್ಟಿರುವ ಗಿಡಗಳ ಬಗ್ಗೆ ಎಷ್ಟರ ಮಟ್ಟಿಗೆ ಕಾಳಜಿ ವಹಿಸಿ, ಅವುಗಳನ್ನು ಪೋಷಿಸುತ್ತಿದ್ದೇವೆ ಎಂದು ನೋಡಿಕೊಳ್ಳುವುದು ಮುಖ್ಯ ಎಂದರು.

ನಾನೆಟ್ಟ ಮಾವು ಫಲ ನೀಡುತ್ತಿದೆ: ನಾನು ವಿದ್ಯಾರ್ಥಿನಿಯಾಗಿದ್ದಾಗ ಕುವೆಂಪು ನಗರ ಮಹಿಳೆಯರ ಬಿಸಿಎಂ ಹಾಸ್ಟೆಲ್‌ನ ರೂಮ್ ನಂ.7ರಲ್ಲಿದ್ದೆ. ಒಮ್ಮೆ ಮಾವಿನ ಹಣ್ಣು ತಿಂದು, ಅದರ ವಾಟೆಯನ್ನು ಹಾಸ್ಟೆಲ್ ಆವರಣದಲ್ಲೇ ಹೂತಿದ್ದೆ. ಅದು ಮೊಳಕೆಯೊಡೆದು ಗಿಡವಾಗಿತ್ತು. ಮೂರು ವರ್ಷದ ನಂತರ ಕಟ್ಟಡಕ್ಕೆ ಅಡ್ಡವಾಗಿದ್ದ ಆ ಸಸಿಯನ್ನು ಸ್ಥಳಾಂತರಿಸಲಾಗಿತ್ತು. ಇಂದು ಅದು ದೊಡ್ಡ ಮರವಾಗಿ ಬೆಳೆದಿದ್ದು, ಹಣ್ಣುಗಳು ಬಿಡುತ್ತಿದೆ. ಈ ಹಣ್ಣುಗಳನ್ನು ವಿದ್ಯಾರ್ಥಿನಿಯರು ತಿನ್ನುತ್ತಿದ್ದಾರೆ. ಇದನ್ನು ಕಂಡು ತುಂಬಾ ಸಂತೋಷವಾಯಿತು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಡಿಸಿಪಿ ಕೆ.ಎಸ್. ಸುಂದರರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ವಿ. ಷಣ್ಮುಗಂ, ಮೈವಿವಿ ಸಂಜೆ ಕಾಲೇಜಿನ ಪ್ರೊ.ಕೆ. ತಿಮ್ಮಯ್ಯ, ಮಹಾರಾಜ ಕಾಲೇಜಿನ ಆಡಳಿತಾಧಿಕಾರಿ ಪ್ರೊ. ಗೋವಿಂದರಾಜು, ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್ ಗೌಡ, ಎಂಎಂಟಿಟಿಸಿ ನಿರ್ದೇಶಕಿ ಪ್ರೊ.ಹೆಚ್.ಪಿ. ಜ್ಯೋತಿ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಕೆ. ಮಂಟೇಲಿಂಗು, ತೋಟಗಾರಿಕೆ ವಿಭಾಗದ ಉಪ ನಿರ್ದೇಶಕ ಎನ್. ಚಲುವೇಶ್, ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಅಧ್ಯಕ್ಷ ಆರ್. ವಾಸುದೇವ, ಡಾ. ಮದಿಅಳಗನ್, ಪ್ರೊ.ಕೆ. ಸೌಭಾಗ್ಯವತಿ, ದಯಾನಂದ್, ಬಸವರಾಜು, ವೇದಿಕೆಯ ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಸಹ ಕಾರ್ಯದರ್ಶಿ ಯೋಗೇಶ್, ಖಜಾಂಚಿ ಗಣೇಶ್, ನಿರ್ದೇಶಕರಾದ ಡಾ.ನವೀನ್ ಕುಮಾರ್, ಚಿದಾನಂದ, ಅಭಿಷೇಕರ್, ವಿಜಯ್ ಪಾಲ್ಗೊಂಡಿದ್ದರು.

ಭಾರೀ ಮಳೆಯಿಂದ ಚರಂಡಿ ನೀರಿನೊಂದಿಗೆ ಕೊಚ್ಚಿಕೊಂಡು ರಸ್ತೆಗೆ ಬಂದ ಹೆಣ್ಣು ಭ್ರೂಣ

ಗರ್ಭಪಾತ ಅಥವಾ ಅಕ್ರಮ ಗರ್ಭಧಾರಣೆಯ ಶಂಕೆ ವ್ಯಕ್ತಪಡಿಸಿರುವ ಪೊಲೀಸರು

ಮೈಸೂರು, ಜೂ.12(ಜಿಎ)–ಮೈಸೂರು ನಗರದಲ್ಲಿ ಗುರುವಾರ ಸಂಜೆ ಹಲವೆಡೆ ಭಾರೀ ಮಳೆಯಾಗಿದ್ದು, ಮಳೆ ಮತ್ತು ಒಳಚರಂಡಿ ನೀರಿನೊಂದಿಗೆ ಹೆಣ್ಣು ಭ್ರೂಣವೊಂದು ಕೊಚ್ಚಿಕೊಂಡು ಬಂದಿರುವ ಅಮಾನವೀಯ ಘಟನೆ ಸಂಭವಿಸಿದ್ದು, ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ.

ಭಾರೀ ಮಳೆಯಿಂದ ಒಳಚರಂಡಿಗಳಲ್ಲಿ ನೀರಿನ ಒತ್ತಡ ಹೆಚ್ಚಾಗಿ, ಸುಮಾರು ನಾಲ್ಕು ತಿಂಗಳ ಹೆಣ್ಣು ಭ್ರೂಣವು ನಗರದ ಬಡಾ ಮಕಾನ್ ಮುಖ್ಯರಸ್ತೆಯಲ್ಲಿ ಪತ್ತೆಯಾಗಿದೆ.

ಭ್ರೂಣವನ್ನು ಕಂಡ ಸ್ಥಳೀಯ ನಿವಾಸಿಗಳು ಬೆಚ್ಚಿಬಿದ್ದು ತಕ್ಷಣ ನರಸಿಂಹರಾಜ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಪೊಲೀಸರು ಭ್ರೂಣವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಿದ್ದಾರೆ.

ಗರ್ಭಪಾತದ ನಂತರ ಭ್ರೂಣವನ್ನು ತ್ಯಜಿಸಿರುವ ಅಥವಾ ಅಥವಾ ಅಕ್ರಮ ಗರ್ಭಧಾರಣೆ ಬಳಿಕ ಒಳಚರಂಡಿಗೆ ಎಸೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕವೇ ಘಟನೆಯ ನಿಜಾಂಶ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸುಮಾರು ಐದು ದಿನಗಳ ಹಿಂದೆ ಭ್ರೂಣವನ್ನು ಒಳಚರಂಡಿಗೆ ಹಾಕಿರಬಹುದೆಂದು ಅಂದಾಜಿಸಲಾಗಿದೆ. ಈ ಸಂಬಂಧ ಎನ್.ಆರ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ದಾಖಲಾದ ಮಳೆ ಪ್ರಮಾಣ : ಮೈಸೂರು ನಗರದ ಕೆಲವು ಭಾಗಗಳಲ್ಲಿ ಭಾರೀ ಮಳೆಯಾಗಿದ್ದರೆ, ಇನ್ನೂ ಕೆಲವು ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ಮಾಹಿತಿಯ ಪ್ರಕಾರ, ಕಳೆದ 24 ಗಂಟೆಗಳಲ್ಲಿ ಮೈಸೂರು ನಗರದಲ್ಲಿ 31 ಮಿ.ಮೀ.ಯಿಂದ 41 ಮಿ.ಮೀ.ವರೆಗೆ ಮಳೆಯಾಗಿದೆ. ನಗರದ ಸುತ್ತಮುತ್ತಲಿನ ಪ್ರದೇಶಗಳಾದ



ಹೆಣ್ಣು ಭ್ರೂಣ ಸಿಕ್ಕಿತೆನ್ನಲಾದ (ವೃತ್ತಾಕಾರ) ಸ್ಥಳ

ಸಿದ್ದಲಿಂಗಪುರದಲ್ಲಿ 49 ಮಿ.ಮೀ., ರಾಮನಹಳ್ಳಿಯಲ್ಲಿ 41 ಮಿ.ಮೀ., ಅಲನಹಳ್ಳಿಯಲ್ಲಿ 31 ಮಿ.ಮೀ. ಹಾಗೂ ಹಂಚ್ಯದಲ್ಲಿ 28.5 ಮಿ.ಮೀ. ಮಳೆಯಾಗಿದೆ.

ಬೋಗಾದಿ, ರಾಮಕೃಷ್ಣನಗರ, ಹೆಬ್ಬಾಳ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕೂಡ ಭಾರೀ ಮಳೆ ಸುರಿದಿದೆ. ಕೆ.ಆರ್.ವೃತ್ತ ಹಾಗೂ ಚಾಮರಾಜ ವೃತ್ತದ ಸುತ್ತಮುತ್ತ ರಸ್ತೆಗಳಲ್ಲಿ ಮಳೆ ನೀರು ತುಂಬಿ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಮೇಟಗಳ್ಳಿಯಲ್ಲಿ ಬೃಹತ್ ಮರದ ಕೊಂಬೆಗಳು ರಸ್ತೆಗೆ ಅಡ್ಡವಾಗಿ ಬಿದ್ದಿದ್ದು, ಮಹಾನಗರ ಪಾಲಿಕೆಯ ಅಭಯ ತಂಡ ಅವುಗಳನ್ನು ತೆರವುಗೊಳಿಸಿದರು.

WANTED DRIVERS

Contact:
Mob: 87227 11352

REQUIRED LAND FOR PURCHASE

Require 2 to 3 acres of land in Mysore for warehouse purpose close to highway.

Contact:
636 6236 307
948 0834 448

REQUIRED

1) Marketing Executive
Bike & D/L - Male
2) Accountant - A/Cs purpose
Tally Fresher - Ladies
9886656737

ಮುಡಾ /ಎಂಡಿಎ ಅಪ್ರೂವ್ಡ್ ನಿವೇಶನಗಳು ಮಾರಾಟಕ್ಕಿವೆ

ಇನ್ಫೋಸಿಸ್ ಹಿಂಭಾಗ, ಮೈಸೂರು
20x30 30x40 & 30x50
ಎಲ್ಲಾ ದಿಕ್ಕುಗಳ ನಿವೇಶನಗಳು ಲಭ್ಯವಿದೆ.
ರೂ. 3500/- ಚದರ ಅಡಿ. ನೆಗೋಶಿಯಬಲ್
9900466811
Mob: 9686573798
9972297217

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಸಹ ಮಾಲೀಕರುಗಳಾದ ಲೇಟ್ ಪುಟ್ಟರಾಜೇಗೌಡ ರವರ ಮಕ್ಕಳು 1] ಶ್ರೀ. ವೆಂಕಟರಾಜ, 2] ಶ್ರೀ. ರವೀಂದ್ರ ಮತ್ತು 3] ಶ್ರೀ. ಹೆಚ್.ಪಿ. ಮಂಜುನಾಥ ರವರು ನನ್ನ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 [ಏಳು] ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ರಾಂಪುರ ಗ್ರಾಮದಲ್ಲಿರುವ ಖುಷ್ಕಿ ಜಮೀನಿನ ಸರ್ವೆ ನಂ. 194/1, ರಲ್ಲಿ, ಒಟ್ಟು ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ಕಬಿನಿ ನದಿ, ಪಶ್ಚಿಮಕ್ಕೆ : ಸರ್ವೆ ನಂ. 194/2 ರ ಜಮೀನು, ಉತ್ತರಕ್ಕೆ : ರಸ್ತೆ & ಕಾಲುವೆ ಮತ್ತು ದಕ್ಷಿಣಕ್ಕೆ : ಕಬಿನಿ ನದಿ.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ಚೆನ್ನಮ್ಮ ಕೋಂ ಕೆಂಡಗಣ್ಣಯ್ಯ, ಮಾರಗೌಡನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಇವರ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ಕಕ್ಷಿದಾರರು ಮೈಸೂರಿನ ಮಾನ್ಯ ಐದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 1048/2025 ರ ರೀತ್ಯಾ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ಷೆಡ್ಯೂಲ್ ಸ್ವತ್ತನ್ನು ಯಾರಿಗೂ ಪರಭಾರೆ ಮಾಡದಂತೆ ಮಾನ್ಯ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು, ಸದರಿ ದಾವೆಯು ವಿಚಾರಣಾ ಹಂತದಲ್ಲಿರುತ್ತದೆ. ಆದ ಕಾರಣ ಯಾವುದೇ ವ್ಯಕ್ತಿಗಳಾಗಲಿ ಅಥವಾ ಯಾವುದೇ ಖಾಸಗಿ ಸಂಸ್ಥೆಯಾಗಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಖರೀದಿ ಅಥವಾ ಇನ್ನ್ಯಾವುದೇ ಪ್ರಕ್ರಿಯೆಗಳನ್ನು ಕೈಗೊಳ್ಳಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಒಂದು ವೇಳೆ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಕ್ರಯ, ಕರಾರು, ಭೋಗ್ಯ, ದಾನ, ರಿಲೀಸ್, ವ್ಯವಸ್ಥಾ ಇತ್ಯಾದಿ ದಾಖಲಾತಿಗಳನ್ನು ಮಾಡಿಕೊಂಡಲ್ಲಿ ಅಂತಹ ದಾಖಲಾತಿಗಳು ಕಾನೂನು ಪ್ರಕಾರ ಊರ್ಜಿತವಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಹೊಸ ಸರ್ವೆ ನಂಬರ್ 97/3 (ಹಳೇ ಸರ್ವೆ ನಂಬರ್ 97/2ಎ) ಇದರ ವಿಸ್ತೀರ್ಣ 17 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ –ಖಾಸಗಿ ಬಡಾವಣೆ, ಪಶ್ಚಿಮಕ್ಕೆ –ಹೊಂಬಾಳಮ್ಮ ಮತ್ತು ಸಿದ್ದರಾಮೇಶ್ವರ ದೇವಸ್ಥಾನಗಳಿಗೆ –ಸೇರಿದ ಜಮೀನು, ಉತ್ತರಕ್ಕೆ ಮಾಲೇಗೌಡರ ಜಮೀನು, ದಕ್ಷಿಣಕ್ಕೆ –ಮಲ್ಲಮ್ಮರವರ ಜಮೀನು

ಸಹಿ/– ಶ್ರೀನಿವಾಸ್ ವಿ.ಜಿ. ಬಿ.ಎ., ಎಲ್.ಎಲ್.ಬಿ
ನಂ: 2514/a1, ಸಿಎಚ್–38/1, 2ನೇ ಹಂತ,
ಕಾಂತರಾಜ್ ಅರಸ್ ರಸ್ತೆ, ಕೆ.ಜಿ ಕೊಪ್ಪಲ್,
ಮೈಸೂರು: 570009. ಮೊ: 9845172688

Sri Adichunchanagiri Shikshana Trust ®

BGS PU COLLEGE

Kuvempunagar, Mysuru

K-CET TOPPERS - 2026

VISHVAJIT S Rank 285	RAGHAV M M Rank 304	GOWRI KANTHARAJU Rank 480	SIDDARTHA S RAJ Rank 558
HARSHITHA H Rank 569	SANJANA S Rank 613	HAASINI V Rank 840	ASFIYA SAMREEN Rank 957
THUSHIKA MALIGE B M Rank 1301	C V PRAJAN Rank 1312	SHUBHI SHRIVASTAV Rank 1363	VARSHA M Rank 1439
SANJANA Y Rank 1584	NIHARIKA J Rank 1608	CHAITHRA Rank 1850	VIKAS O P Rank 1917

Registration Open for I & II PUC in Academic Year 2027-2028 Batch

Hostel facilities for Boys & Girls

Transportation facilities available from Gaddige, Gungralchatra, KRS Srirangapatna, Bannur, T. Narasipura, Nanjanagudu and Mysuru Entire City

Dr. R.S.Narasegowda M.Sc, Ph.D. Mob : 99646 44060 Administrative officer, BGS College, Mysore

For More details : 6361581460 / 98453 76685 / 77603 89498

---

mahindra TOUGH HURDUM

ಭಾರತದ ನಂ.1 ಬ್ರ್ಯಾಂಡ್ ಮಹಿಂದ್ರಾದಲ್ಲಿ ಮಾರಾಟ ಪ್ರತಿನಿಧಿಗಳ ನೇಮಕಾತಿ!



ಕೆಳಗಿನ ತಾಲ್ಲೂಕುಗಳಿಗೆ ಬೇಕಾಗಿದ್ದಾರೆ:
- ಟಿ.ನರಸೀಪುರ ತಾಲ್ಲೂಕು
- ನಂಜನಗೂಡು ತಾಲ್ಲೂಕು
- ಹುಣಸೂರು ತಾಲ್ಲೂಕು
- ಮೈಸೂರು ತಾಲ್ಲೂಕು

ಆಕರ್ಷಕ ವೇತನ ಹಾಗೂ ಪ್ರೋತ್ಸಾಹಕಗಳು ಉತ್ತಮ ಆದಾಯ ಅವಕಾಶ!

ನಾವು ನೀಡುವ ಪ್ರಯೋಜನಗಳು
- ಆಕರ್ಷಕ ವೇತನ
- ಹೆಚ್ಚುವರಿ ಮಾರಾಟಕ್ಕೆ ಆಕರ್ಷಕ ಪ್ರೋತ್ಸಾಹಕಗಳು
- ಪ್ರದರ್ಶನ ಆಧಾರಿತ ಬೋನಸ್
- ತರಬೇತಿ ಮತ್ತು ಬೆಂಬಲ
- ಉತ್ತಮ ಬೆಳವಣಿಗೆ ಅವಕಾಶ

ಅವಶ್ಯಕತೆ: ಬೈಕ್ ಕಡ್ಡಾಯ

ಆಸಕ್ತರು ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ:
7022291862 / 7349770271
ಡೀಲರ್‌ಶಿಪ್ ಹೆಸರು : ಸಿಂಧುಜಾ ಟ್ರಾಕ್ಟರ್ಸ್, ಮೈಸೂರು
ಉಜ್ವಲ ಭವಿಷ್ಯ ನಿಮ್ಮದಾಗಲಿ! ಇಂದೇ ಸಂಪರ್ಕಿಸಿ!

HOUSE FOR SALE

3BHK DUPLEX
45x55 ft - N/F
Prime Location Yadavagiri
Hanu Reddy Realty®
9972256545 / 9845601278
www.hanureddyrealty.com

SITE FOR SALE

In Nanjangud Town
YASHWANTH ENCLAVE
Muda Approved, Bank Loan Avaliable. Site Dimension
30x40 30x50
Commercial Site Available
9880547085

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರು ಕೆಳಗಿನ ಅನುಸೂಚಿಯಲ್ಲಿರುವ ಸ್ವತ್ತನ್ನು ಶ್ರೀ.ಎ.ನಾಗರಾಜ್‌ರವರ ಧರ್ಮಪತ್ನಿ ಶ್ರೀಮತಿ.ಎ.ಸಂಧ್ಯಾ ನಾಗರಾಜ್‌ರವರಿಂದ ಖರೀದಿಸಲು ಆಸಕ್ತಿ ಉಳ್ಳವರಾಗಿರುತ್ತಾರೆ.

ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಕ್ರಯ, ದಾನ, ಭೋಗ್ಯ, ಅಡಮಾನ ಅನುವಂಶೀಯತೆ, ವಿಲ್, ಪಾಲುದಾರಿಕೆ, ಬಾಡಿಗೆ, ಪರವಾನಗಿ ಅಥವಾ ಮತ್ತ್ಯಾವುದೇ ರೀತಿಯಲ್ಲಿ ಮೇಲೆ ಹೇಳಿದ ದಾಖಲಾತಿ ಮತ್ತು ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಈ ದಿನದಿಂದ 14 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವ ಆಸಕ್ತಿ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಅನಸೂಚಿ ಸ್ವತ್ತು

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮಕ್ಕೆ ಸೇರಿದ ಸರ್ವೇ ನಂ.279/2ರ 3 ಎಕರೆ 20 ಗುಂಟೆ ಜಮೀನಿನ ಸ್ವತ್ತಿಗೆ ಚೆಕ್ಕುಬಂದಿ, ಪೂರ್ವಕ್ಕೆ : ಶ್ರೀ.ಬಸವೇಗೌಡರವರ ಜಮೀನು, ಪಶ್ಚಿಮಕ್ಕೆ : ಶ್ರೀ.ರಾಜಗೋಪಾಲ್‌ರವರ ಜಮೀನು, ಉತ್ತರಕ್ಕೆ : ಪಾತ್‌ವೇ, ದಕ್ಷಿಣಕ್ಕೆ : ಹಳ್ಳ ಮತ್ತು ಸರ್ಕಾರಿ ಜಮೀನು

ಸಹಿ/– ಶ್ರೀ.ಎಮ್.ಎಸ್.ಜಿನಚಂದ್ರನ್,
ವಕೀಲರು #1206/A, CH-31/A,
1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ,
ಬಲ್ಲಾಳ್ ವೃತ್ತದ ಹತ್ತಿರ, ಚಾಮರಾಜಪುರಂ,
ಮೈಸೂರು–570005.
ದಿನಾಂಕ: 11.06.2026, ಸ್ಥಳ: ಮೈಸೂರು

ಹಸಿರು ನಮ್ಮ ಉಸಿರು

PUBLIC NOTICE

Under the instructions of my client Chandru R son of Late.Rajashekar, resident of # 37, 4th Main E & F Block, Ramakrishnanagara, Chamaraja Mohalla, Mysuru, intends to purchase the below mentioned properties from **Sri.M.V.Subbaiah**, son of Late.Mada Venkatasubbaiah, Aged about 70 years, residing at # 2702, Sri Balaji Nilayam, 17th Main, 3rd Cross, Vijayanagara II stage, Mysuru 570 017, which is morefully described in the schedule for valuable consideration from one Smt. Sulochana i.e., **Item No.1** through a registered sale deed dated 30.01.2023 and the same was registered as document No.MYN-1-10591-2022-23 in CD No. MYND-1431 of Book-I before the Sub-Registrar, Mysuru North, Mysuru and **item No.2** through a registered sale deed dated 30.01.2023 and the same was registered as document No.MYN-1-10590-2022-23 in CD No.MYND-1431 of Book-I before the Sub-Registrar, Mysuru North, Mysuru. Therefore, if there be any person/s who has/have any specific interest or vested interest or acquired or ascribed interest, title or otherwise any kind of right of any nature whatsoever and anyone who knows that this sale should not occur for any reason within the frame of law, or those who know that this sale should not materialize as it may affect any other person may write to the under signed, intimating in detail, the right to claimed or the objections that may be in existence, along with supporting documents within seven days from the date of this publication. Any false information or subversive objections if raised with malafide, they shall be attracting action under law. This is for the information of the public in general.

SCHEDULE

Item No.: 1. All the piece and parcel of the residential vacant site bearing site No.**10A-A measuring East to West (21.40 + 16.42)2 meters and North to South 9.14 meters totally measuring 172.83 square meters, as per E-katha the property bearing No.336439492 Document No. 27082997 of Ward No.19 issued by Mysuru City Corporation dated 04.06.2026** carved out in the residential layout formed and developed in alienated survey No.118/2 measuring 1 acre 21 guntas out of 2 acres 01 guntas situated at Dattagalli village, Kasaba Hobli, Mysuru Taluk and District, bounded on:- East by : Site No.10, West by: 9.00 meter Road, North by: Site Nos 2 & 1, South by: Site No.10A-B. **Item No.2**:- All the piece and parcel of the residential vacant site bearing site No.**10A-B measuring East to West (16.42 + 11.43)2 meters and North to South 9.14 meters totally measuring 127.27 square meters, as per E-katha the property bearing No.7005617841 Document No. 27083010 of Ward No.19 issued by Mysuru City Corporation dated 04.06.2026** carved out in the residential layout formed and developed in alienated survey No.118/2 measuring 1 acre 21 guntas our of 2 acres 01 guntas situated at Dattagalli village, Kasaba Hob li, Mysuru Taluk and District, bounded on:- East by: Site No.10, West by: 9.00 meter Road, North by: Site Nos 10A-A, South by : 9.00 meter Road. In total both item No.1 and 2 measures 300.06 square meters i.e., 3229.91 square feet.

Advocate: Manjukumar Y.N., B.A.L.LL.B., Anupama H.S B.A.LL.B., Advocates, # 693/D., B.B Garden Road, Near Padma Talkes, Agrahara, K.R Mohalla, Mysuru. ph.no. 9448554271

Place: Mysuru Date: 12-06-2026

SCHOOL 10X CREATED BY INDUS ENABLED BY MALAVALLI

ಭಾರತದ ಅತ್ಯಂತ ಕೈಗೆಟುಕುವ ಪ್ರೀಮಿಯಂ - IB ಕಾರ್ಯಕ್ರಮ

IN OMNIA PARATUS INDUS TRUST

10X ಇಂಟರ್‌ನ್ಯಾಷನಲ್ ಸ್ಕೂಲ್, ಮೈಸೂರು

ವಿದ್ಯಾರ್ಥಿಗಳ ಉಜ್ವಲ ಭವಿಷ್ಯವನ್ನು ನಿರ್ಮಿಸುವ ಅತ್ಯುತ್ತಮ ಶಾಲೆ.

6 ರಿಂದ 12 ನೇ ತರಗತಿಗಳಿಗೆ ಪ್ರವೇಶಗಳು ಪ್ರಾರಂಭವಾಗಿವೆ

- ಪ್ರೀಮಿಯಂ ಬೋರ್ಡಿಂಗ್ ಸೌಲಭ್ಯಗಳು
- ಅಂತರಾಷ್ಟ್ರೀಯ ಪಠ್ಯಕ್ರಮ
- JEE/NEET/CUET/SAT ತಯಾರಿ
- STEAM-H ಕಲಿಕೆ
- ಸಹಯೋಗದ ಕಲಿಕಾ ಸ್ಥಳಗಳು
- ನಾವೀನ್ಯತೆಯಿಂದ ಕೂಡಿರುವ ತರಗತಿ ಕೊಠಡಿಗಳು ಮತ್ತು ಪ್ರಯೋಗಾಲಯಗಳು



ಅರ್ಹತೆ ಆಧಾರಿತ ಸ್ಕಾಲರ್‌ಶಿಪ್

ಶೈಕ್ಷಣಿಕ ವರ್ಷದ ಆರಂಭ ಆಗಸ್ಟ್ 2026

+91 82966 08340/+91 91873 63687 | www.10xmysuru.org
ನಂ. 11, 11ಎ, ಮಾನಂತವಾಡಿ ರಸ್ತೆ, ವಿದ್ಯಾರಣ್ಯಪುರ, ಮೈಸೂರು

ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಡಾ. ಬಿ.ಜೆ.ವಿಜಯಕುಮಾರ್ ಅವರಿಗೆ ಜನುಮದಿನದ ಶುಭಾಶಯಗಳು



ಶುಭಕೋರುವವರು : ನಂದೀಶ್ ಎನ್. ವಕೀಲರು ಪವನ್ ಸಿದ್ಧರಾಮ

ಮೈಸೂರು–ಹುಣಸೂರು ರಸ್ತೆ
30x50 ಸೈಟುಗಳು ಮಾರಾಟಕ್ಕಿದೆ
ಕೇವಲ ₹1600 Per Sq.ft
Call:7483338488

47 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಸನೀಯವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ದಾಖಲಾತಿಗಳು ಕಳೆದಿವೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಶ್ರೀ ಎ. ಆರ್ ಅಳಗಪ್ಪನ್‌ರವರ ಮಾಲೀಕತ್ವದ ಸ್ವತ್ತುಗಳಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟ ಜಂಜರ್ ನಂ. 5 (ಸರ್ವೆ. ನಂ. 66)ರ ವಿಸ್ತೀರ್ಣ 16390 ಚದರ ಮೀಟರ್ ಹಾಗೂ ಜಂಜರ್ ನಂ. 5 (ಸರ್ವೆ. ನಂ. 65/1, 65/2)ರ ವಿಸ್ತೀರ್ಣ 6005 ಚದರ ಮೀಟರ್‌ವುಳ್ಳ ಸ್ವತ್ತಿಗೆ ಸಂಬಂಧಿಸಿದ ಕೆ.ಐ.ಎ.ಡಿ.ಬಿ ಯಿಂದ ನೀಡಲ್ಪಟ್ಟ ಮೂಲ ಸ್ವಾಧೀನ ಪತ್ರ ಮತ್ತು ಇತರ ಮೂಲ ದಾಖಲಾತಿಗಳು ಹಾಗೂ ಮೈಸೂರು ಸಿಟಿ, ವಿವಿ ಮೊಹಲ್ಲಾ 1ನೇ ಮುಖ್ಯರಸ್ತೆ, ಬ್ಲಾಕ್ 5 (ಎ) ಸ್ವತ್ತಿನ ಸಂಖ್ಯೆ 38/3 (ಹಳೇ ಸಂಖ್ಯೆ: 56/2) ರಲ್ಲಿ ಕಟ್ಟಡವನ್ನೊಳಗೊಂಡ ಸ್ವತ್ತಿನ ವಿಸ್ತೀರ್ಣ 2700 ಚದರ ಅಡಿವುಳ್ಳ ಸ್ವತ್ತಿಗೆ ಸಂಬಂಧಿಸಿದ ಸಿ.ಐ.ಟಿ.ಬಿ ಯಿಂದ ನೀಡಲಾದ ಮೂಲ ಮಂಜೂರಾತಿ ಪತ್ರ ಮತ್ತು ಇತರೆ ಮೂಲ ದಾಖಲಾತಿಗಳು ಕಳೆದಿವೆ. ಈ ಸಂಬಂಧ ಮೈಸೂರಿನ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ದಿನಾಂಕ 08–06–2026ರಂದು GSC ಸಂಖ್ಯೆ: PO0044 260600121 ರಂತೆ ದೂರು ದಾಖಲಾಗಿರುತ್ತದೆ. ಮೇಲ್ಕಂಡ ಮೂಲ ದಾಖಲಾತಿಗಳು ಯಾರಿಗಾದರೂ ಸಿಕ್ಕಲ್ಲಿ, ಅವುಗಳನ್ನು ಈ ಕೆಳಕಂಡ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಹಿಂದಿರುಗಿಸಿದವರಿಗೆ ಸೂಕ್ತ ಬಹುಮಾನ ನೀಡಲಾಗುವುದು.
ಮೊ 9844640641 / 9900029797

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಸೇಲ್

UPTO 80% OFF

ಮಹಿಳೆಯರ ಬ್ರಾಂಡ್ ಬ್ರಾಗಳು, ಒಳ ಉಡುಪುಗಳು, ಜಾಕೆಟ್, ಫುಟ್‌ವೇರ್, ಶೇಪ್‌ವೇರ್ ನೈಟ್‌ವೇರ್ ಮತ್ತು ಟ್ರ್ಯಾಕ್‌ಪ್ಯಾಂಟ್

ಪುರುಷರ ಜೀನ್ಸ್ | ಶರ್ಟ್ ಟಿ-ಶರ್ಟ್ | ಕಾಟನ್ ಪ್ಯಾಂಟ್ | ಫಾರ್ಮಲ್ ಶರ್ಟ್

ಫಾರ್ಮಲ್ ಪ್ಯಾಂಟ್ ಮತ್ತು ಇನ್ನೂ ಮುಂತಾದ ಉಡುಪುಗಳು ದೊರೆಯುತ್ತವೆ

ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಜೆ.ಎಲ್.ಬಿ. ರಸ್ತೆ, ಮೈಸೂರು – 05 | TIME : 10 AM TO 10 PM

TVS HIRING

1. SALES MANAGER
2. PDI HELPER
3. SPARE EXECUTIVE
4. TECHNICIANS
5. SALES EXECUTIVE
6. NETWORK EXECUTIVE
7. SALES EXECUTIVE
8. JUNIOR ACCOUNTANT
9. DIRECT MARKETING EXECUTIVES
10. FRONT DESK EXECUTIVE
11. SERVICE ADVISORS
12. HELPER

Visit Us:
SONA MOTORS
JLB Road, Opp. CKC Convent, Lakshmipuram, Mysore
Call: 99020 21500

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ
ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ, ಮೈಸೂರು
ದೂ:0821–2333750 ಇ–ಮೇಲ್: Jdserimy@gmail.com
ಸಂ:ರೇಜಂನಿಮೈ:ಸಿ4:ವಾಹನ:ಹೊಗುಆ:17:2025–26 ದಿನಾಂಕ: 08.06.2026

ಟೆಂಡರ್ ಪ್ರಕಟಣೆ

ರೇಷ್ಮೆ ಜಂಟಿ ನಿರ್ದೇಶಕರ ಕಚೇರಿ ಮೈಸೂರು ಇಲ್ಲಿ ಖಾಲಿ ಇರುವ ಮಂಜೂರಾದ ವಾಹನ ಚಾಲಕರ ಹುದ್ದೆಗೆ ಎದುರಾಗಿ 2026–27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬರು ವಾಹನ ಚಾಲಕರ ಸೇವೆಯನ್ನು ಒದಗಿಸಲು ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ:01.7.2026 ರಿಂದ 31.03.2027ರ ಒದಗಿಸಿಕೊಡಲು ಅರ್ಹರಾಗಿರುವಂತಹ ಸಂಸ್ಥೆಗಳಿಂದ ಸ್ಪರ್ಧಾತ್ಮಕ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ವಿವರ: ❖ ರೇಷ್ಮೆ ಜಂಟಿ ನಿರ್ದೇಶಕರ ಕಚೇರಿ ಮೈಸೂರು ಇಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗೆ ಎದುರಾಗಿ ಒಬ್ಬರು ವಾಹನ ಚಾಲಕರು–01 ❖ ಸ್ಪರ್ಧಾತ್ಮಕ ದರಪಟ್ಟಿ ಹಾಗೂ ವಿವರಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 24.06.2026 ರಂದು ಮಧ್ಯಾಹ್ನ 2.00 ಗಂಟೆಯೊಳಗಾಗಿ ❖ ಸ್ಪರ್ಧಾತ್ಮಕ ದರಪಟ್ಟಿಗಳನ್ನು ತೆರೆಯುವ ದಿನಾಂಕ: 24.06.2026 ರ ಸಂಜೆ 4:00ಘಂಟೆಗೆ ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳಿಗೆ ಕಚೇರಿಯ ವೇಳೆಯಲ್ಲಿ ಈ ಕೆಳಸಹಿದಾರರನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ರೇಷ್ಮೆ ಜಂಟಿ ನಿರ್ದೇಶಕರು
DIPR/DDMYS/297/KSMCA/209/2026-27